ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-ಸಂಪುಟ:12 | ISSUE- ಸಂಚಿಕೆ: 352 | PAGE- ಪುಟ 8 | ಶುಕ್ರವಾರ 24.01.2025 ಬೀದರ | RS.ಬೆಲೆ 2/-

## ನೇತಾಜಿ ಭಾರತವನ್ನು ಸ್ವತಂತ್ರಗೊಳಿಸಲು ಹೋರಾಡಿದ ಅಪ್ರತಿಮ ದೇಶಭಕ್ತ: ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು:ಜ.23:ಭಾರತವನ್ನು ಬ್ರಿಟೀಷರ ಆಳ್ವಿಕೆಯಿಂದ ಮುಕ್ತಗೊಳಿಸಿ,ಭಾರತೀಯರೆಲ್ಲರೂ ಬ್ರಿಟೀಷರಗುಲಾಮಗಿರಿಯಿಂದ ಸ್ವತಂತ್ರರಾಗಬೇಕೆನ್ನುವುದುಎಂಬ ಹೆಗ್ಗುರಿಯಿಂದ ಹೋರಾಡಿದ ಸುಭಾಷ್ ಚಂದ್ರ ಬೋಸ್ ರವರು ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಅಪ್ರತಿಮ ದೇಶಭಕ್ತ ಎಂದು ಮುಖ್ಯಮಂತ್ರಿಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ನೇತಾಜಿ ಸುಭಾಷ್ ಚಂದ್ರಬೋಸ್ ಅವರ ಜನ್ಮದಿನದ ಅಂಗವಾಗಿ ಅವರ ಪ್ರತಿಮೆಗೆಮಾಲಾರ್ಪಣೆಮಾಡಿದ ನಂತರಮಾಧ್ಯಮದವರೊಂದಿಗೆ ಮಾತನಾಡಿದರು.

ಇಂದು ನೇತಾಜಿ ಸುಭಾಷ್ ಚಂದ್ರಬೋಸ್ ಅವರ 128 ನೇ ಜನ್ಮದಿನ. ದೇಶದ ಬಗ್ಗೆ ಅಪಾರ ಗೌರವಾಭಿಮಾನ ಹೊಂದಿದ್ದ ಮಹಾನ್ ದೇಶಭಕ್ತ. ಈಗಿನ ಐಎಎಸ್ ನಂತೆ ಬ್ರಿಟೀಷರ ಕಾಲದಲ್ಲಿದ್ದ ಐಸಿಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಆದರೆ ತಮ್ಮ ಉಜ್ವಲ ಭವಿಷ್ಯವನ್ನು ತ್ಯಾಗ ಮಾಡಿ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನು ಮೀಸಲಾಗಿಟ್ಟರು. ಎರಡು ಬಾರಿ ಕಾಂಗ್ರೆಸ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಮಹಾತ್ಮಾ ಗಾಂಧಿಯವರುಪ್ರತಿಪಾದಿಸುತ್ತಿದ್ದ ಸತ್ಯ ಹಾಗೂ ಅಹಿಂಸೆಯ ಮಾರ್ಗದಲ್ಲಿ ನಡೆದು ಭಾರತ

(2ನೇ ಪುಟ ನೋಡಿ)

## ಕರ್ಮವನ್ನು ನಂಬಿದವನು ನಾನು : ಜಿ.ಜನಾರ್ದನರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಜ. 23 ಎಲ್ಲರಿಗೂ ಒಂದಲ್ಲ ಒಂದು ದಿನ 'ಕಾಲೆಳೆಯುತ್ತೆ ಕಾಲ' ಎನ್ನುವ ಹಾಗೆ ನಾವು ಮಾಡಿದ ಕರ್ಮಗಳು ನಮ್ಮನ್ನು ಹಿಂಬಾಲಿಸುತ್ತವೆ. ನಾವು ಮಾಡಿದ ಕರ್ಮಕ್ಕೆ ಫಲ ಉಣ್ಣಲೇಬೇಕು. ವಿಧಿ ಇಲ್ಲ. ಇಂತಹ ಕರ್ಮಗಳಲ್ಲಿ ನಂಬಿಕೆ ಇಟ್ಟುಕೊಂಡವನು ನಾನು ಎಂದು ಗಂಗಾವತಿ ಶಾಸಕ ಜನಾರ್ಧನ ರೆಡ್ಡಿ ಹೇಳಿದರು.



ನಿನ್ನೆಯ ದಿನ ಬಿಜೆಪಿ ಕೋರ್ ಕಮಿಟಿಯಲ್ಲಿ ತಮಗಾದ ನೋವಿನ ಕುರಿತು ಮಾಧ್ಯಮದವರಲ್ಲಿ ಪ್ರತಿಕ್ರಿಯೆ ನೀಡುವಾಗ ಜನಾರ್ದನರೆಡ್ಡಿ ಅವರು ನನ್ನ ರಾಜಕೀಯ ಭವಿಷ್ಯ ಮುಗಿಸಲು ಬಂದಿದ್ದಾರೆ ಎನ್ನುವ ಬಿ.ಶ್ರೀರಾಮುಲು ಹೇಳಿಕೆಗೆ ಇಂದು ತಮ್ಮ ಪಾರಿಜಾತ ಅಪಾರ್ಟ್ಮೆಂಟ್ ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಶ್ರೀರಾಮುಲು ಪಕ್ಷ ಬಿಡುವುದಾದರೆ ಬಿಡಲಿ. ಬಿಡುವಾಗ ನನ್ನ ಹೆಸರು ಹೇಳಿ ಬಿಡುವುದು ಉಚಿತವಲ್ಲ. ನಾನು ಶ್ರೀರಾಮುಲು ಅವರನ್ನು ಮಗುವಿನಂತೆ ಕಾಪಿಟ್ಟುಕೊಂಡು ಬಂದಿದ್ದೇನೆ. ನಮ್ಮಿಬ್ಬರದು 40

(2ನೇ ಪುಟ ನೋಡಿ)

## ನನ್ನ ಮಾತೃ ಪಕ್ಷವನ್ನು ತೊರೆಯುವ ಪ್ರಶ್ನೆಯೇ ಇಲ್ಲ : ಬಿ.ಶ್ರೀರಾಮುಲು

ಬಳ್ಳಾರಿ:ಜ. 23 ಭಾರತೀಯ ಜನತಾ ಪಾರ್ಟಿ ನನಗೆ ಎಲ್ಲವನ್ನೂ ನೀಡಿದೆ. ನನ್ನ ಮಾತೃಪಕ್ಷವನ್ನು ತೊರೆಯುವ ಆಲೋಚನೆ ನನ್ನಲ್ಲಿಲ್ಲ. ಒಂದು ವೇಳೆ ಅಂಥ ಪರಿಸ್ಥಿತಿ ಬಂದರೆ ಕೇಂದ್ರ ವರಿಷ್ಠರ ಜೊತೆ ಚರ್ಚೆ ಮಾಡಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಕಾಂಗ್ರೆಸ್ ಪಕ್ಷ ಸೇರುವ ವದಂತಿಗಳಿಗೆ ತೆರೆ ಎಳೆದಿದ್ದಾರೆ.



ತಮ್ಮ ಗೃಹ ಕಚೇರಿಯಲ್ಲಿ ತಮ್ಮ ಬೆಂಬಲಿಗರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಅವರು, ಬುಧವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ನನಗೆ ಬೇಸರವಾಗಿದ್ದರಿಂದ ಆ ರೀತಿ ಹೇಳಿದ್ದೆ. ದಶಕಗಳ ಕಾಲ ನನಗೆ ಎಲ್ಲವನ್ನು ಕೊಟ್ಟು ಬೆಳೆಸಿದೆ. ಅಷ್ಟು ಬೇಗನೆ ನಾನು ತಾಯಿ-ಮಗನ ಸಂಬಂಧವನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಮ್ಮದು ರಾಜಕೀಯ ಹಿನ್ನೆಲೆ ಹೊಂದಿರುವ ಕುಟುಂಬ. 40 ವರ್ಷದಲ್ಲಿ ಅನೇಕ ಏಳು, ಬೀಳುಗಳನ್ನು ಕಂಡಿದ್ದೇನೆ. ರಾಜಕೀಯ ನನಗೆ ಹೊಸದಲ್ಲ. ನಾನು ಸ್ವಂತ ಶಕ್ತಿಯಿಂದ ಬೆಳೆದಿದ್ದೇನೆ. ನನ್ನ ಬೆನ್ನಿಗೆ ಕಾರ್ಯಕರ್ತರ ಪಡೆ ಇದೆ. ಗಾಲಿ ಜನಾರ್ಧನ ರೆಡ್ಡಿ ಸುಳ್ಳಿನ ಮೇಲೆ ಕೋಟೆಯನ್ನು ಕಟ್ಟಲು ಹೊರಟಿದ್ದಾರೆ. ಇದನ್ನು ಬಳ್ಳಾರಿ ಜನರು ನಂಬುವುದಿಲ್ಲ. ಬಳ್ಳಾರಿಯಲ್ಲಿ ದಬ್ಬಾಳಿಕೆ ಮಾಡುತ್ತಿದ್ದ ಕುಟುಂಬದವರ ವಿರುದ್ಧ ಬೀದಿಯಲ್ಲಿ ಹೋರಾಟ ನಡೆಸಿ ಬೆಳೆದಿದ್ದೇನೆ. ಪಕ್ಷವನ್ನು ಬೇರು ಮಟ್ಟದಿಂದ ಸಂಘಟಿಸಿದ್ದೇನೆ. ಹೀಗಾಗಿಯೇ ಪಕ್ಷ ನನ್ನನ್ನು ಗುರುತಿಸಿತ್ತು ಎಂದು ತಿಳಿಸಿದರು.

ಸಾಮಾನ್ಯನಾಗಿದ್ದ ನನ್ನನ್ನು ಬಿಜೆಪಿ ಗುರುತಿಸಿ ಬೆಳೆಸಿದೆ. ಏನೂ ಇಲ್ಲದಿದ್ದರೆ ನನಗೇಕೆ ಏಕಕಾಲದಲ್ಲಿ ಮೊಳಕಾಲ್ಮೂರು ಮತ್ತು ಬಾದಾಮಿಯಲ್ಲಿ ಟಿಕೆಟ್ ನೀಡುತ್ತಿತ್ತು? ಎಂದ ರಾಮುಲು

(2ನೇ ಪುಟ ನೋಡಿ)

## ಬೀದರ್ ಎಟಿಎಂ ದರೋಡೆ ; ಗಾಯಾಳು ಆರೋಗ್ಯ ವಿಚಾರಿಸಿದ ಸಚಿವರು



ಬೀದರ. ಜ. 23 : ಬೀದರ್‌ನಲ್ಲಿ ಎಟಿಎಮ್ ದರೋಡೆ ಪ್ರಕರಣದಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರಿರುವ ಸಿಬ್ಬಂದಿ ಶಿವಕುಮಾರ್ ಗುನ್ನಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ-ಯುತ್ತಿದ್ದಾರೆ. ಹೈದರಾಬಾದ್‌ನ ಕೇರ್ ಆಸ್ಪತ್ರೆಗೆ ಭೇಟಿ ನೀಡಿದ ಪೌರಾಡಳಿತ ಸಚಿವ ರಹೀಂ ಖಾನ್ ಗಾಯಾಳು ಶಿವಕುಮಾರ್ ಗುನ್ನಳ್ಳಿ ಆರೋಗ್ಯ ವಿಚಾರಿಸಿದರು.

ಮನೆಗೆ ಆಧಾರಸ್ತಂಭವಾಗಿದ್ದ ಶಿವಕುಮಾರ್‌ನೆ ಆಸ್ಪತ್ರೆ ಸೇರಿದ್ದಾನೆಂದು ಗಾಯಾಳು ಶಿವಕುಮಾರ್ ಕುಟುಂಬಸ್ಥರು ಸಚಿವರ ಎದುರು ಅಳಲು ತೋಡಿಕೊಂಡರು. ಸಚಿವ ರಹೀಂ ಖಾನ್ ಶಿವಕುಮಾರ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಇದೇ ವೇಳೆ

(2ನೇ ಪುಟ ನೋಡಿ)

## ಕೈಗಾರಿಕೆ ಸ್ಥಾಪನೆಗೆ ಧೈರ್ಯ, ಪರಿಶ್ರಮ ಮುಖ್ಯ : ಡಿಸಿ ಜಾನಕಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ : ಜ. 23 : ಉದ್ಯಮಿಗಳಿಗೆ ಬಾಗಲಕೋಟೆ ಜಿಲ್ಲೆ ಮುಕ್ತ ಅವಕಾಶವಿದ್ದು, ಕೈಗಾರಿಕೆಗಳ ಸ್ಥಾಪನೆಗೆ ಧೈರ್ಯ ಹಾಗೂ ಪರಿಶ್ರಮ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು. ಜಿಲ್ಲಾ ಕೈಗಾರಿಕಾ ಕೇಂದ್ರ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ವಿ.ಟಿ.ಪಿ.ಸಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಸಹಯೋಗದಲ್ಲಿ ಜಿಲ್ಲಾ ಪಂಚಾಯತ್ ನೂತನ ಸಭಾಭವನದಲ್ಲಿ ಗುರುವಾರ ಆಯೋಜಿಸಲಾಗಿದ್ದ ಲೀನ್ ಯೋಜನೆ, ಝಡ್.ಇ.ಡಿ ಹಾಗೂ ರಫ್ತು ಕುರಿತು ಅರಿವು ಮೂಡಿಸುವ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ, ಕಾಸಿಯಾ ಸಂಸ್ಥೆ ರಾಜ್ಯದ ವಿವಿಧ ಭಾಗಗಳಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಬೇಕಾದ ಬೆಂಬಲ ಮತ್ತು ಅರಿವು ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದು, ಬಾಗಲಕೋಟೆ ಕೃಷಿ ಆಧಾರಿತ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಬೆಳೆಸಲು ಸ್ಥಳೀಯರ ಸಹಕಾರ ಅಗತ್ಯವಾಗಿದೆ. ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಬೇಕಾದ ಹವಾಮಾನ ಹೊಂದಿದ್ದು, ಪರಿಶ್ರಮ ಮತ್ತು ಧೈರ್ಯ ಮುಖ್ಯವಾಗಿದೆ ಎಂದರು. ಬಾಗಲಕೋಟೆ ಯುನಿಯನ್ ಮರ್ಚಂಟ್ ಅಸೋಶಿಯೇಷನ್‌ದ ಅಧ್ಯಕ್ಷ ರವಿ ಕುಮಟಗಿ ಮಾತನಾಡಿ ಏಷ್ಯಾದಲ್ಲಿಯೇ ಮುಳುಗಡೆ ಹೊಂದಿದ ದೊಡ್ಡ ಪ್ರದೇಶ ಬಾಗಲಕೋಟೆ ಜಿಲ್ಲೆಯಾಗಿದ್ದು, ಮುಳುಗಡೆ ಹೊಂದಿದ

(2ನೇ ಪುಟ ನೋಡಿ)

## ವೈಜ್ಞಾನಿಕ, ವೈಚಾರಿಕ ಪ್ರಜ್ಞೆ ಇಂದಿನ ಯುವಕರಿಗೆ ಅಗತ್ಯ




ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ: ಇಂದಿನ ಯುವಕರಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆಯ ಪ್ರಜ್ಞೆ ಅಗತ್ಯವಾಗಿರಬೇಕಿದೆ ಎಂದು ಸಿವಿಲ್ ನ್ಯಾಯಧೀಶ ಪ್ರಶಾಂತ್ ನಾಗಲಾಪುರ್ ಹೇಳಿದರು.

ನಗರದ ಎಪಿಎಂಸಿ ಆವರಣದಲ್ಲಿನ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರ ಬಾಲಕರ ತಾಂತ್ರಿಕ ವಿದ್ಯಾರ್ಥಿ ನಿಲಯದಲ್ಲಿ ತಾಲೂಕು ಕಾನೂನುಗಳ ಸೇವಾ ಸಮಿತಿ, ವಕೀಲರ ಸಂಘ ಸೇರಿ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆಯನ್ನು ಉದ್ಘಾಟಿಸಿ ಬುಧವಾರ ಮಾತನಾಡಿದರು, ಭಾರತ ಸದೃಢವಾಗಲು ಯುವಕರಲ್ಲಿ ನೈತಿಕ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡಬೇಕಿದೆ. ಯುವಕರು ದೇಶದ ಸಂವಿಧಾನದ ಆಶಯಗಳನ್ನು ಅರಿಯಬೇಕು. ಎಲ್ಲಾರಿಗೂ ಸಮಾನತೆ, ಶಿಕ್ಷಣ, ಕಾನೂನು ಸಲಹೆ, ಮೂಲಭೂತ ಸೌಕರ್ಯಗಳು ಉಚಿತವಾಗಿ ಸಿಗುವಂತಾಗಬೇಕಿದೆ. ಪ್ರತಿಯೊಬ್ಬರಿಗೂ ಸಂವಿಧಾನಿಕ ಪ್ರಜ್ಞೆಯನ್ನು ವೃದ್ಧಿಸುವಲ್ಲಿ

(2ನೇ ಪುಟ ನೋಡಿ)

## ಅಧಿಕಾರಿಗಳು ರೈತರ ಹಾಗೂ ಗ್ರಾಹಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲಿ:ಇಂಧನ ಸಚಿವ ಕೆ.ಜೆ.ಜಾರ್ಜ್




ಮಲ್ಲಮ್ಮ ನುಡಿ ವಾರ್ತೆ

ಬೀದರ ಜ.23: ರೈತರ ಟ್ರಾನ್ಸಫಾರ್ಮರ್ ರಿಪೇರಿ, ಸಾಗಾಟ, ವಿದ್ಯುತ್ ತಂತಿ/ ಕಂಬ ದುರಸ್ತಿ ಸಂಪರ್ಕ ಸೇರಿದಂತೆ ವಿವಿಧ ವಿದ್ಯುತ್ ಸಮಸ್ಯೆಗಳಿಗೆ ಅಧಿಕಾರಿಗಳು ತತಕ್ಷಣ ಸ್ಪಂಧಿಸಿ ಸಮಸ್ಯೆ ಪರಿಹರಿಸಬೇಕೆಂದು ಇಂಧನ ಸಚಿವರಾದ ಕೆ.ಜೆ.ಜಾರ್ಜ್ ಜೇಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ ಸಭಾ ಭವನದಲ್ಲಿ ಜರುಗಿದ ಇಂಧನ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಳೆದ ವರ್ಷ ಬರಗಾಲವಿದ್ದರೂ ಬೇಸಿಗೆಯಲ್ಲಿ ಸಹ ಯಾವುದೇ ರೀತಿಯ ತೊಂದರೆಯಾಗದಂತೆ ಸಮರ್ಪಕವಾಗಿ ವಿದ್ಯುತ್ ಪೂರೈಸಲಾಗಿದ್ದು, ಈ ಬಾರಿ ಸಹ ಗ್ರಾಹಕರಿಗೆ ವಿದ್ಯುತ್ ಪೂರೈಸಲು ಇಲಾಖೆಯು ಸನ್ನದ್ಧವಾಗಿದೆ. ವಿದ್ಯುತ್ ಸಂಬಂಧಿಸಿದಂತೆ ಕೆಲ ತಾಂತ್ರಿಕ ದೋಷಗಳು ಆದಾಗ ಕಂಡುಬರುತ್ತಿರುವುದರಿಂದ ಕೆಲವೊಮ್ಮೆ ಸಮಸ್ಯೆಗಳ ನಿವಾರಣೆಗೆ ಸಮಯಬೇಕಾಗುತ್ತದೆ.


(2ನೇ ಪುಟ ನೋಡಿ)

## ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಿರು ಪುಸ್ತಕ, ಮೈಕ್ರೋ ಝರಾಕ್ಸ್ ಮಾರಾಟ ನಿಷೇಧಿಸಿ ಆದೇಶ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.23:ಎಸ್.ಎಸ್.ಎಲ್.ಸಿ. ಪರೀಕ್ಷೆ-2025ಕ್ಕೆ ಸಂಬಂಧಿಸಿದಂತೆ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುವಂತೆ 10ನೇ ತರಗತಿಗೆ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಿರು ಪುಸ್ತಕಗಳನ್ನು ಹಾಗೂ ಮೈಕ್ರೋ ಝರಾಕ್ಸ್‌ಗಳನ್ನು ಮಾರಾಟ ಮಾಡುವುದು, ಖರೀದಿ ಮಾಡುವುದು ಹಾಗೂ ಶಾಲಾ ಆವರಣದಲ್ಲಿ ಬಳಸುವುದನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸಂಪೂರ್ಣವಾಗಿ ನಿಷೇಧಿಸಿ ಕಲಬುರಗಿ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಡಾ. ಆಕಾಶ ಎಸ್. ಅವರು ಮಂಗಳವಾರ ಸುತ್ತೋಲೆ ಹೊರಡಿಸಿದ್ದು, ಕಲಬುರಗಿ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಅವರು ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಅವರು ಸೂಚಿಸಿದ್ದಾರೆ.

ಎಸ್.ಎಸ್.ಎಲ್.ಸಿ. ಪರೀ-ಕ್ಷೆಗೆಂದು ಕಿರು ಪುಸ್ತಕಗಳನ್ನು ಹಾಗೂ ಮೈಕ್ರೋ ಬುಕ್ ಮತ್ತು ಮೈಕ್ರೋ ಝರಾಕ್ಸ್‌ಗಳನ್ನು ವಿದ್ಯಾರ್ಥಿಗಳು, ಶಾಲೆಯಲ್ಲಿ ಬಳಸುವುದನ್ನು ಗಮನಿಸಲಾಗಿದೆ. ಕಿರು ಪುಸ್ತಕಗಳ ಮುದ್ರಣ ಮಾಡುವುದು, ಮಾರಾಟ ಮಾಡುವುದು, ಖರೀದಿ ಮಾಡುವುದು ಹಾಗೂ ಬಳಕೆ ಮಾಡುವುದು ಕಾನೂನು ಬಾಹಿರವಾಗಿದ್ದು, ಇಂತಹ ನಿಯಮ ಬಾಹಿರ ಕ್ರಮ ಅನುಸರಿಸಿದ್ದಲ್ಲಿ ಹಾಗೂ ಇಂತಹ ಪ್ರಸಂಗಗಳು ಕಂಡುಬಂದಲ್ಲಿ ದಿನಾಂಕ: 18-03-2020ರ ಸರ್ಕಾರದ ಆದೇಶದಂತೆ, ಸಂಬಂಧಿಸಿದ ಮುಖ್ಯಶಿಕ್ಷಕರು/ ಶಿಕ್ಷಕರ ಮೇಲೆ ಕಡ್ಡಾಯವಾಗಿ ನಿಯಮಾನುಸಾರ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗುತ್ತದೆ. ಇದಲ್ಲದೆ ಬೆಂಗಳೂರಿನ




ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ದಿನಾಂಕ: 03-10-2024ರ ಸುತ್ತೋಲೆಯಂತೆ ಇಲಾಖೆಯಿಂದ ನೀಡಲಾದ ಪಠ್ಯ ಪುಸ್ತಕಗಳನ್ನೇ ಕಡ್ಡಾಯವಾಗಿ ಅನುಸರಿಸಬೇಕು. ಅಲ್ಲದೇ ಯಾವುದೇ ಇತರೆ ಪಠ್ಯ ಪುಸ್ತಕಗಳನ್ನು ಅನುಸರಿಸುವಂತಿಲ್ಲ ಎಂದು ತಿಳಿಸಲಾಗಿದೆ.

ಎಸ್.ಎಸ್.ಎಲ್.ಸಿ. ಪರೀ-ಕ್ಷೆಯು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ಒಂದು ಅತ್ಯಂತ ಪ್ರಮುಖ ಘಟ್ಟವಾಗಿರುತ್ತದೆ. ಈ ಪರೀಕ್ಷೆಯನ್ನು ಯಾವುದೇ ಅವ್ಯವಹಾರ ಆಗದಂತೆ ಪಾರದರ್ಶಕವಾಗಿ ಮತ್ತು ಸುವ್ಯವಸ್ಥಿತವಾಗಿ ನಡೆಸಲು ಪರೀಕ್ಷಾ ಮಂಡಳಿಯು ಎಲ್ಲಾ ರೀತಿಯ ಅಗತ್ಯಪೂರ್ವ ಸಿದ್ಧತಾ ಕ್ರಮಗಳನ್ನು ಕೈಗೊಳ್ಳಲಿದೆ. ಪರೀಕ್ಷಾ ಅಕ್ರಮಗಳಾದ ಪರೀಕ್ಷಾ ಸಮಯದಲ್ಲಿ ಪ್ರಶ್ನೆ ಪತ್ರಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದು, ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಮಾಡಲು ಪ್ರಯತ್ನಪಡುವುದು, ಈ ತರಹದ ಕಾನೂನು ಬಾಹಿರ ಕೃತ್ಯಗಳನ್ನು ನಡೆಸಲು ಪ್ರಯತ್ನಿಸುವ ಮೂಲಕ ವಿದ್ಯಾರ್ಥಿ /ಪೋಷಕರಲ್ಲಿ ಗೊಂದಲವುಂಟು ಮಾಡುವುದು ಮತ್ತು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವುದು ಪರೀಕ್ಷಾ ಅಕ್ರಮಗಳಲ್ಲಿ ಪಾಲ್ಗೊಳ್ಳುವವರ ಉದ್ದೇಶವಾಗಿದೆ. ಇಂತಹ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಇಲಾಖೆಯು ಅತ್ಯಂತ ಗಂಭೀರವಾಗಿ ಪರಿಗಣಿಸಲೇಬೇಕಾಗುತ್ತದೆ.

ಕಾನೂನು ಬಾಹಿರವಾಗಿ ಪರೀಕ್ಷಾ ಅಕ್ರಮಗಳಲ್ಲಿ ಪಾಲ್ಗೊಳ್ಳುವವರು ಮತ್ತು ಇದಕ್ಕೆ ಸಹಕರಿಸುವವರು / ಪ್ರಚೋದಿಸುವವರು ವಿದ್ಯಾರ್ಥಿಗಳಾಗಿರಲಿ / ಶಿಕ್ಷಕರಾಗಿರಲಿ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

## ತಕ್ಷಣ ಸ್ಪಂದಿಸಲಿ:ಇಂಧನ ಸಚಿವ ಕೆ.ಜೆ.ಜಾರ್ಜ್

ಅಧಿಕಾರಿಗಳು ಸ್ಥಳೀಯ ಜನಪ್ರತಿನಿಧಿಗಳನ್ನು ಭೇಟಿಯಾಗಿ ಸಮಸ್ಯೆಗಳನ್ನು ಚರ್ಚಿಸಿ ಪರಿಹರಿಸಬೇಕೆಂದು ತಿಳಿಸಿದರು.

ರಾಜ್ಯದಲ್ಲಿ ಸಧ್ಯ ದಿನಕ್ಕೆ 16 ರಿಂದ 17 ಸಾವಿರ ಮೆಗಾವ್ಯಾಟ್ ವಿದ್ಯುತ್ ಬೇಡಿಕೆಯಿದೆ. ಈ ವರ್ಷ ಯಾವುದೇ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ. ಬೇಸಿಗೆಯಲ್ಲಿ ಬೇಡಿಕೆ ಹೆಚ್ಚಾದರೆ ವಿದ್ಯುತ್ ಖರೀದಿಗೂ ಸಹ ಸಿದ್ಧವಾಗಿದ್ದೇವೆಂದರು. ಲೈ???ಮೆ???ಗಳ ಕೊರತೆ ನಿಗಿಸಲು ಏಪ್ರಿಲ್ ಅಂತ್ಯದೊಳಗೆ 3 ಸಾವಿರ ಲೈ???ಮೆನಗಳನ್ನು ನೇಮಕ ಮಾಡಲಾಗುವುದು ಎಂದರು.

ಅಕ್ರಮ–ಸಕ್ರಮ ಸಮಸ್ಯೆಯನ್ನು ಸಹ ಶೀಘ್ರವೇ ಪರಿಹರಿಸಲಾಗುವುದೆಂದ ಅವರು ಬೀದರ ಜಿಲ್ಲೆಯಲ್ಲಿ ಒಟ್ಟು 1480 ಪ್ರಕರಣಗಳಿದ್ದು ಕ್ಯಾಬಿನೆ???ನಲ್ಲಿ ರಾಜ್ಯದ ಈ ಸಮಸ್ಯೆ ಚರ್ಚಿಸಲಾಗುವುದೆಂದು ಸಚಿವರು ತಿಳಿಸಿದರು.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಮಾತನಾಡಿ, ಜಿಲ್ಲೆಯಲ್ಲಿ ವಿದ್ಯುತ್ ಅವಘಡದಲ್ಲಿ ಮರಣ ಹೊಂದಿದ 9 ಜನರ ಕುಟುಂಬಕ್ಕೆ ಈವರೆಗೂ ಪರಿಹಾರ ನೀಡಿದ ಕುರಿತು ಸಚಿವರಾದ ಕೆ.ಜೆ.ಜಾರ್ಜ್ ಸಮ್ಮುಖದಲ್ಲಿಯೇ ಅಧಿಕಾರಿಗಳನ್ನು ಕೇಳಿದರು. 3 ದಿನದೊಳಗಾಗಿ ಪರಿಹಾರ ತಲುಪಿಸುವಂತೆ ಕೆ.ಜೆ.ಜಾರ್ಜ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ 13 ಉಪ ಕೇಂದ್ರಗಳ ಸ್ಥಾಪನೆಗೆ ಜಾಗದ ಸಮಸ್ಯೆಗಳಿದ್ದಲ್ಲಿ ಸ್ಥಳೀಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಅಧಿಕಾರಿಗಳು ತಕ್ಷಣ ಕಾರ್ಯ ಪ್ರವೃತ್ತರಾಗುವಂತೆ ಈಶ್ವರ ಬಿ.ಖಂಡ್ರೆ ಸೂಚಿಸಿದರು.

ಅಪಾಯಕಾರಿ ವಿದ್ಯುತ್ ತಂತಿ ಹಾಗೂ ಕಂಬಗಳ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಹಲವಾರು ತಿಂಗಳ ಹಿಂದೆ ಹೇಳಲಾಗಿದೆ. ಅಧಿಕಾರಿಗಳು ನಿರ್ಲಕ್ಷ ತೋರದೆ ಒಟ್ಟು ಅಪಾಯಕಾರಿ ಸ್ಥಿತಿಗತಿ ವರದಿ ನೀಡುವಂತೆ ಹಾಗೂ ತುರ್ತು ಅಗತ್ಯವಿದ್ದಲ್ಲಿ ತಕ್ಷಣವೇ ಕಂಬ/ತಂತಿ ಸರಿಪಡಿಸುವಂತೆ ಸೂಚಿಸಿದರು.

ಗಡಿ ಭಾಗದಲ್ಲಿ ಹಾಗೂ ಇತರೆಡೆ ಅನಧಿಕೃತ ಬಡಾವಣೆಗಳು ನಿರ್ಮಾಣಗೊಂಡಿವೆ. ಅವರಿಗೂ ಸಹ ವಿದ್ಯುತ್ ಸಂಪರ್ಕ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಂಸದರಾದ ಸಾಗರ ಈಶ್ವರ ಖಂಡ್ರೆ ಅವರು ಮಾತನಾಡಿ, ಭಾಲ್ಕಿ ಸುತ್ತಲಿನ ಕೆಲ ಗ್ರಾಮಸ್ಥರು ಅಹವಾಲು ಟಿಸಿ ಬದಲಾವಣೆಗೆ ಹಾಗೂ ವಾಹನ ಸಾಗಾಟಕ್ಕೆ ಅಧಿಕಾರಿಗಳು ತೀರ ವಿಳಂಭ ಅನುಸರಿಸುತ್ತಿದ್ದು ಗ್ರಾಮಸ್ಥರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಸ್ಪಂದಿಸಲಿ ಎಂದರು.

ಈ ಸಂದರ್ಭದಲ್ಲಿ ಬಸವಕಲ್ಯಾಣ ಶಾಸಕರಾದ ಶರಣು ಸಲಗರ, ಹುಮನಾಬಾದ ಶಾಸಕರಾದ ಡಾ.ಸಿದ್ದಲಿಂಗಪ್ಪ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ ಪಾಟೀಲ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ನಾರಾಯಣರಾವ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಾದ ಪಂಕಜಕುಮಾರ ಪಾಂಡೆ, ಜೇಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ರವೀಂದ್ರ ಕರಿಂಗಣ್ಣನವರ, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ.ಗಿರೀಶ ಬದೋಲೆ, ಕೆಪಿಟಿಸಿಎಲ್ ಮುಖ್ಯ ಅಭಿಯಂತರಾದ ಪ್ರಕಾಶ ಬಿ., ಜೇಸ್ಕಾಂ ಮುಖ್ಯ ಅಭಿಯಂತರಾದ ವೆಂಕಟೇಶ ಅಳ್ಳೆ, ಜೇಸ್ಕಾಂ ಅಧೀಕ್ಷಕ ಅಭಿಯಂತರರಾದ ವೀರಭದ್ರ, ಕೆಪಿಟಿಸಿಎಲ್ ಚಂದ್ರಕಾಂತ ಪಾಟೀಲ ಸೇರಿದಂತೆ ಇಲಾಖೆಯ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೈಕ್ರೋ ಝೆರಾಕ್ಸ್ ಮಾರಾಟ ನಿಷೇಧಿಸಿ ಆದೇಶ

/ಬಾಹ್ಯವ್ಯಕ್ತಿಗಳಾಗಿರಲಿ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕಾನೂನಿನಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ಕಟ್ಟುನಿಟ್ಟಿನ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಪರೀಕ್ಷಾ ಅಕ್ರಮದಲ್ಲಿ ಪಾಲ್ಗೊಳ್ಳುವ ಸರ್ಕಾರಿ ಹಾಗೂ ಅನುದಾನಿತ/ಅನುದಾನರಹಿತ ಶಾಲೆಯ ಮತ್ತು ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರ ವಿರುದ್ಧ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ ಸೇವೆಯಿಂದ ವಜಾಗೊಳಿಸುವಂತಹ ದಂಡನೆ ವಿಧಿಸಲು ಈಗಾಗಲೇ ಸರ್ಕಾರ ಆದೇಶಿಸಿದೆ.

ಇದಲ್ಲದೇ, ಕರ್ನಾಟಕ ಶಿಕ್ಷಣ ಕಾಯ್ದೆ, ಏಚಿಡಿಟಿಚಿಣಚಿಞಚಿ ಂಭಿಣ ಓಂ.18 ಂಜಿ 2017 ಖಿಜ ಏಚಿಡಿಟಿಚಿಣಚಿಞಚಿ ಇಜಣಭಿಚಿಣಟಂಟ (ಂಟಜಟಿಜಟಜಟಣ) ಂಭಿಣ, 2017ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪ್ರಶ್ನೆಪತ್ರಿಕೆಯ ಫೋಟೊ ತೆಗೆಯುವುದು ಮತ್ತು ಪ್ರಶ್ನೆ ಪತ್ರಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ/ವಾಟ್ಸಾಪ್ ಮುಖಾಂತರ ಹರಿಬಿಡುವುದು, ಪರೀಕ್ಷಾ ಕೇಂದ್ರಗಳಲ್ಲಿ ಚೀಟಿಗಳನ್ನು ಸರಬರಾಜು ಮಾಡುವುದು ಇನ್ನಿತರ ಯಾವುದೇ ಪರೀಕ್ಷಾ ಅವ್ಯವಹಾರದ ಅಪರಾಧಕೃತ್ಯದಲ್ಲಿ ಭಾಗಿಯಾದವರಿಗೆ 3 ರಿಂದ 5 ವರ್ಷ ಜೈಲು ಹಾಗೂ ಐದು ಲಕ್ಷ ರೂ. ದಂಡ ವಿಧಿಸುವ ಅವಕಾಶವಿರುತ್ತದೆ.

ಕಲಬುರಗಿ ವಿಭಾಗದಲ್ಲಿ ಕಳೆದ ಸಾಲಿನಿಂದ ಪರೀಕ್ಷೆಗಳಲ್ಲಿ ಅಕ್ರಮಗಳನ್ನು ತಡೆಗಟ್ಟಲು ಹಲವಾರು ನವೀನ ಪ್ರಯೋಗಗಳನ್ನು ಜಾರಿಗೆ ತರಲಾಗಿದೆ. ಅದರಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆ ಹಾಗೂ ವೆಬ್ ಕಾಸ್ಟಿಂಗ್ ಮುಂತಾದ ಪ್ರಯೋಗಗಳ ಮೂಲಕ ಪರೀಕ್ಷಾ ಅಕ್ರಮಗಳನ್ನು ನಿಯಂತ್ರಣದಲ್ಲಿ ತರಲಾಗುತ್ತಿದೆ. ಕಲಬುರಗಿ ವಿಭಾಗದಲ್ಲಿನ ಎಸ್.ಎಸ್.ಎಲ್.ಸಿ ಫಲಿತಾಂಶವು ರಾಜ್ಯದ ಇತರೆ ವಿಭಾಗಗಳು ಹಾಗೂ ಜಿಲ್ಲೆಗಳಿಗೆ ಹೋಲಿಸಿದಲ್ಲಿ ಕುಂಠಿತಗೊಂಡಿರುವುದು ಸರಿಯಷ್ಟೆ. ಕಾರಣ, ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಿ ಫಲಿತಾಂಶ ಸುಧಾರಣೆಗೆ ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಚಟುವಟಿಕೆಗಳನ್ನು ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.


ತಾಲ್ಲೂಕ ಪಂಚಾಯತ ಬಸವಕಲ್ಯಾಣ

**ಗ್ರಾಮ ಪಂಚಾಯತ ಕಾರ್ಯಾಲಯ, ಮೋರಖಂಡಿ ತಾ.ಬಸವಕಲ್ಯಾಣ**

ಸಂಖ್ಯೆ:ಗ್ರಾಪಂ.ಮೋರ:ಉಖಾಯೋ:ದಪಪ್ರ:2024–25 ದಿನಾಂಕ : 23.01.2025

**ದರಪಟ್ಟಿಗಳ ಅಹ್ವಾನ**

ವಿಷಯ :– ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾಗುವ ವಿವಿಧ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಕೆ ಮಾಡುವುದಕ್ಕಾಗಿ ದರಪಟ್ಟಿ ಪ್ರಕಟಣೆ ಮಾಡುವ ಕುರಿತು.

ಉಲ್ಲೇಖ :–1) ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು ಇವರ ಆದೇಶ ಸಂಖ್ಯೆ:RDC-EGS/988/2022(E-970872) ದಿನಾಂಕ : 17.05.2023.

2) ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ.ಸಿ–ಇ.ಜಿ.ಎಸ್/988/2022 ಬೆಂಗಳೂರು ದಿನಾಂಕ : 16.05.2023.

* * * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾಗುವ ವಿವಿಧ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಕೆ ಮಾಡುವುದಕ್ಕಾಗಿ ದರಪಟ್ಟಿ ಪ್ರಕಟಣೆ.

1) ದರಪಟ್ಟಿಗಳ ಆಹ್ವಾನ : ಗ್ರಾಮ ಪಂಚಾಯಿತಿ **ಮೋರಖಂಡಿ** ವತಿಯಿಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಖಾತ್ರಿ ಯೋಜನೆಯ ಕ್ರೀಯಾ ಯೋಜನೆಗಳಡಿ ಅನುಮೋದನೆಯಾದ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾಗುವ ವಿವಿಧ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಕೆ ಮಾಡುವುದಕ್ಕಾಗಿ ದರ ಪಟ್ಟಿ ಪ್ರಕಟಣೆ ಮಾಡಿ ಅರ್ಹ ದರಪಟ್ಟಿದಾರರಿಂದ (ಸರಬರಾಜುದಾರರು / ಏಜೆನ್ಸಿಯವರು / ಮಾರಾಟಗಾರರು / ಅರ್ಹ ಸಂಸ್ಥೆಯವರು ಇತ್ಯಾದಿ) ದರಪಟ್ಟಿಗಳನ್ನು ಪ್ರಕಟಣೆಯ ಅನುಬಂಧ–1 ರಲ್ಲಿ ದಾಖಲಿಸಲಾದ ಕಾಮಗಾರಿವಾರು ಸಾಮಗ್ರಿಗಳಿಗಾಗಿ ಮೊಹರು ಮಾಡಿದ ಲಕೋಟೆಗಳಲ್ಲಿ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ.

2) ದರಪಟ್ಟಿ ಪ್ರಕ್ರೀಯೆಯ ವೇಳಾಪಟ್ಟಿ :

| ಕ್ರ. ಸಂ. | ವಿವರ | ನಿಗಧಿಪಡಿಸಿದ ದಿನಾಂಕ | ಷರಾ |
|---|---|---|---|
| 01 | ದರಪಟ್ಟಿ ಫಾರ್ಮ ಮತ್ತು ಡಾಕ್ಯೂಮೆಂಟ್ ವಿತರಿಸುವ ದಿನಾಂಕ ಮತ್ತು ಸಮಯ | 23.01.2025 ದಿನಾಂಕದಿಂದ 24.01.2025 ರ ವರೆಗೆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಮತ್ತು ಕಛೇರಿ ವೇಳೆಯಲ್ಲಿ | |
| 02 | ದರಪಟ್ಟಿದಾರರ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ | ದಿನಾಂಕ : 23.01.2025 ರಂದು ಸಮಯ : ಬೆಳಿಗೆ 11.00 ಗಂಟೆಗೆ, ಗ್ರಾಮ ಪಂಚಾಯಿತಿ ಕಛೇರಿಯಲ್ಲಿ | |
| 03 | ಮೊಹರು ಮಾಡಿದ ದರಪಟ್ಟಿ ಫಾರ್ಮ ಮತ್ತು ಇತರೆ ದಾಖಲೆಗಳನ್ನು ಸ್ವೀಕರಿಸುವ ದಿನಾಂಕ ಮತ್ತು ಸಮಯ | ದಿನಾಂಕ : 27.01.2025 ರಂದು ಸಮಯ : ಬೆಳಿಗ್ಗೆ 11.00 ಗಂಟೆಯಿಂದ ಅಪರಾಹ್ನ 2.00 ಗಂಟೆಯವರೆಗೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ | |
| 04 | ಮೊಹರು ಮಾಡಿದ ದರಪಟ್ಟಿ ಲಕೋಟೆ ತೆರೆಯುವ ಸ್ಥಳ, ದಿನಾಂಕ ಮತ್ತು ಸಮಯ | ಹಾಜರಿರುವ ದರಪಟ್ಟಿದಾರರ ಸಮ್ಮುಖದಲ್ಲಿ ದಿನಾಂಕ : 27.01.2025 ರಂದು ಸಮಯ : ಅಪರಾಹ್ನ 3.00 ಗಂಟೆಗೆ, ಗ್ರಾಮ ಪಂಚಾಯಿತಿ ಕಛೇರಿಯಲ್ಲಿ | |

| ಕ್ರ. ಸಂ. | ಕಾಮಗಾರಿಗಳ ವಿವರ | ಪ್ರಮಾಣ | ಸಾಮಗ್ರಿ ಮೊತ್ತ |
|---|---|---|---|
| 1 | Const. of CC Drain from Kishan Jadhav House to Venkat Jadhav House at Talbhog | ಅಂದಾಜು ಪತ್ರಿಕೆಯಲ್ಲಿ ಇದ್ದಂತೆ | 227585 |
| 2 | Const. of CC Drain from Kamala Metre House to Samudaya Bhavan at Talbhog | ಅಂದಾಜು ಪತ್ರಿಕೆಯಲ್ಲಿ ಇದ್ದಂತೆ | 80569 |
| 3 | Const. of CC Drain from Kishan Jadhav House to Devidas House at Talbhog | ಅಂದಾಜು ಪತ್ರಿಕೆಯಲ್ಲಿ ಇದ್ದಂತೆ | 396752 |

ದರಪಟ್ಟಿಗೆ ಸಂಬಂಧಿಸಿದಂತೆ, ಯಾವುದೇ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ. ದರಪಟ್ಟಿಯನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರಿ ಗ್ರಾಮ ಪಂಚಾಯಿತಿಯದ್ದಾಗಿರುತ್ತದೆ ಹಾಗೂ ಈ ದರಪಟ್ಟಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

ಸಹಿ/– ಅಧ್ಯಕ್ಷರು
ಗ್ರಾಮ ಪಂಚಾಯಿತಿ, ಮೋರಖಂಡಿ

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ, ಮೋರಖಂಡಿ


## ಆರೋಗ್ಯ ವಿಚಾರಿಸಿದ ಸಚಿವರು

ಸಚಿವರು ಸಿಎಂ ಜೊತೆ ಮಾತನಾಡಿ ಸರ್ಕಾರದಿಂದ ಪರಿಹಾರ, ಸರ್ಕಾರಿ ನೌಕರಿ ಭರವಸೆ ನೀಡಿದರು. ಕಳೆದ ಜ.16 ರಂದು ಹಾಡಹಗಲೇ ನಡೆದಿದ್ದ ರಾಬರಿ ಪ್ರಕರಣದಲ್ಲಿ ದರೋಡೆಕೋರರ ಗುಂಡೇಟು ತಿಂದು ಶಿವಕುಮಾರ್ ಗುನ್ನಳ್ಳಿ ಆಸ್ಪತ್ರೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇನ್ನೊಂದಡೆ ಅಮಿತ್ ಮತ್ತು ಮನೀಶ್ ಪತ್ತೆಗೆ ಪೊಲೀಸರು ಕಾರ್ಯಾಚರಣೆಯನ್ನು ಚುರುಕುಗೊಳಿಸಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಕೊಡಿಸುವ ಜವಾಬ್ದಾರಿ ಜೊತೆಗೆ ಕಾನೂನು ಸುವ್ಯವಸ್ಥೆ ಕಾಪಾಡಲು ಬದ್ಧವಾಗಿರಲು ಅವರು ಜಂಟಿ ಕಾರ್ಯಾಚರಣೆಗೆ ಮುಂದಾಗಿದ್ದಾರೆ. ವಿವಿಧ ರಾಜ್ಯದಲ್ಲಿ ಆರೋಪಿಗಳ ಚಲನವಲನದ ಮೇಲೆ ಕಣ್ಣಿಡಲು ಮುಂದಾಗಿದ್ದು, ಇದಕ್ಕಾಗಿ ತೀವ್ರ ಶೋಧ ನಡೆದಿದೆ.

## ಅಪ್ರತಿಮ ದೇಶಭಕ್ತ: ಮುಖ್ಯಮಂತ್ರಿ ಸಿದ್ದರಾಮಯ್ಯ

ಸ್ವಾತಂತ್ರ್ಯ ಹೊಂದುವುದು ಕಷ್ಟಸಾಧ್ಯ ಎಂಬುದು ಸುಭಾಷರ ಅಭಿಪ್ರಾಯವಾಗಿತ್ತು. ಆದ್ದರಿಂದ ಶಸ್ತ್ರಾಸ್ತ್ರಗಳನ್ನು ಬಳಸಿಯೇ ಬ್ರಿಟೀಷರನ್ನು ಭಾರತದಿಂದ ಹೊರದೂಡುವ ಉದ್ದೇಶದಿಂದ ಐಎನ್‌ಎ (ಇಂಡಿಯನ್ ನ್ಯಾಷನಲ್ ಆರ್ಮಿ)ಯನ್ನು ಸ್ಥಾಪಿಸಿದರು. ನೇತಾಜಿ ಸುಭಾಷ್ ಚಂದ್ರಬೋಸರ ಜನ್ಮದಿಂದು ಅವರ ಜೀವನ–ಸಾಧನೆಗಳನ್ನು ಸ್ಮರಿಸುವ ಜೊತೆಗೆ ಅವರ ಆದರ್ಶಗಳ ಹಾದಿಯಲ್ಲಿ ನಡೆಯುವ ಸಂಕಲ್ಪ ಮಾಡಬೇಕಿದೆ. ಈ ದಿಸೆಯಲ್ಲಿ ಸರ್ಕಾರ ಈ ಮಹಾನ್ ನಾಯಕನಿಗೆ ಗೌರವ ಸಲ್ಲಿಸಿದೆ ಎಂದರು.

ದಾವೋಸ್ ಶೃಂಗಸಭೆಯಲ್ಲಿ ಭಾಗವಹಿಸುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಸಾಲಿನ ಆಯವ್ಯಯದ ಸಿದ್ಧತೆಯಲ್ಲಿ ತೊಡಗಿಕೊಳ್ಳ ಬೇಕಾಗಿರುವುದರಿಂದ 2025ರ ದಾವೋಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೇರಿದಂತೆ ಇತರೆ ಗಣ್ಯರು ಉಪಸ್ಥಿತರಿದ್ದರು.

## ಪ್ರಶ್ನೆಯೇ ಇಲ್ಲ : ಬಿ.ಶ್ರೀರಾಮುಲು

ತಮ್ಮ ಶಕ್ತಿ ಏನೆಂಬುವುದು ಬಿಜೆಪಿಗೆ ಗೊತ್ತಿದೆ. ನನಗೆ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ ಅವರೊಂದಿಗೂ ಸಂಪರ್ಕವಿದೆ. ಒಂದು ತಳ ಸಮುದಾಯದಿಂದ ಬಂದ ನಾನು ಸ್ವಂತ ಪರಿಶ್ರಮದಿಂದ ಬೆಳೆದಿದ್ದೇನೆ. ರೆಡ್ಡಿ ಆಧಾರ ರಹಿತ ಆರೋಪ ಮಾಡಿದರೆ ಅದನ್ನು ಕೇಳಲು ನಾನೇನು ಚಿಕ್ಕ ಮಗುವಲ್ಲ ಎಂದರು.

ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ದಾಸ್ ಅವರು ಸಂಡೂರು ವಿಧಾನಸಭಾ ಕ್ಷೇತ್ರದ ಉಪ–ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ನಾನೇ ಕಾರಣ ಎಂದು ನನ್ನ ವಿರುದ್ಧ ಆರೋಪ ಮಾಡಿದ್ದರು. ನನ್ನ ಪಕ್ಕದಲ್ಲೇ ಕೂತಿದ್ದ ಬಿ.ವೈ.ವಿಜಯೇಂದ್ರ ಸಪೋರ್ಟ್ ಮಾಡಲಿಲ್ಲ. ಇದರಿಂದ ತುಂಬಾ ಬೇಸರ ಆಯಿತು. ಎಂದೂ ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ. ಪ್ರತಿಯೊಬ್ಬ ರಾಜಕಾರಣಿಗೂ ಅವರದೇ ಆದ ಕಾರ್ಯಕರ್ತರು, ಅಭಿಮಾನಿಗಳು ಇದ್ದಾರೆ. ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದ ನಾನಾ ಕಡೆ ಪಕ್ಷವನ್ನು ಸಂಘಟಿಸಲು ಶ್ರಮ ಹಾಕಿದ್ದೇನೆ. ಏನೇನೂ ಇಲ್ಲದ ಬಳ್ಳಾರಿಯಲ್ಲೂ ಬಿಜೆಪಿ ಒಂದು ಕಾಲಕ್ಕೆ 9 ಕ್ಷೇತ್ರ ಪೈಕಿ 8 ಕಡೆ ಗೆಲ್ಲಲ್ಲು ನನ್ನ ಶ್ರಮವಿದೆ. ಇದನ್ನೆಲ್ಲ ಮರೆತು ರೆಡ್ಡಿ ನನ್ನ ಬಗ್ಗೆ ಮಾತನಾಡಿದರೆ ನಾನು ಕೂಡ ಮಾತನಾಡಬೇಕಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಓಬಳೇಶ್, ಇಬ್ರಾಹಿಂ ಬಾಬು, ಗೋವಿಂದರಾಜುಲು ಇನ್ನಿತರರು ಇದ್ದರು.

## ನಾಳೆ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಜಾಥಾಕ್ಕೆ ಚಾಲನೆ

ಕಲಬುರಗಿ,ಜ.23:ರಸ್ತೆಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜನವರಿ 24 ರಂದು ಶುಕ್ರವಾರ ಬೆಳಿಗ್ಗೆ 7.30 ಗಂಟೆಗೆ ಕಲಬುರಗಿ ನಗರದ ಜಗತ್ ವೃತ್ತದಿಂದ ಸರ್ದಾರವಲ್ಲಭಭಾಯಿ ಪಟೇಲ್ ವೃತ್ತದವರೆಗೆ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಉಪ ಸಾರಿಗೆ ಆಯುಕ್ತರು ತಿಳಿಸಿದ್ದಾರೆ.

## ಪರಿಶ್ರಮ ಮುಖ್ಯ : ಡಿಸಿ ಜಾನಕಿ

ನಂತರ ಮೂರು ಭಾಗಗಳಾಗಿ ಹರಿದು ಹಂಚಿ ಹೋಗಿದ್ದು, ಇಲ್ಲಿ ಕೃಷಿ, ತೋಟಗಾರಿಕೆ, ಕೈಗಾರಿಕೆ ಹಾಗೂ ವ್ಯಾಪಾರಕ್ಕೆ ಉಪಯುಕ್ತವಾದ ವಾತಾವರಣ ಇದ್ದರೂ ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿಲ್ಲ. ಇಲ್ಲಿ ಈ ಎಲ್ಲ ಕ್ಷೇತ್ರಕ್ಕೆ ದುಡಿಯುವ ಬಂಡವಾಳ ಹಾಕುವ ಬಂಡವಾಳ ಶಾಹಿಗಳು ಕೂಡಾ ಮುಂದೆ ಬರುತ್ತಿಲ್ಲ. ಕಾಸಿಯಾ ಸಂಸ್ಥೆಯವರು ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದಲ್ಲಿ ಎಲ್ಲ ರೀತಿಯ ಸಹಕಾರ ನೀಡಲಾಗುವುದೆಂದು ತಿಳಿಸಿದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಪ್ರಶಾಂತ ಬಾರಿಗಿಡದ ಮಾತನಾಡಿ ಸ್ಥಳೀಯರು ಉದ್ಯಮದತ್ತ ಆಸಕ್ತಿ ತೋರಿದರೂ ಹೊರಗಿನಿಂದ ಹೆಚ್ಚಿನ ಕೈಗಾರಿಕೆಗಳು ಜಿಲ್ಲೆಗೆ ಬರಲು ಸಾಧ್ಯವಾಗುತ್ತದೆ. ನಮ್ಮ ಯೋಜನೆಗಳು ಅಂತರರಾಷ್ಟ್ರೀಯ ಬೇಡಿಕೆಗೆ ತಕ್ಕಂತೆ ರೂಪುಗೊಳ್ಳಬೇಕು. ಸಣ್ಣ ಕೈಗಾರಿಕೆಗಳ ಅಭಿವೃದ್ದಿಯೇ ಆರ್ಥಿಕ ಬೆಳವಣಿಗೆಗೆ ದಾರಿ ಎಂದ ಅವರು ಮುಂದಿನ ಒಂದು ವರ್ಷದ ಒಳಗಾಗಿ ಕನಿಷ್ಟ 50 ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು.

ಕಾಸಿಯಾದ ವಿಶೇಷ ಪ್ರತಿನಿಧಿ ಹಾಗೂ ಉದ್ಯಮಿ ಆನಂದ ಜಿಗಜಿನ್ನಿ ಮಾತನಾಡಿ ಕಾಸಿಯಾದವರು ಜಿಲ್ಲೆಯಲ್ಲಿ ಉದ್ಯಮಗಳನ್ನು ಸ್ಥಾಪನೆಗೆ ಉತ್ತೇಜನ ನೀಡಲು ಮುಂದೆ ಬಂದಿದ್ದು, ಈ ಅವಕಾಶವನ್ನು ಯುವ ಕೈಗಾರಿಕೋದ್ಯಮಿಗಳು ಇದರ ಸದುಪಯೋಗ ಪಡೆದುಕೊಂಡು ಕೈಗಾರಿಕೆ ಸ್ಥಾಪನೆಗೆ ಮುಂದಾಗಬೇಕಿದೆ ಎಂದರು. ಈ ಸಂದರ್ಭ ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ ಅವರನ್ನು ಬಾಗಲಕೋಟೆ ಜಿಲ್ಲಾ ಯೂನಿಯನ್ ಆಫ್ ಮರ್ಚೆಂಟ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಾಗಾರದಲ್ಲಿ ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ ಕಾರ್ಯಕ್ರಮದ ಅಧ್ಯಕ್ಷತೆ ಘ್ಷಹಿಸಿದ್ದರು. ಕಲಬುರಗಿಯ ವಿಟಿಪಿಸಿಯ ಸಹಾಯಕ ನಿರ್ದೇಶಕ ಜಾಫರ ಖಾಸಿಂ ಅನ್ಸಾರಿ, ಜಂಟಿ ಕಾರ್ಯದರ್ಶಿ ಸತೀಶ್ ಎನ್, ಖಜಾಂಚಿ ಮಂಜುನಾಥ ಹೆಚ್, ಉಪ ಸಮಿತಿ ಹಾಗೂ ಬಾಗಲಕೋಟೆ ಜಿಲ್ಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಿಂಗಣ್ಣ ಬಿರಾದಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಾನು : ಜಿ.ಜನಾರ್ದನರೆಡ್ಡಿ

ವರ್ಷದ ಸ್ನೇಹ ಬಾಂಧವ್ಯ. ಸಾಮಾಜಿಕ, ರಾಜಕೀಯ ವಿಷಯವಾಗಿ ಹೇಳ ಹೊರಟರೆ ಎಪಿಸೋಡ್ ಸಾಕಾಗುವುದಿಲ್ಲ. ಸ್ಲಂ ನಲ್ಲಿದ್ದ ರಾಮುಲು ಅವರನ್ನು ಆನೆಯಂತೆ ಬೆಳೆಸಿದ್ದೇನೆ. ನನ್ನ ವಿರುದ್ಧ ರಾಮುಲು ಆರೋಪ ಮಾಡುತ್ತಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಅವರು ಜಾರಕಿಹೊಳಿ ಅವರ ವಿರುದ್ಧ ರಾಮುಲು ಅವರನ್ನು ಬೆಳೆಸಲು ಯೋಜನೆ ರೂಪಿಸಿದ್ದಾರೆ ಎನ್ನುವ ಮಾಹಿತಿ ಇದೆ. ಶ್ರೀರಾಮುಲು ಕಾಂಗ್ರೆಸ್ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ. ಬಿಜೆಪಿ ಸಾಗರವಿದ್ದಂತೆ. ಯಾರೇ ಹೋದರು, ಬಂದರೂ ತಡೆದುಕೊಳ್ಳುವ ಶಕ್ತಿ ಅದಕ್ಕಿದೆ. ಎಲ್.ಕೆ.ಅಡ್ವಾಣಿ ಅವರು ಮೋದಿ ಅವರನ್ನು ಪ್ರಧಾನಿಯನ್ನಾಗಿ ಪ್ರೋತ್ಸಾಹಿಸಿದ್ದರು. ವ್ಯಕ್ತಿಗಿಂತ ಇಲ್ಲಿ ಪಕ್ಷ ದೊಡ್ಡದು. ಪಕ್ಷ ಹೇಳಿದಂತೆ ಕೇಳುವ ಸಾಮಾನ್ಯ ಕಾರ್ಯಕರ್ತ ನಾನು. ಶ್ರೀರಾಮುಲು ನನ್ನ ವಿರುದ್ಧ ಏನೇ ಆರೋಪ ಮಾಡಿದರೂ ನಾಳೆ ಪಕ್ಷ ರಾಮುಲು ಪರವಾಗಿ ಚುನಾವಣೆ ಮತ್ತಿತರೆ ಪಕ್ಷದ ಕೆಲಸಗಳಿಗಾಗಿ ಕೆಲಸ ಮಾಡಬೇಕೆಂದರೆ ಖಂಡಿತ ಮಾಡುತ್ತೇನೆ ಎಂದರು.

ಸಂಡೂರು ಉಪ ಚುನಾವಣೆಯ ಕುರಿತು ಕೇಂದ್ರದ ಮಾಜಿ ಸಚಿವ ಸದಾನಂದಗೌಡರಿಗೆ ಅಭಿಪ್ರಾಯ ತಿಳಿಸಿದ್ದೇನೆ. ಅದನ್ನೇ ಶ್ರೀರಾಮುಲು ನನ್ನ ವಿರುದ್ಧ ಆರೋಪ ಮಾಡಿದರೆ ನಾನೇನು ಮಾಡಲಿ? 14 ವರ್ಷ ನಾನು ಪಡಬಾರದ ಪಡಿಪಾಟಲು ಅನುಭವಿಸಿದ್ದೇನೆ. ಈ ಅವಧಿಯಲ್ಲಿ ರಾಮುಲು ಜನರ ಪ್ರೀತಿ, ವಿಶ್ವಾಸ ಗಳಿಸಿಕೊಳ್ಳಬೇಕಿತ್ತು ಎಂದ ರೆಡ್ಡಿ, ಶ್ರೀರಾಮುಲು ವಿರುದ್ಧ ಕೊಲೆ ಆರೋಪ ಇರ್ತು. ಆಗ ರಿವೇಂಜ್ ತೀರಿಸಲು ಮರ್ಡರ್ ಮಾಡುತ್ತೇನೆ ಎಂದಿದ್ದ ರಾಮುಲು ಅವರಿಗೆ ಮನವೊಲಿಸಿ ಇದೆಲ್ಲ ಬೇಡ. ಒಂದು ಬಾರಿ ಕ್ರೈಂ ಪ್ರಕರಣದಲ್ಲಿ ಸಿಲುಕಿಕೊಂಡರೆ ಕಷ್ಟ. ಅವರವರ ಕರ್ಮದ ಫಲ ಅವರವರು ಉಣ್ಣುತ್ತಾರೆ. ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಎತ್ತರದಲ್ಲಿ ಬೆಳೆಯಬೇಕು. ಜನಸೇವೆ ಮಾಡಬೇಕು ಎಂದು ಪ್ರೇರಣೆ ನೀಡಿದ್ದೆ. ಅದರಂತೆ ನನಗೆ ಸಿಕ್ಕ ಸಚಿವ ಸ್ಥಾನವನ್ನು ರಾಮುಲು ಅವರಿಗೆ ಕೊಡಿಸಿದ್ದೆ. ಇದು ನಾನು ರಾಮುಲು ಅವರಿಗೆ ಮಾಡಿದ ದ್ರೋಹ. ಇಂತಹ ಅನೇಕ ವಿಚಾರಗಳು ನನ್ನ ಬತ್ತಳಿಕೆಯಲ್ಲಿವೆ. ಸಮಯ ಬಂದಾಗ ಎಲ್ಲವನ್ನೂ ಹೇಳುತ್ತೇನೆ ಎಂದರು.

## ಇಂದಿನ ಯುವಕರಿಗೆ ಅಗತ್ಯ

ಸಂಘ ಸಂಸ್ಥೆಗಳು ಯುವಕರಿಗೆ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಿದೆ. ಸಂವಿಧಾನದಲ್ಲಿರುವ ಹಕ್ಕುಗಳಷ್ಟೇ, ಕರ್ತವ್ಯಗಳಿಗೆ ಆದ್ಯತೆ ನೀಡಬೇಕು. ಸಮ ಸಮಾಜ ಸೃಷ್ಟಿಸುವಲ್ಲಿ ಇಂದಿನ ಯುವಕರ ಪಾತ್ರ ಹಿರಿದಾಗಿದೆ. ಮಕ್ಕಳಿಗೆ, ಮಹಿಳೆಯರಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ಪುರುಷ ಪ್ರದಾನ ಸಮಾಜವನ್ನು ಪರಿವರ್ತಿಸಬೇಕು. ಯುವಕರಲ್ಲಿ ಸಂವಿಧಾನ ಜೀವನ ಶೈಲಿಯ ಒಂದು ಭಾಗವಾಗಬೇಕಿದೆ. ವಿವೇಕಾನಂದರು ಯುವಕರ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರ ತತ್ವಾದರ್ಶಗಳು ಯುವಕರು ಅಳವಡಿಸಿಕೊಂಡಾಗ ರಾಷ್ಟ್ರೀಯ ಯುವ ದಿನಾಚರಣೆ ಅರ್ಥಪೂರ್ಣವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶರಾದ ಜಿ.ಸಂಜೀವ್ ಕುಮಾರ್, ಜೆ.ಚೈತ್ರಾ ಯುವಕರನ್ನು ಕುರಿತು ಮಾತನಾಡಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಕಲ್ಯಾಣಧಿಕಾರಿ ಬಿ.ಎಸ್.ಗುರುಬಸವರಾಜ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ಹಾಸ್ಟೆಲ್ ಮೇಲ್ವಿಚರಕ ಎಲ್.ಶೇಖರ್ ನಾಯಕ್, ಮಹಾಂತೇಶ್ ನರಗುಂದ ಇದ್ದರು.

### ಪಡಿತರ ಚೀಟಿಗೆ ಇ-ಕೆವೈಸಿ ಮಾಡಿಸಿಕೊಳ್ಳಲು ಅಂತಿಮ ಅವಕಾಶ

ಬೀದರ: ಜ.23: ಪಡಿತರ ಚೀಟಿಯಲ್ಲಿರುವ ಎಲ್ಲಾ ಕುಟುಂಬದ ಸದಸ್ಯರು ಇ–ಕೆವೈಸಿ ಮಾಡಿಸುವುದು ಕಡ್ಡಾಯಗೊಳಿದೆ. ಸರ್ಕಾರ ನೀಡಿರುವ ಈ ಅಂತಿಮ ಅವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳ ಬೇಕೆಂದು ಬೀದರ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇ–ಕೆವೈಸಿ ಸಂಗ್ರಹಣೆಯ ಕಾರ್ಯ ಪ್ರತಿ ದಿನ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಮಾಡಿಸಿಕೊಳ್ಳಲು ಕಾಲಾವಕಾಶ ನೀಡಲಾಗಿದೆ. ಇ–ಕೆವೈಸಿ ಮಾಹಿತಿ ಸಂಗ್ರಹಣೆ ಕಾರ್ಯವನ್ನು ಮಾಡುವುದಕ್ಕಾಗಿ ಸರ್ಕಾರವೇ ನ್ಯಾಯಬೆಲೆ ಅಂಗಡಿಯವರಿಗೆ ಹಣ ಪಾವತಿ ಮಾಡುತ್ತಿದೆ.


**PROCLAIMATION**

Be it Known to all men in public that, my client Smt. Aravapalli Tulsi is intending to purchase the land bearing Sy.no. 92/*2 of village Handikhera, Tq:Humnabad, Dist:Bidar, to the extent of 1 Acre 25 gts. Out of total measuring 8 Acres 21 Gts out of total measuring 8 Acres 21 Gts. Which is owned by sri.Kapil Dev S/o Vivekanand Jadhav.

If any of the Public do have any proprietary rights or interest over the said property, then they should Approach me within all necessary documents of proof of ownership and possessory rights within 15 days from the date of this publication. Failing which my client will proceed to get execute the Registered sale Deeds in her favor and get the possession of the said land.

Hence, this public notice is issued at the request and instructions of my client
Date:15-01-2025

sd/-
Sri. UDAYKUMAR S. CHILVANTH
B.A. LL.B Spl.
ADVOCATE-HUMNABAD
(Address:UKC Law Office, Dubai Building, Opp.GESCOM, Town & Tq:Humnabad, Dist:Bidar.)
Mob.9448335821

**PROCLAIMATION**

Be it Known to all men in public that, my client Smt. Sakaray Shantha Kumari is is intending to purchase the land bearing Sy.no. 92/*2 of village Handikhera, Tq:Humnabad, Dist:Bidar, to the extent of 1 Acre 21 gts. Out of total measuring 8 Acres 21 Gts. Which owned by sri.Kapil Dev S/o Vivekanand Jadhav.

If any of the Public do have any proprietary rights or interest over the said property, then they should Approach me with all necessary documents of proof of ownership and possessory rights within 15 days from the date of this publication. Failing which my client will proceed to get execute the Registered sale Deeds in her favor and get the possession of the said land.

Hence, this public notice is issued at the request and instructions of my client
Date:15-01-2025

sd/-
Sri. UDAYKUMAR S. CHILVANTH
B.A. LL.B Spl.
ADVOCATE-HUMNABAD
(Address:UKC Law Office, Dubai Building, Opp.GESCOM, Town & Tq:Humnabad, Dist:Bidar.)
Mob.9448335821

**PROCLAIMATION**

Be it Known to all men in public that, my client Smt. Dharmapuri Jyotsna is is intending to purchase the land bearing Sy.no. 92/*2 of village Handikhera, Tq:Humnabad, Dist:Bidar, to the extent of 3 Acre 5 gts. Out of total measuring 8 Acres 21 Gts. Which owned by sri.Kapil Dev S/o Vivekanand Jadhav.

If any of the Public do have any proprietary rights or interest over the said property, then they should Approach me with all necessary documents of proof of ownership and possessory rights within 15 days from the date of this publication. Failing which my client will proceed to get the possession of the said land.

Hence, this public notice is issued at the request and instructions of my client
Date:15-01-2025

sd/-
Sri. UDAYKUMAR S. CHILVANTH
B.A. LL.B Spl.
ADVOCATE-HUMNABAD
(Address:UKC Law Office, Dubai Building, Opp.GESCOM, Town & Tq:Humnabad, Dist:Bidar.)
Mob.9448335821

**PROCLAIMATION**

Be it Known to all men in public that, my client Smt. Aravapalli Vijaya is intending to purchase the land bearing Sy.no. 92/*2 of village Handikhera, Tq:Humnabad, Dist:Bidar, to the extent of 2 Acre 6 gts. Out of total measuring 8 Acres 21 Gts. Which owned by sri.Kapil Dev S/o Vivekanand Jadhav.

If any of the Public do have any proprietary rights or interest over the said property, then they should Approach me with all necessary documents of proof of ownership and possessory rights within 15 days from the date of this publication. Failing which my client will proceed to get execute the Registered sale Deeds in her favor and get the possession of the said land.

Hence, this public notice is issued at the request and instructions of my client
Date:15-01-2025

sd/-
Sri. UDAYKUMAR S. CHILVANTH
B.A. LL.B Spl.
ADVOCATE-HUMNABAD
(Address:UKC Law Office, Dubai Building, Opp.GESCOM, Town & Tq:Humnabad, Dist:Bidar.)
Mob.9448335821


## ಜಿ.ಪಂ. ಕಚೇರಿಯಲ್ಲಿ ಧ್ವಜಾರೋಹಣ

ಕಲಬುರಗಿ,ಜ.23:ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಜನವರಿ 26 ರಂದು ಭಾನುವಾರ ಬೆಳಿಗ್ಗೆ 7.50 ಗಂಟೆಗೆ ಕಲಬುರಗಿ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ ಎಂದು ಕಲಬುರಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ತಿಳಿಸಿದ್ದಾರೆ

# ಒತ್ತಡಕ್ಕೆ ಮಣಿದರೆ ಗೆಲುವಿಲ್ಲ, ಒತ್ತಡ ಮಣಿಸಿದರೆ ಗೆಲುವೆ ಎಲ್ಲಾ

ಒತ್ತಡ ಎಂದರೇನು?

ಒತ್ತಡವನ್ನುದೇಹದನಿರ್ದಿಷ್ಟ ಬೇಡಿಕೆಗಳಿಗೆಅಥವಾಯಾವುದೇ ಘಟನೆಗಳಿಗೆನೈಸರ್ಗಿಕಪ್ರತಿಕ್ರಿಯೆ ಎಂದು ಪರಿಗಣಿಸಲಾಗುತ್ತದೆ. ಇದು ಮುಖ್ಯವಾಗಿ ಹೋರಾಟಅಥವಾಹಾರಾಟದ ಕಾರ್ಯವಿಧಾನವನ್ನು ಪ್ರಚೋದಿಸುತ್ತದೆ. ಇದು ದೇಹದಲ್ಲಿ ಅಡ್ರಿನಾಲಿನ್, ಕಾರ್ಟಿಸೋಲ್ ನಂತಹ ಹಾರ್ಮೋನಗಳ ರಶೆಗೆ ಕಾರಣವಾಗುತ್ತದೆ. ಒತ್ತಡವು ಅತಿಯಾದ ಪ್ರಚೋದಕವಾಗಿ ಕಾರ್ಯನಿರ್ವಹಿಸಬಹುದು, ದೈಹಿಕ ಮತ್ತು ಮಾನಸಿಕ ಆರೋಗ್ಯದಬದಲಾವಣೆಗಳಿಂದಾಗಿ ದೇಹದ ಸಾಮಾನ್ಯ ಕಾರ್ಯಚಟುವಟಿಕೆಗೆಹಾನಿಅಥವಾ ತೊಂದರೆಗೊಳಗಾಗಬಹುದು.

ಯಾವುದೇ ವಯಸ್ಸಿನ ಜನ ಅಥವಾ ಲಿಂಗ (ಇಣ್ಣುಜಡಿ ಉಜಟಿಜಜಡಿ)ಮೇಲೆಪರಿಣಾಮ ಬೀರುವ ಸಾಮಾನ್ಯಅನುಭವ ಒತ್ತಡ. ಇದು ದಿನನಿತ್ಯದ ಚಟುವಟಿಕೆಗಳು,ಕೆಲಸ,ಹಣಕಾಸು, ಕುಟುಂಬ ಕಲಹ,ಸಂಬಂಧಗಳ ಕಲಹಕ್ಕೆಸಂಬಂಧಿಸಿರಬಹುದು. ಕೆಲವೊಂದು ಸಾಮಾನ್ಯ ಒತ್ತಡಗಳು ಮೆನಯಲ್ಲಿನ ಬದಲಾವಣೆಗಳು (ವಿಚ್ಛೇದನ, ಸಾವು, ಮರುಮದುವೆಗಳು, ಮಕ್ಕಳ ವಿಧ್ಯ-ಅಭ್ಯಸ), ಭಾಷೆಯ ಅಡೆತಡೆಗಳು (ನಿರುತ್ಸಾಹಗೊಳಿಸಬಹುದು), ಸಾಮಾಜಿಕ ಬೆಂಬಲ ಮತ್ತು ಆರೋಗ್ಯ.

ಆಳವಾದ ಸಾರ್ವಜನಿಕ ಆರೋಗ್ಯಕಾಳಜಿಗಳೊಂದಿಗೆ ಪ್ರಪಂಚದಾದ್ಯಂತ ರೋಗ ಮತ್ತು ಮರಣಕ್ಕೆ ಖಿನ್ನತೆ ಮತ್ತು ಒತ್ತಡ ಪ್ರಮುಖ ಕಾರಣವಾಗಿದೆ. ಇಂದಿನ ಯುಗದಲ್ಲಿ ಮನೆ ಕೆಲಸದ ಸ್ಥಳದಲ್ಲಿ ಇತರೊಂದಿಗೆ ವೇಗವನ್ನು ಹೊಂದಿಸಲು, ನಿರ್ದಿಷ್ಟಗುರಿಗಳನ್ನುತಲುಪಲು, ವೈಫಲ್ಯದ ನಿರಂತರ ಅಥವಾ ಪುನರಾವರ್ತಿತ ಭಯ ಅಥವಾ ಹಿಂದುಳಿದಿರುವಿಕೆ ಮತ್ತ ಫಿಟ್ನೆಸ್ ದೇಹದ ಆಕಾರಗಳು ಇತ್ಯಾದಿಗಳನ್ನು ಸಾಧಿಸುವ ಅಪೂರ್ಣ ಬಯಕೆಗಳು ಮಾನಸಿಕವಾಗಿ ಒತ್ತಡ ಮತ್ತು ಖಿನ್ನತೆಯೇ ಮೂಲ ಕಾರಣಗಳು.

ಸಾಮಾನ್ಯಒತ್ತಡದಲಕ್ಷಣಗಳು / ಕಾರಣಗಳು:-

ತಲೆನೋವು,ಹೆಚ್ಚಿನ ಖಿನ್ನತೆ, ನಿದ್ರಾಹೀನತೆ,ದುರ್ಬಲಗೊಂಡ ರೋಗನಿರೋಧಕ ಶಕ್ತಿ,ಅಧಿಕ ರಕ್ತದ ಒತ್ತಡ (ಬ್ಲಡ್ ಪ್ರೇಶರ್), ಸಕ್ಕರೆ ಕಾಯಿಲೆ, ಹೃದಯ ಸಂಬಂಧಕಾಯಿಲೆ,ಉಸಿರಾಟದ ಸಮಸ್ಯ, ಫಲವತ್ತತೆಯ ಸಮಸ್ಯೆಗಳು (ಲೋಇಮ್ಯುನಿಟಿ), ಕಡಿಮೆ ಲೈಂಗಿಕ ಬಯಕೆ, ಅನಿಯಮಿತ ಅವಧಿಗಳು, ಥೈರಾಯ್ಡ್ ಸಮಸ್ಯೆಗಳು ತೂಕ ಹೆಚ್ಚಾಗುವುದು/ನಷ್ಟ, ಯಾವುದೇ ಕುಟುಂಬ ಸದ್ಯಸರ ಅಗಲಿಕೆ ಪ್ರೀತಿಪಾತ್ರರ ಸಾವು ಮುಂತಾದವುಗಳು.

ಊಕಂಂಥು(ಹೈಪೋಥಾಲಾಮಿಕ್ ಪಿಟ್ಯುಟರಿ ಅಡ್ರಿನಲ್ ಆಕ್ಸಿಸ್) ಇದು ವಿವಿಧ ದೈಹಿಕ ಕಾರ್ಯಗಳನ್ನುನಿಯಂತ್ರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಒತ್ತಡದ ಪ್ರತಿಕ್ರಿಯೆ, ಮನಸ್ಥಿತಿ, ಜೀರ್ಣಕ್ರಿಯೆ, ಶಕ್ತಿ ಸಮತೋಲನೆ, ಪ್ರತಿರಕ್ಷಣಾ ವ್ಯವಸ್ಥೆ ಮುಂತಾದವು.

ಇದುಹೇಗೆಕೆಲಸಮಾಡುತ್ತದೆ?

ಹೈಪೋಥಾಲಾಮುಸ್, ಕಾರ್ಟಿಕೊಟ್ರೋಪಿನ್ ಹಾರ್ಮೋನ್ (ಅಖಊ) ಅನ್ನು ಬಿಡುಗಡೆ ಮಾಡುತ್ತದೆ. ಮೈ ಗ್ರಂಥಿ ಪಿಟ್ಯುಟರಿ (ಅಖಊ) ಮತ್ತು ನಿರ್ಮಿಸಿದ ಅಡ್ರಿನೊಕಾರ್ಟಿಕೊಟ್ರೋಪಿಕ್ ಹಾರ್ಮೋನ್ (ಂಅಖಊ) ಸ್ವೀಕರಿಸುತ್ತದೆ.

ಈ ಒತ್ತಡದ ವಿಷಯವನ್ನು ಭಗವದ್ಗೀತೆಯಲ್ಲಿ ನಾವು ಒಂದು ಉದಾಹಣೆಯನ್ನಾಗಿ ತೆಗೆದುಕೊಳ್ಳಬಹುದು. ಇದರಲ್ಲಿ ಅರ್ಜುನನ್ನು ತನ್ನ ಸಾರಥಿಯಾದಕೃಷ್ಣನನ್ನುಯುದ್ಧ ಭೂಮಿಯ ಮಧ್ಯಭಾಗಕ್ಕೆ ಎರಡು ಸೈನ್ಯಗಳನ್ನುಸಮೀಕ್ಷೆ ಮಾಡಲು ರಥವನ್ನುಓಡಿಸಲು ಕೇಳುತ್ತಾನೆ. ಅವರನ್ನುಸಮಿಕ್ಷೆ ಮಾಡಿದ ನಂತರ,ಅರ್ಜುನನ್ನು ಕೃಷ್ಣನಿಗೆ ತನ್ನ ಹತಾಶೆಯನ್ನು ವ್ಯಕ್ತಪಡಿಸುತ್ತಾನೆ,ಅವನ್ನುತನ್ನ ಸ್ವಂತ ಸಂಬಂಧಿಕರೊಂದಿಗೆ ಹೋರಾಡಲು ಅಗತ್ಯವಿರುವ ಯುದ್ಧದಲ್ಲಿಹೇಗೆಭಾಗವಹಿಸಬೇಕು ಎಂದು ಆಶ್ಚರ್ಯ ಪಡುತ್ತಾನೆ. ಅವನು ವಿಜಯ ಮತ್ತು ಸಂತೋಷಕ್ಕಾಗಿ ಹೋರಾಡುವ ನಿರರ್ಥಕತೆಯನ್ನುವ್ಯಕ್ತಪಡಿಸುತ್ತಾನೆ. ಅವನು ಬಯಸಿದ ಜನರು ಅವನವಿರುದ್ಧ ಶಾಸ್ತ್ರಾಸ್ತ್ರಗಳಿಗಾಗಿ ಹೋರಾಡುತ್ತಾರೆ. ಅವನು ತನ್ನ ಶಿಕ್ಷಕರು ಮತ್ತು ಕುಟುಂಬದ ಸದಸ್ಯರವಿರುದ್ಧ ಹೋರಾಡುವ ಅನ್ಯಾಯ ಮತ್ತು ಪಾಪದ ಸ್ವಭಾವವನ್ನುಯೋಚಿಸುತ್ತಾನೆ.

ಅಂತಹ ಆಂತರಿಕ ಘರ್ಷಣೆಯ ತನ್ನಕುಟುಂಬದ ನಾಶಕ್ಕೆಕಾರಣವಾಗುತ್ತದೆಮತ್ತು ಅಧರ್ಮಕ್ಕೆಕಾರಣವಾಗುತ್ತದೆ ಎಂದು ತೀರ್ಮಾನಿಸುತ್ತಾನೆ. ಎಲ್ಲವೂ ರಾಜ್ಯವನ್ನುಪಡೆಯುವ ದುರಾಸೆಗಾಗಿ, ಕುಟುಂಬದ ಅಂತ್ಯವು ಸಾಂಪ್ರದಾಯಿಕ ವಿಧಿಗಳನ್ನು ತ್ಯಜಿಸುವುದು, ಅಧರ್ಮ,ಸ್ತ್ರೀಯರ ಸಂಕಟ, ಅಂತರ ವಿವಾಹ ಮತ್ತು ಅವನ ಅಗಲಿದ ಪೂರ್ವಜರ ಅಭಾವಕ್ಕೆಕಾರಣವಾಗುತ್ತದೆ ಎಂದು ಪ್ರತಿಬಿಂಬಿಸುತ್ತಾನೆ. ಕಾರ್ಟಿಸೋಲ್ ಯಕೃತ್ತಿನಲ್ಲಿ ಸಂಗ್ರಹವಾಗಿರುವಗ್ಲೂಕೋಸ್ ಅನ್ನು ಸಜ್ಜುಗೊಳಿಸುತ್ತದೆ, ಒತ್ತಡವನ್ನುನಿಭಾಯಿಸುಲು ಸ್ಥಿರವಾದಶಕ್ತಿಯಪೂರೈಕೆಯನ್ನು ಒದಗಿಸುತ್ತದೆ.

ಇದು ಏಕೆ ಮುಖ್ಯ?

ಊಕಂಂಥು ಮುಖ್ಯವಾಗಿ ಸವಾಲುಗಳ ಸಮಯದಲ್ಲಿ (ಊಂಟಜಥ ಣಚಿ ) ಹೋಮಿಯೋಸ್ಟಾಸಿಸ್ ಅನ್ನು ಸಜ್ಜುಗೊಳಿಸುತ್ತದೆ. ಅದನ್ನು ಕಾಪಡಿಕೊಳ್ಳಲು ಸಹಾಯ ಮಾಡುತ್ತದೆ ಒತ್ತಡವನ್ನು ನಿಭಾಯಿಸಲು ಸ್ಥಿರವಾದ ಶಕ್ತಿಯ ಪೂರೈಕೆಯನ್ನು ಒದಗಿಸುತ್ತದೆ. ಹಾರ್ಮೋನ್ ಲೆವಲ್ ಮತ್ತು ಶಾರೀರಿಕ ಪ್ರತಿಕ್ರಿಯೆಯ ಮೂಲಕ ನಿಮ್ಮ ದೇಹವನ್ನು ಒತ್ತಡಕ್ಕೆ ಅಳವಡಿಸಿಕೊಳ್ಳುವುದನ್ನು ಇದು ಖಚಿತಪಡಿಸುತ್ತದೆ.

ಇದು ಹೇಗೆ ಪರಿಣಾಮ ಬೀರುತ್ತದೆ

ಇದು ಮುಖ್ಯವಾಗಿ ನಮ್ಮ ಆಲೋಚನಾ ಸಾಮರ್ಥ್ಯದ ಮಾರ್ಗವನ್ನುಅಡ್ಡಿಪಡಿಸುತ್ತದೆ. ಒಬ್ಬ ವ್ಯಕ್ತಿಯು ಯಾವಾಗಲೂ "ಏನು"ಎಂದು ಯೋಚಿಸುವ ಬದಲು "ಏನಾದರೆ/ ಏನಾಗುತ್ತದೆ" ಎಂದು ಯೋಚಿಸಲು ಪ್ರಾರಂಭಿಸುತ್ತಾನೆ, ಭವಿಷ್ಯದ ಬಗ್ಗೆ ಚಿಂತಿಸುತ್ತಾನೆ, ಜವಾಬ್ದಾರಿಗಳು, ಭವಿಷ್ಯದ ಆಲೋಚನೆಗಳು, ಊಹೆಗಳು ತಪ್ಪಾದ ತೀರ್ಮಾನಗಳ ಬಗ್ಗೆ ಚಿಂತಿಸುತ್ತಾನೆ.

ಇದು ಸಾಮಾನ್ಯವಾಗಿ ನಮ್ಮನ್ನುವಿಚಲಿತಗೊಳಿಸುತ್ತದೆ ಮತ್ತು ಮನಸ್ಸನ್ನು ಬೇರೆಡೆಗೆ ತಿರುಗಿಸುತ್ತದೆ. ಸಮಸ್ಯೆಯನ್ನು ತಡೆದುಕೊಳ್ಳವ ಸಾಮರ್ಥ್ಯವು ಕಡಿಮೆಯಾಗುತ್ತಾಹೋಗುತ್ತದೆ.

ಒತ್ತಡವನ್ನುಕಡಿಮೆ ಮಾಡಲು ಮನಸ್ಸನ್ನು ಮೊದಲಿಗೆ ಸ್ಥಿರವಾಗಿಸಬೇಕು ಇದು ಒಂದು-ಎರಡು ದಿನದ ಪ್ರಯತ್ನದಿಂದ ಆಗುವುದಿಲ್ಲ, ಅದಿಕ್ಕ ಸತತ ಪ್ರಯತ್ನ ಹೊಂದಿರಬೇಕು, ಯಾವುದೇ ನಿರ್ಧಾರವನ್ನು ತೆಗೆದಕೊಳ್ಳುವ ಮೊದಲು ಪೋಷಕರಿಗೆ ಅಥವಾ ಸ್ನೇಹಿತರೊಂದಿಗೆಚರ್ಚಿಸಬೇಕು. ಒತ್ತಡ ಎಲ್ಲರಿಗು ಸಾಮಾನ್ಯವಾಗಿ ಇದ್ದೇ ಇರುತ್ತದೆ ಆದರೆ ಅದನ್ನು ಮೆಟ್ಟಿ ನಿಲ್ಲುವ ಸಾಮಾರ್ಥ್ಯ ಎಲ್ಲರಲ್ಲು ಇರುವುದಿಲ್ಲ.

ಈಗಿನ ಕಾಲದಲ್ಲಿ ಅದನ್ನು ಸಾಧಿಸುವುದು ಕಷ್ಟ ಅಂತ ಆದರು ಯಾವುದೇ ಕೆಲಸ ಮಾಡಲು ಆರೋಗ್ಯ ತುಂಬ ಮುಖ್ಯ ಇಷ್ಟು ಕಷ್ಟಪಟ್ಟು ದುಡಿಯುವುದು,ಸಂಪಾದಿಸುವುದು ನಮ್ಮ ಅನುಕೂಲಕ್ಕೆ ತಕ್ಕಂತೆ ಇರುಬೇಕು. ಅದ್ದರಿಂದ ದಿನವು 20-30 ನಿಮಿಷ ಯೋಗ / ವ್ಯಾಯಾಮ /ಘಚಿಟಇುಟಿಂ ಎಷ್ಟೆ ಕೆಲಸ ಇದ್ದರು ಬಿಡವು ಮಾಡಿಕೊಂಡು ಮಾಡಲೇ ಬೇಕು. ಪೋಷಕರೊಂದಿಗೆ, ಮಕ್ಕಳೊಂದಿಗೆ,ಸ್ನೇಹಿತರೊಂದಿಗೆ ಸಂಬಂಧಿಕರ ಜೋತೆ ಸದಾ ಸಮಯ ಕಳೆಯಬೇಕು (ಇದರಿಂದ ಮನಸ್ಸು ಮತ್ತು ಮನೆ ಸುಖವಾಗಿರುತ್ತದೆ) ಯಾವುದೇ ತರಹದ ಚಟಗಳು (ಮಧ್ಯಪಾನ,ಸಿಗರೇಟ,ಡ್ರಗ್ಸ್) ಬಲಿಯಾಗಬಾರದು. ಓದಿನ ಕಡೆ ಗಮನವಿರಬೇಕು, ದಿನಕ್ಕೆ 10-20 ನಿಮಿಷವಾದರು ದೇವರ ಧ್ಯಾನ / ದೇವಸ್ಥಾನಕ್ಕೆ ಬೇಟಿ ನೀಡಬೇಕು, 2-3 ತಿಂಗಳು ಆದ ನಂತರ ಒಂದು ಪ್ರೇಕ್ಷಣಾ ಸ್ಥಳಕ್ಕೆ ಬೇಟಿ ನೀಡಬೇಕು, ದಿನನಿತ್ಯ ಓಡಾಟದಿಂದ ಬ್ರೇಕ್ ತೆಗೆದುಕೊಳ್ಳಬೇಕು ಸಮಯಕ್ಕೆಸರಿಯಾಗಿ ಊಟ, ನಿದ್ದೆ ಮಾಡಬೇಕು, ದಿನನಿತ್ಯ ಆಹಾರವನ್ನುಆದಷ್ಟುಮನೆಯಲ್ಲೆ ಸಿದ್ದಪಡಿಸಿ ಮಾಡಿಕೊಳ್ಳಬೇಕು (ಹೊರಗಡೆಯಿಂದ ಪಾರಸಲ್ ಬಳಕೆಯು ಕಡಿಮೆ ಮಾಡಬೇಕು).

ಒತ್ತಡವನ್ನುನಿಯಂತ್ರಿಸಲು ದಿನನಿತ್ಯ, ಯೋಗ ಆಸನ ಮಾಡಬೇಕು(ಸೂರ್ಯನಮಸ್ಕಾರ, ಶಿರಸಾಸನೆ, ಚಕ್ರಾಸನ, ಧನುರಾಸನ ಮುಂತಾದವು) ಹಾಗೂ ಪ್ರಾಣಾಯಾಮ (ಅನುಲೋಮ-ವಿಲೊಮ್, ಬಸ್ತ್ರಿಕಾ,ಕಪಾಲಬಾತಿ,ಬ್ರಮತಿ ಮುಂತಾದವು) ಈ ಅಧ್ಯಾಯವು ಕರ್ತವ್ಯ, ನೈತಿಕತೆ, ಸ್ವಯಂ-ಅನುಮಾನ ಮತ್ತು ಜೀವನದ ಸ್ವರೂಪದಂತಹ ಸೌರ್ವತ್ರಿಕ ವಿಷಯಗಳನ್ನು ತಿಳಿಸುತ್ತದೆ. ಇದು ಅರ್ಜುನ ಮತ್ತು ಕೃಷ್ಣನ ನಡುವಿನ ಸಂಪೂರ್ಣ ಸಂಭಾಷಣೆಗೆ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ, ನಂತರದ ಧರ್ಮ (ಸದಾ ಕರ್ತವ್ಯ), ಕರ್ಮ (ಕ್ರಿಯೆ) ಮತ್ತುಆಧ್ಯಾತ್ಮಿಕ ವಿಮೋಚನೆಯ ಬೋಧನೆಗಳಿಗೆಅಡಿಪಾಯವನ್ನು ಹಾಕುತ್ತದೆ.

ಅರ್ಜುನನಆಂತರಿಕಹೋರಾಟವು ನೈತಿಕ ಸಂದಿಗ್ಧತೆಗಳು ಮತ್ತು ಅಸ್ತಿತ್ವವಾದದ ಪ್ರಶ್ನೆಗಳೊಂದಿಗೆ ಹೋರಾಡುವುಮತ್ತುಅಸ್ತಿತ್ವವಾದದ ಪ್ರಶ್ನೆಗಳೊಂದಿಗೆಹೋರಾಡುವ ಮಾನವ ಅನುಭವವನ್ನು ಪ್ರತಿಬಿಂಬಿಸುತ್ತದೆ.

ಅರ್ಜುನನು ತನ್ನ ಸಾರಥಿಯಾದ ಕೃಷ್ಣನನ್ನು ಯುದ್ಧಭೂಮಿಯಮಧ್ಯಭಾಗಕ್ಕೆ ಎರಡು ಸೈನ್ಯಗಳನ್ನು ಸಮೀಕ್ಷೆ ಮಾಡಲು ರಥವನ್ನುಓಡಿಸಲು ಕೇಳತ್ತಾನೆ, ಅವರನ್ನು ಸಮೀಕ್ಷೆ ಮಾಡಿದನಂತರ, ಅರ್ಜುನನು ಕೃಷ್ಣನಿಗೆ ತನ್ನ ಹತಾಶೆಯನ್ನು ವ್ಯಕ್ತಪಡಿಸುತ್ತಾನೆ. ಅವನು ತನ್ನ ಸ್ವಂತ ಸಂಬಂಧಿಕರೊಂದಿಗೆ ಹೋರಾಡಲು ಅಗತ್ಯವಿರುವ ಯುದ್ಧದಲ್ಲಿಹೇಗೆಭಾಗವಹಿಸಬೇಕು ಎಂದು ಆಶ್ಚರ್ಯ ಪಡುತ್ತಾನೆ. ಅವನು ವಿಜಯ ಮತ್ತು ಸಂತೋಷಕ್ಕಾಗಿ ಹೋರಾಡುವ ನಿರರ್ಥಕತೆಯನ್ನುವ್ಯಕ್ತಪಡಿಸುತ್ತಾನೆ, ಅವನು ಬಯಸಿದ ಜನರು ಅವನ ವಿರುದ್ಧ ಶಸ್ತ್ರಾಸ್ತ್ರಗಳಿಗಾಗಿ ಹೋರಾಡುತ್ತಾರೆ. ಅವನು ತನ್ನ ಶಿಕ್ಷಕರು ಮತ್ತು ಕುಟುಂಬದ ಸದಸ್ಯರ ವಿರುದ್ಧ ಹೋರಾಡುವ ಅನ್ಯಾಯ ಮತ್ತು ಪಾಪದ ಸ್ವಭಾವವನ್ನುಯೋಚಿಸುತ್ತಾನೆ. ಅಂತಹ ಆಂತರಿಕ ಘರ್ಷಣೆಯ ತನ್ನ ಕುಟುಂಬದ ನಾಶಕ್ಕೆ ಕಾರಣವಾಗುತ್ತದೆ ಮತ್ತು ಅಧರ್ಮಕ್ಕೆ ಕಾರಣವಾಗುತ್ತದೆ ಎಂದು ತೀರ್ಮಾನಿಸುತ್ತಾನೆ. ಎಲ್ಲವು ರಾಜ್ಯವನ್ನುಪಡೆಯುವ ದುರಾಸೆಗಾಗಿ ಕುಟುಂಬದ ಅಂತ್ಯವು ಸಾಂಪ್ರದಾಯಿಕ ವಿಧಿಗಳನ್ನು ತ್ಯಜಿಸುವುದು, ಅಧರ್ಮ, ಸ್ತ್ರೀಯರ ಸಂಕಟ, ಅಂತರವಿವಾಹ ಮತ್ತು ಅವನ ಅಗಲಿದ ಪೂರ್ವಜರ ಅಭಾವಕ್ಕೆ ಕಾರಣವಾಗುತ್ತದೆ ಎಂದು ಪ್ರತಿಬಿಂಬಿಸುತ್ತಾನೆ.

ಭಗವದ್ಗೀತೆ ಅರ್ಜುನನಿಗೆ ಮಾತ್ರವಲ್ಲ, ಇಡೀ ಜಗತ್ತಿಗೆ ಇದು ಬಯಕೆಗಳನ್ನು ಹೇಗೆ ನಿಯಂತ್ರಿಸುವುದು, ಆತ್ಮದ ಬಗ್ಗೆ,ದೇವರ ಬಗ್ಗೆ,ಯೋಗ, ಭಕ್ತಿ ಮತ್ತು ಮೋಕ್ಷದ ಬಗ್ಗೆ ತಿಳಿದುಕೊಳ್ಳುವುದು.

ಎಲ್ಲಾ ಆಸೆಗಳು,ಭಾವನೆಗಳು ಮತ್ತುಆಲೋಚನೆಗಳುಮನಸ್ಸಿನಲ್ಲಿ ಹುಟ್ಟುತ್ತವೆ,ಅದು ಬಾಂಧವ್ಯಕ್ಕೆ ಕಾರಣವಾಗುತ್ತದೆ,ಕೋಪಕ್ಕೆ ಕಾರಣವಾಗುತ್ತದೆ, ಬಯಕೆ , ಒತ್ತಡ ಮತ್ತು ಕೋಪವು ವ್ಯಕ್ತಿಯ ದೊಡ್ಡ ಶತ್ರುಗಳು " ವ್ಯಕ್ತಿಯ ಅತ್ಯುತ್ತಮ ಸ್ನೇಹಿತ ಮತ್ತು ಶತ್ರು ಒಬ್ಬ ವ್ಯಕ್ತಿಯೇ "ಅದ್ದರಿಂದ ಒಬ್ಬನು ತನ್ನನ್ನುತಾನು ಬೆಳಸಿಕೊಳ್ಳಲು ಪ್ರಯತ್ನಿಸಬೇಕು.

ಕಟ್ಟುಪಾಡುಗಳು ಮತ್ತು ಅವುಗಳನ್ನುಮುಕ್ತಗೊಳಿಸುವ ಕ್ರಿಯೆಗಳನಡುವಿನವ್ಯತ್ಯಾಸವನ್ನು ತಿಳಿದುಕೊಳ್ಳುವುದರ ಜೋತೆಗೆ ಒಬ್ಬವ್ಯಕ್ತಿಯತನ್ನಕರ್ತವ್ಯಗಳನ್ನು ನಿಸ್ವಾರ್ಥ ಸೇವೆಯಾಗಿ ಮತ್ತು ದೇವರಿಗೆ ಅರ್ಪಣೆ ಮಾಡಲು ತೊಡಗಬೇಕು.

ಶರೀರದ ದೋಷಗಳನ್ನು ಸ'ವ'ಂವಾಗಿರಿಸ'ಲಂ ಆಯುರ್ವೇದವನ್ನುಪಾಲನೆ ಮಾಡಬೇಕು.ಆಯುರ್ವೇದದಲ್ಲಿ ದಿನಚರ್ಯಗಳನ್ನುತಿಳಿಸಿದ್ದಾರೆ, ರುತುಚರ್ಯ(ಯಾವರುತುವಿನಲ್ಲಿ ಹೇಗೆ ಇರಬೇಕು, ಯಾವ ಆಹಾರವನ್ನುಸೇವಿಸಬೇಕು) ಎಂಬುದನ್ನುತಿಳಿದುಕೊಂಡು ಅದನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ಆಯುರ್ವೇದದಲ್ಲಿ ಶರೀರದ ಶೋಧನಕ್ಕಾಗಿ ಕೆಲವೊಂದು ಪ್ರೊಸಿಜರ್ಗಳನ್ನುತಿಳಿಸಿದ್ದಾರೆ (ವಮನ, ವಿರೇಚನ ಮುಂತಾದವು) ಇದನ್ನು ವರ್ಷಕ್ಕೆ 1 ಬಾರಿಯಾದರು ಮಾಡಿಕೊಂಡರೆದೇಹದಲ್ಲಿರುವ ಕೆಟ್ಟದೋಷಗಳುನಿವಾರಣೆಯಾಗಿ ಆರೋಗ್ಯವನ್ನುನಡಸಿಕೊಂಡು ಹೋಗಬೇಕು

ಯಾವುದೇ ವ್ಯಕ್ತಿಯ ತನ್ನದೆಯಾದ ಒಂದು ರೂಟೀನ್ (ಲೈಫ್ ಸ್ಟಾಲ್) ಅಳವಡಿಸಿಕೊಳ್ಳಬೇಕು ಅದರ ಪ್ರಕಾರ ಜೀವನ ಶೈಲಿಯನ್ನು ನಡೆಸಿಕೊಂಡು ಹೋಗಬೇಕು.



Dr. Soumya R Korawar
BAMS, MD (Ayu)
Final Year PG Scholar
Shri Dharmastala Manjunatheshwara Ayurvedic Medical College,
Hospital and Research Center,
Kuthpady, Udupi

## ನಾಲತವಾಡ ನಲ್ಲಿ ಹೆಚ್ಚಿದ ನಕಲಿ ವೈದ್ಯರುಗಳ ಹಾವಳಿ...

## ಫೇಕ್.... ಡಾಕ್ಟರ್... ಫೇಕ್.... ಎಚ್ಚರಾ.... ಎಚ್ಚರಾ.... ಜನಗಳೆ

(ಶಿವು ರಾಠೋಡ)

ಮಲ್ಲಮ್ಮ ನುಡಿ ವಾರ್ತೆ


ಹೌದು ನಾಲತವಾಡ ಪಟ್ಟಣವು ಸುಮಾರು 20 ಸಾವಿರ ಜನಸಂಖ್ಯೆಯುಳ್ಳ ದೊಡ್ಡದಾದ ಪಟ್ಟಣ... ಅಲ್ಲದೇ ನಾಲತವಾಡ ಪಟ್ಟಣವು ವ್ಯಾಪಾರ ಕೇಂದ್ರವಾಗಿರುವದರಿಂದ ಪಟ್ಟಣ-ಕ್ಕೆ ಪ್ರತಿ ದಿನ ಸುತ್ತ-ಮುತ್ತಲಿನ ಹಳ್ಳಿಗಳಿಂದ ಸಾವಿರಾರು ಜನರು ವ್ಯಾಪಾರವ್ಯವಾಟಕ್ಕೆಂದು ಪಟ್ಟಣಕ್ಕೆ ಪ್ರತಿದಿನ ಬರುವರು...

ಅಲ್ಲದೇ ಸುತ್ತ-ಮುತ್ತ ಹಳ್ಳಿಗಳ ಜನರು ಆರೋಗ್ಯ ಸಮಸ್ಯೆ ಎಂದು ಪಟ್ಟಣಕ್ಕೆ ಆಗಮಿಸುವರು...

ಎಷ್ಟೋಂದು ದೊಡ್ಡ ಪಟ್ಟಣದಲ್ಲಿ ಸರಕಾರಿ ಸಮುದಾಯ ಆರೋಗ್ಯ ಆಸ್ಪತ್ರೆ ಇದೆ... ಮತ್ತು ಹಲವು ಖಾಸಗಿ ಆಸ್ಪತ್ರೆಗಳು ಲಭ್ಯ ಇರುವವು....

ಅದರ ಮಧ್ಯನೆ... ಪಟ್ಟಣದಲ್ಲಿ ನಕಲಿ ವೈದ್ಯರುಗಳ ಹಾಗೂ ಅನಧಿಕೃತ ಪ್ರಯೋಗಾಲಯಗಳ ಹಾವಳಿಯು ಕೂಡಾ ಅವ್ಯಹತವಾಗಿ ಹುಟ್ಟಿಕೊಂಡಿವೆ... ಇವರುಗಳು ವೃತ್ತಿಗೆ ಬೇಕಿರುವ ಶಿಕ್ಷಣ ಪಡೆ-ಯದೆ ವೃತ್ತಿ ನಡೆಸಿ ಸಾವರ್ಜನಿಕರ ಆರೋಗ್ಯದ ಮೇಲೆ ಪರಿಣಾಮ ಬಿರುವ ಚಿಕಿತ್ಸೆನೀಡಿ...ಸಾರ್ವಜನಿಕರ ಜೀವನದ ಜೋತೆ ಚಲ್ಲಾಟವಾಡಿ ಜೀವನವನ್ನೆ ಹಾಳು ಮಾಡಲು ಹೊರಟಿರುವರು...

ಇವರುಗಳ ಬಗ್ಗೆ ಧ್ವನಿ ಎತ್ತಬೇಕೆಂದು ಹಲವು ಸಂಘಟನೆಯ ಹೋರಾಟಗಾರಾದ ಮಲ್ಲಿಕಾರ್ಜುನ್ ರಾಂಪೂರ- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಲಿಂಗಸುಗೂರು, ಶಿವು ರಾಠೋಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ಅಧ್ಯಕ್ಷರು ಹುಣಸಗಿ ರವರು ತಾಲೂಕಾ ಹಾಗೂ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಮಾನ್ಯ ತಾಲೂಕಾಆರೋಗ್ಯಾಧಿಕಾರಿಗಳು ಡಾ: ಸತೀಶ ತಿವಾರಿ ರವರಿಗೆ ಮಾಹಿತಿ ಹಕ್ಕಿನಡಿ ಮಾಹಿತಿ ಕೇಳಿದಾಗ ನಾಲತವಾಡ ಪಟ್ಟಣದಲ್ಲಿ ಇಂತಿಷ್ಟು ಜನ ನಕಲಿ ವೈದ್ಯರುಗಳು ಕಾರ್ಯನಿರ್ವಹಿಸುತ್ತಿರುವರು ಎಂದು ಅವರುಗಳ ಹೆಸರನ್ನು ನಮೋದಿಸಿ, ಧೃಢಿಕರಿಸಿ ಮಾಹಿತಿ ಹಕ್ಕಿನಡಿ ಮಾಹಿತಿ ಸಲ್ಲಿಸಿರುವರು....



ಸದರಿ ಮಾಹಿತಿಯನ್ನೆ ಬೆನ್ನತ್ತಿ ಮಾನ್ಯ ತಾಲೂಕಾ ಆರೋಗ್ಯಾಧಿಕಾರಿಗಳಿಗೆ ಪ್ರಶ್ನೇ ಮಾಡಿ ಇವರ ವಿರುದ್ದ ಕಾನೂನು ಕ್ರಮ ಯಾಕೆ... ಕೈಗೊಂಡಿರುವದಿಲ್ಲ ಎಂದು ಪ್ರಶ್ನಿಸಿದಾಗ... ಸದರಿಯವರಿಗೆ ಇಗಾಗಲೆ ಸುಮಾರು ಸಾರಿ ನೋಟಿಸ್ ಜಾರಿ ಮಾಡಿರುವೆವು.... ತಮ್ಮ ಕ್ಲಿನಿಕ್ ಗಳು ಅನಧಿಕೃತವಾಗುದ್ದು ತಾವು ನಕಲಿ ವೈದ್ಯರಾಗಿದ್ದು ತಮ್ಮ ಕ್ಲಿನಿಕ್ ಗಳನ್ನು ಬಂದ್ ಮಾಡಬೇಕೆಂದು ತಿಳಿಸಿರುವೆವು, ಆದರೆ ಇವರುಗಳು ಇಲ್ಲಿಯವರೆಗೆ ಬಂದ್ ಮಾಡಿರುವದಿಲ್ಲ...ನಾನೇನು ಮಾಡಲಿ ಎಂದು ಸಂಘಟನೆ ಮುಖಂಡರುಗಳಿಗೆ ಹಾರಿಕೆ ಉತ್ತರ ಕೊಟ್ಟು ಸುಮ್ಮನಾಗುತ್ತಿರುವರು....

ಇವರ ಉತ್ತರವನ್ನು ಪ್ರಶ್ನಿಸಿ ಮಾನ್ಯ ಅಪರ ನಿರ್ದೇಶಕರು ಉತ್ತರ ಕರ್ನಾಟಕ ವಿಜಯಪುರ ರವರಿಗೆ ನಕಲಿ ವೈದ್ಯರುಗಳ ಮೇಲೆ ಮಾನ್ಯ ತಾಲೂಕಾ ಆರೋಗ್ಯಾಧಿಕಾರಿಗಳು ಯಾವುದೇ ರೀತಿ ಕಾನೂನು ಕ್ರಮ ಕೈಗೊಳ್ಳದೆ... ಹಾರಿಕೆ ಉತ್ತರ ನೀಡುತ್ತಾ.. ಅವರ ಬೆಂಬಲವಾಗಿ ನಿಂತಂತೆ ಕಾಣುತ್ತದೆ ಎಂದು ತಿಳಿಸದಾಗ... ಮಾನ್ಯ ಅಪರ ನಿರ್ದೇಶಕರು ಉತ್ತರ ಕರ್ನಾಟಕ ವಿಜಯಪುರ ರವರು ಮಾನ್ಯ ತಾಲುಕಾ ಆರೋಗ್ಯಾಧಿಕಾರಿಗಳು ಮುದ್ದೇಬಿಹಾಳ ರವರಿಗೆ ದಿನಾಂಕ...... ರಂದು ಒಂದು ಆದೇಶ ಮಾಡುವರು ಮಾನ್ಯ ತಾಲೂಕಾ ಆರೋಗ್ಯಾಧಿಕಾರಿಗಳೆ ತಾವು ತಾಲೂಕಿನ ಏಕಒಇ ಪ್ರಾಧಿಕಾರದ ಅಧ್ಯಕ್ಷರು ಇರುವಿರಿ.. ಮತ್ತು ತಾವೇ ನಾಲತವಾಡ ಪಟ್ಟಣದಲ್ಲಿ ಇಂತಿಷ್ಟು ಜನ ನಕಲಿ ವೈದ್ಯರು ಇರುವರು ಎಂದು ಅವರ ಹೆಸರುಗಳನ್ನು ನಮೊದಿಸಿ, ದೃಢೀಕರಿಸಿ... ಮಾಹಿತಿ ಹಕ್ಕಿನಡಿ ವರದಿ ನೀಡಿರುವಿರಿ... ಆದ್ದ-ರಿಂದ ಈ ಕೂಡಲೆ ಸದರಿ ನಕಲಿ ವೈದ್ಯರುಗಳ ವಿರುದ್ದ ಸ್ಥಳೀಯ ಪೋಲಿಸ್ ಠಾಣೆಗೆ ಮಾಹಿತಿ ನೀಡಿ... ಸದರಿಯವರ ನಕಲಿ ಕ್ಲಿನಿಕ್ ಗಳನ್ನು ಬಂದ್ ಮಾಡಿಸಿದ ವರದಿಯನ್ನು ಕೂಡಲೆ ಲಿಖಿತ ರೂಪದಲ್ಲಿ ನಮ್ಮ ಕಾರ್ಯಾಲಯಕ್ಕೆ ವರದಿ ಸಲ್ಲಿಸಲು ಸೂಚಿಸಿ 6 ತಿಂಗಳ ಹಿಂದೆಯೇ ಆದೇಶ ಮಾಡಿರುವರು.

ಆದರೆ ಮಾನ್ಯ ತಾಲೂಕಾ ಆರೋಗ್ಯಾಧಿಕಾರಿಗಳುಮುದ್ದೇಬಿಹಾಳ ರವರು ಸದರಿ ನಕಲಿ ವೈದ್ಯರುಗಳ ಮೇಲ ಯಾವುದೆ ಕ್ರಮ ಕೈಗೊಳ್ಳದೆ.. ಇರುವದು ಹಲವಾರು ಅನುಮಾನಗಳಿಗೆಕಾರಣವಾಗಿದೆ.... ಸದರಿ ಅಧಿಕಾರಿಗಳು ನಕಲಿ ವೈದ್ಯರುಗಳಿಂದ ಪ್ರತಿ ತಿಂಗಳು ಮಾಮೂಲಿ ಪಡೆದುಕೊಂಡು ಅವರ ರಕ್ಷಣೆಗೆ ನಿಂತಿದ್ದಾ-ರೆ ಎನ್ನುವ ಗುನಾಮಿಗಳು ಕೇಳಿಬರುತ್ತಿವೆ... ಈ ಬಗ್ಗೆ ಸತ್ಯಾ-ಸತ್ಯೆತೆ ಅರಿಯಬೇಕಿದೆ. ಹಾಗೂ ಮೇಲಾಧಿಕಾರಿಗಳ ಆದೇಶವನ್ನು ನಿರ್ಲಕ್ಷಮಾಡಿರುವದುಮೇಲ್ನೋಟಕ್ಕೆ ಕಂಡು ಬಂದಿದೆ... ಇಂತಃ ನಿರ್ಲಕ್ಷತನದ ಅಧಿಕಾರಿಗಳಿಂದ.. ಸಾರ್ವಜನಿಕರ ಆರೋಗ್ಯದ ಮೇಲೆ ತೊಂದರೆಯಾಗುವದಕ್ಕೆ ಸದರಿ ಅಧಿಕಾರಿಗಳೆ ಕಾರಣವಾಗಿದ್ದು... ನಕಲಿ ವೈದ್ಯರುಗಳ ಮೇಲೆ ಕ್ರಮ ಆಗುವದಕಿಂತಃ ಇಂತಃ ನಿರ್ಲಕ್ಷ್ಯ ತನದ ಅಧಿಕಾರಿಗಳ ವಿರುದ್ದ ಕ್ರಮ ಕೈಗೊಳಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.

## ಸಮೃದ್ಧಿಯಾದ ದೇಶ ನಿರ್ಮಿಸಲು ಮಕ್ಕಳ ಆರೋಗ್ಯ ಮುಖ್ಯ ಶ್ರೀ ಬಸವರಾಜ ಶರಾಬಿ




ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ :ವರ್ಲ್ಡ್ ವಿಷನ್ಇಂಡಿಯಾ ಸ್ವ-ಯಂ ಸೇವಾಸಂಸ್ಥೆಯ ಅನೇಕ ಅಭಿವೃದ್ಧಿ ಕಾಯ ರ್ಕ್ರಮಉದ್ಘಾಟಿಸಿದರು, ಮಾತನಾಡಿಸಮೃದ್ಧಿದೇಶ ವನ್ನುನಿರ್ಮಿಸಲು ಮಕ್ಕಳ ಆರೋಗ್ಯ ಬಹಳ ಮುಖ್ಯ ಎಂದು ಹೇಳಿದರು ಮತ್ತು ಮಕ್ಕಳನ್ನುದ್ದೇಶಿಸಿ ಮಾತನಾಡಿರು.ಪೌಷ್ಟಿಕ ಆಹಾರಸೇವನೆಮಾಡುವುದರಿಂದ ಉತ್ತಮವಾದಆರೋಗ್ಯಹೊಂದಲು ಸಹಾಯವಾಗುತ್ತದೆ. ಸಂಸ್ಥೆಯವರುವಿತರಿಸುತ್ತಿರುವ ಪೌಷ್ಟಿಕ ಆಹಾರಧಾನ್ಯಗಳ ಕಿಟ್ನ್ನು ಉತ್ತಮವಾದ ರೀತಿಯಲ್ಲಿಉಪಯೋಗಿಸಿ ಕೊಂಡುಮಕ್ಕಳ ಆರೋಗ್ಯ ಗುಣಪಡಿಸಲು ಮನವಿ ಮಾಡಿದರು.ವರ್ಲ್ಡ್ ವಿಷನ್ಇಂಡಿಯಾಸಂಸ್ಥೆಯವರು ಮಾಡುತ್ತಿರುವಅಭಿವೃದ್ಧಿ ಕೆಲಸಗಳನ್ನುಶ್ಲಾಘನೀಯ ಎಂದು ಹೇಳಿದರು.ಶ್ರೀ ಅನಿಲ್ ತೇಜಪ್ಪಬಲ್ಲೂರುಕಸರ್ಂ ಸ್ಥೆಯವ್ಯವಸ್ಥಾಪಕರು ಸಂಸ್ಥೆಯಕಾರ್ಯಕ್ರಮಗಳ ಕುರಿತು ವಿವರಿಸಿದರು ಹಾಗುಸರಕಾರದೊಟ್ಟಿಗೆ ಅಭಿವೃದ್ಧಿ ಕಾರ್ಯಕ್ರಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಾಯ ಕೋರಿದ್ದರು.ಶ್ರೀಮಲ್ಲಣ್ಣ ದೇಸಾಯಿ,ಸಿಡಿಪಿಒ ಅವರು ಅಂಗನವಾಡಿಮಕ್ಕಳಿಗೆ ಸಮವಸ್ತ್ರಗಳನ್ನು ವಿತರಿಸಿ ಸಂಸ್ಥೆಮಾಡುತ್ತಿರುವ ಕೆಲಸಗಳನ್ನುಹೊಗಳಿದರು, ಕನ್ಯಾಕೋಳೂರುಗ್ರಾಮದಲ್ಲಿ ಅಂಗನವಾಡಿ ಮಕಳಿಗ 'ಸಮವಸ್ತ್ರಗಳನ್ನುಅಪೌಷ್ಟಿಕ ಮಕ್ಕಳಿಗೆ ಆಹಾರಧಾನ್ಯಗಳ ಕಿಟ್ಗಳನ್ನು ಹುಡುಗಿಯರಿಗೆ ಆರೋಗ್ಯ ಕಿಟ್ಗಳನ್ನು ವಿತರಿಸಲಾಯಿತು, ನಾಲ್ಕು ಫಲಾನುಭವಿಗಳಿಗೆಶೌಚಾಲಯ ನಿರ್ಮಿಸಿಕೊಳ್ಳಲು ತಲಾ 330,000ಸಹಾಯಧನನೀಡಲಾಯಿತು ಹಾಗು ಉನ್ನತ ಶಿಕ್ಷಣ-ಕ್ಕಾಗಿ 780,000, ಕಿರಣ ಅಂಗಡಿ ಇಟ್ಟುಕೊಳ್ಳಲು730,000 ಸಹಾಯಧನನೀಡಲಾಯಿತು, ಒಬ್ಬ ಫಲಾನುಭವಿಗೆ ಕುರಿ ಸಾಕಾಣಿಕೆಗಾಗಿ 30,000 ಸಹಾಯ ಮಾಡಲಾಯಿತು ಮುಖ್ಯ ಅತಿಥಿಗಳಾಗಿ ಶ್ರೀ. ಬಸವರಾಜ ಶರಾಬಿ ಮುಖ್ಯ ಕಾರ್ಯನಿರ್ವಾಹಕರುತಾಲೂಕ ಪಂಚಾಯತ್ ಶಹಾಪುರ್ ಕಾರ್ಯಕ್ರಮದಲ್ಲಿಶ್ರೀಮಲ್ಲಣ್ಣ ದೇಸಾಯಿ,ಮಕ್ಕಳಅಭಿವೃದ್ಧಿ ಕಾರ್ಯಕ್ರಮದಅಧಿಕಾರಿಗಳು ಅತಿಥಿಗಳಾಗಿಭಾಗವಹಿಸಿದ್ದರು. ಅಭಿವೃದ್ಧಿಕಾರ್ಯಕ್ರಮಗಳ ಉದ್ಘಾಟನೆ ಸರಕಾರಿ ಕಿರಿಯ ಪ್ರಾಥಮಿಕಶಾಲೆ ಕನ್ಯಾಕೋಳೂರುಗ್ರಾಮದಲ್ಲಿ ಜರುಗಿತು. ಸಿದ್ಧಣ್ಣ ಗೌಡ ಬಿರಾದಾರ, ಅಸಿಸ್ಟೆಂಟ್ ಸಿಡಿಪಿಓ ಸಂಗಣ್ಣ ನುಚ್ಚಿನ್ ಆರೋಗ್ಯ ಅಧಿಕಾರಿಗಳು, ಲಕ್ಷ್ಮ ಹಿರೇಮಠ,ಮುಖ್ಯಗುರುಗಳು, ಶ್ರೀ ರಾಜಣ್ಣ ಕರದಳ್ಳ ಗ್ರಾಮಾಭಿವೃದ್ಧಿಯ ಸಮಿತಿಯ ಅಧ್ಯಕ್ಷರು, ಶ್ರೀ ಸಾಬಣ್ಣ ಪೂಜಾರಿ ಶಾಲಾ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಮತ್ತು ಮೇಲಕಮ್ಮ ಅಂಗನವಾಡಿಯ ಮೇಲ್ವಿಚಾರಕರು, ಅಂಗನವಾಡಿಯ ಶಿಕ್ಷಕಿಯರು, ಮಕ್ಕಳು, ಪೋಷಕರು, ಶಾಲಾ ಶಿಕ್ಷಕರು, ಮೋಹನ್ ಕುಮಾರ್ ಹೊಸಮನಿ, ಅಶೋಕ್, ಶಿವಕುಮಾರ್ ಸ್ವಯಂ ಸೇವಕರು ಹಾಗು ಗ್ರಾಮದ ಹಿರಿಯರು ಭಾಗವಹಿಸಿದ್ದರು,ಈಕಾರ್ಯಕ್ರಮವನ್ನು ಶ್ರೀ.ಸುಂದರ್ ನಿರೂಪಿಸಿದರು.

# ಜಾಗರೂಕತನದಿಂದ ವಾಹನ ಚಾಲನೆ ಮಾಡಿ : ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ



ಮಲ್ಲಮ ನುಡಿ ವಾರ್ತೆ ಬೀದರ. ಜ. 23 : ನೂರು ಪ್ರಯಾಣಿಕರನ್ನು ಹೊತ್ತು ಒಯ್ಯುವ ರಸ್ತೆ ಸಾರಿಗೆ ನಿಗಮದಚಾಲಕರುಜವಾಬ್ದಾರಿ ವಹಿಸಿ ಜಾಗರೂಕತನದಿಂದ ಅಪಘಾತರಹಿತವಾಗಿ ವಾಹನ ಚಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಇಂದು ನಗರದ ಹಳೆಯ ಬಸ್ ನಿಲ್ದಾಣದಲ್ಲಿ ಬೀದರ್ ಮಾರ್ಗದ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹಾಗೂ ಜಿಲ್ಲಾಧಿಕಾರಿ ಕಚೇರಿ ವತಿಯಿಂದ ನಿಯೋಜಿಸಲಾದಹೊರಗುತ್ತಿಗೆ-ಯ ಚಾಲಕ ಅಭ್ಯರ್ಥಿಗಳಿಗೆ ಕಾರ್ಯಾದೇಶ ವಿತರಿಸಿ ಅವರು ಮಾತನಾಡಿದರು.

ಪ್ರತಿಚಾಲಕರುಪ್ರಾಮಾಣಿಕತೆಯಿಂದ ಮೈಯೆಲ್ಲಾ ಕಣ್ಣಾಗಿಸಿಕೊಂಡು ಸಾರ್ವಜನಿಕರಿಗೆ,ಪ್ರಯಾಣಿಕರಿಗೆ ತೊಂದರೆಯಾಗದಂತೆ ಸೇವೆ ಸಲ್ಲಿಸಬೇಕು. ರಸ್ತೆ ಸಂಚಾರ ನಿಯಮಗಳನ್ನು ತಪ್ಪದೇ ಪಾಲಿಸಬೇಕು. ವೇಗಮಿತಿ ನಿಯಂತ್ರಣ, ತಪ್ಪು ಚಾಲನೆ ಕಡೆ ಗಮನವಿಡಬೇಕು. ವಿದ್ಯಾರ್ಥಿಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಎಂದು ಚಾಲಕರಿಗೆ ಸೂಚಿಸಿದರು.

ಗುಲಬರ್ಗಾ ರಸ್ತೆ ಸಾರಿಗೆ ನಿಗಮದ ವಿಭಾಗದವ್ಯವಸ್ಥಾಪಕ ನಿರ್ದೇಶಕ ಎನ್.ರಾಚಪ್ಪ ಅವರು ಮಾತನಾಡಿ, ಇಡೀ ವಿಭಾಗದಲ್ಲಿ ಪ್ರಥಮ ಬಾರಿಗೆ ಜಿಲ್ಲಾಧಿಕಾರಿಗಳಕಚೇರಿವತಿಯಿಂದ ಹೊರಗುತ್ತಿಗೆ ಚಾಲಕರನ್ನು ನಿಯೋಜಿಸಲಾಗುತ್ತಿದೆ. ಈ ಹಿಂದೆ ವಿವಿಧ ಏಜೇನ್ಸಿಗಳಿಂದ ನಿಯೋಜಿಸಲಾಗಿತ್ತು. ಆವಾಗ ಚಾಲಕರು ವಿವಿಧ ರೀತಿಯ ತೊಂದರೆ ಅನುಭವಿಸುತಿದ್ದರು. ಆದ್ದರಿಂದ ಈ ಬಾರಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪಾರದರ್ಶಕವಾಗಿ ರೋಸ್ಟರ್ ಪ್ರಕಾರ ಮೆರಿಟ್ ಆಧಾರದ ಮೇಲೆ 150 ಜನ ಚಾಲಕ ಹಾಗೂ 50 ಜನ ಮೆಕ್ಯಾನಿಕ್ ಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಾಲಕರು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬೀದರ್ ವಿಭಾಗೀಯ ಸಾರಿಗೆ ನಿಯಂತ್ರಣ ಅಧಿಕಾರಿ ಆನಂದ್ ಭದ್ರಕಲೆ, ಮುಖ್ಯ ಭದ್ರತಾ ಅಧಿಕಾರಿ ಚಂದ್ರಕಾಂತ್‌ಫುಲೇಕರ್‌ಸೇರಿದಂತೆ ವಿವಿಧ ಅಧಿಕಾರಿ ಹಾಗೂ ಚಾಲಕರು ಉಪಸ್ಥಿತರಿದ್ದರು.

# ಸ್ವಾವಲಂಬಿ ಜೀವನಕ್ಕೆ ಸ್ವಯಂ ಉದ್ಯಮಗಳೇ ದಾರಿದೀಪ



ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಜ.23: ಜಿಲ್ಲೆಯ ಜನರು ಆರ್ಥಿಕ ಅಭಿವೃದ್ಧಿ ಹೊಂದಲು ಬೇಡಿಕೆ ಇರುವ ಸಣ್ಣ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಆರ್ಥಿಕವಾಗಿ ಮುಂದೆ ಬರಬೇಕೆಂದು ಸಿಡಾಕ್ ಜಂಟಿ ನಿರ್ದೇಶಕರಾದ ಜಿ. ಯು. ಹುಡೇದ ಅವರು ಹೇಳಿದರು.

ಜನವರಿ 22ರ ಬುಧವಾರ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ.ಕೆ.ಆರ್.ಡಿ.ಬಿ.), ಕಲಬುರಗಿ, ಕೌಶಲ್ಯಾಬೀವೃದ್ಧಿ, ಉದ್ಯಮಶಿಲತೆ ಹಾಗೂ ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮ ಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಕೆ.ಕೆ.ಆರ್.ಡಿ.ಬಿ. ಉದ್ಯೋಗ ಆವಿಷ್ಕಾರಯೋಜನೆ ಅಡಿಯಲ್ಲಿ ಕಂಪ್ಯೂಟರ್ ಹಾರ್ಡವೇರ & ನೆಟ್‌ವರ್ಕಿಂಗ್ ಬಗ್ಗೆ 30 ದಿನಗಳ ನಿರ್ದಿಷ್ಟ ವಲಯಾಧಾರಿತ ಉದ್ಯಮಶೀಲತಾಬಿವೃದ್ಧಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ತರಬೇತಿ ಪಡೆದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಕ್ರೀಯಾಶೀಲತೆಯಿಂದ ಯಾವುದೇ ಕಾರ್ಯ ಮಾಡಿದರೆ ಅದರಲ್ಲಿ ಯಶಸ್ಸು ಕಾಣಲು ಸಾಧ್ಯವಿದೆ. ಕೌಶಲ್ಯಾಧಾರಿತ ಸೇವಾವಲಯಗಳ ಉದ್ಯಮಗಳಿಗೆ ಹೆಚ್ಚು ಬೇಡಿಕೆ ಇರುತ್ತದೆ ಅದರಲ್ಲಿಯೂ ವಿಶೇಷವಾಗಿ ಕಂಪ್ಯೂಟರ್ ಹಾರ್ಡವೇರ್ ಮತ್ತು ನೆಟ್‌ವರ್ಕಿಂಗ್ ಉದ್ಯಮಗಳಿಗೆ ಯಾವಾಗಲೂ ಬೇಡಿಕೆ ಇರುತ್ತದೆ. ಇವು ಸೂಕ್ತವಾದ ತರಬೇತಿ ಕಾರ್ಯಕ್ರಮಗಳಾಗಿದ್ದು, ಪಡೆದ ತರಬೇತಿಯ ಜ್ಞಾನವನ್ನು ಸದುಪಯೋಗಪಡಿಸಿಕೊಂಡು ಉದ್ಯಮ ಪ್ರಾರಂಭಿಸಿ ಆರ್ಥಿಕವಾಗಿ ಮುಂದುವರೆಯಬೇಕು ಎಂದು ತಿಳಿಸಿ, ಸಿಡಾಕ್ ಮುಖಾಂತರ ಹಮ್ಮಿಕೊಂಡಿರುವ ಈ ತರಬೇತಿಗಳು ಉತ್ತಮ ಆಯ್ಕೆಯಾಗಿವೆ ಮತ್ತು ತರಬೇತಿಯು ವ್ಯವಸ್ಥಿತವಾಗಿ ನಡೆಸಲಾಗಿದೆ ಎಂದು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ತಾಲೂಕು ಪರಿಶಿಷ್ಠ ವರ್ಗಗಳ ಕಲ್ಯಾಣಾಧಿಕಾರಿ ರುಕ್ಮಿಣಿ ಬಾಯಿ ಅವರು ಮಾತನಾಡಿ, ರಾಯಚೂರು ಜಿಲ್ಲೆಯಲ್ಲಿ ಕಂಪ್ಯೂಟರ್ ಹಾರ್ಡವೇರ್ ಮತ್ತು ನೆಟ್ ವರ್ಕಿಂಗ್‌ನಿಂದ ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಲು ಸರ್ಕಾರದ ಅನೇಕ ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿ ಪರಿಶಿಷ್ಠ ವರ್ಗಗಳ ಇಲಾಖೆಯ ಯೋಜನೆಗಳ ಬಗ್ಗೆ ಸಮಾರಂಭದಲ್ಲಿ ವಿವರಿಸಿದರು.

ಈ ವೇಳೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಶುಪಾಲರರಾದ ಯಂಕಣ್ಣ ಅವರು ಮಾತನಾಡಿ, ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಿ ಉದ್ಯಮಗಳನ್ನು ಸ್ವಯಂ ಉದ್ಯೋಗಿಗಳಾಗುವದರ ಜೊತೆಗೆ ಬೇರೆಯವರಿಗೂ ಕೆಲಸಕೊಡುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ.ರವಿ., ಶಿಬಿರಾರ್ಥಿಗಳಿಗೆ ಪೇರೇಪಿಸುತ್ತಾ ಸಿಕ್ಕಿರುವಂತ ಅವಕಾಶಗಳನ್ನು ಸರಿಯಾದ ಮಾರ್ಗದಲ್ಲಿ ಉಪಯೋಗಿಸಿಕೊಂಡು ಮುಂದಿನ ದಿನದಲ್ಲಿ ಉದಯೋನ್ಮುಖ ಉದಮಶೀಲಾರಾಗಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಂಪನ್ಮೂಲವ್ಯಕ್ತಿಗಳಾದ ಆರ್. ವಿಕಾಂತ ನವರ್, ಬೇತುದಾರರಾದ ಶ್ರೀ ಸೈಯದ್, ಪೈಯಾರುಖ ಅಲಿ, ನಾಗರಾಜ ಕೆ, ಶಿವಕುಮಾರ ಸೇರಿದಂತೆ ಇತರರು ಇದ್ದರು.

# ಜ.26ರಂದು ಜಿಲ್ಲಾಡಳಿತದಿಂದ ಗಣರಾಜ್ಯೋತ್ಸವ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಜ.23: ಜಿಲ್ಲಾಡಳಿತದಿಂದ ಜನವರಿ 26ರ ಬೆಳಿಗ್ಗೆ 09 ಗಂಟೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವ ದಿನಾಚರಣೆ-ಯ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ರಾಷ್ಟ್ರ ಧ್ವಜಾರೋಹಣನೆರವೇರಿಸುವವರು. ಸಣ್ಣನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಭಾಜಪೇಯಿ, ಜಿಲ್ಲಾ ಗಣರಾಜ್ಯೋತ್ಸವ ಆಚರಣಾ ಸಮಿತಿಯ ಅಧ್ಯಕ್ಷರು ಆಗಿರು ರಾಯಚೂರ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ.ಪುಟ್ಟಮಾದಯ್ಯ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ: ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಜನವರಿ 26ರ ಸಂಜೆ 6 ಗಂಟೆಗೆ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

# ರಾಯಚೂರು ಕೃಷಿ ವಿವಿಯಲ್ಲಿ

## ಜ.24 ರಿಂದ ಮೂರು ದಿನ ಯುವಜನೋತ್ಸವ

ರಾಯಚೂರು ಜ.23 : ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು 2025ರ ಜನವರಿ 24, 25 ಮತ್ತು 26 ರಂದು 15ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವನ್ನು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದ ಶ್ರೀ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ಆಯೋಜಿಸುತ್ತಿದೆ.

ಈ ಮೂರು ದಿನಗಳಲ್ಲಿ ರಾಯಚೂರು ಕೃ.ವಿ.ವಿಯ ಅಧೀನದಲ್ಲಿ ಬರುವ ಕೃಷಿ ಮಹಾವಿದ್ಯಾಲಯ, ರಾಯಚೂರು, ಭೀಮರಾಯನಗುಡಿ, ಕಲಬುರಗಿ, ಹಗರಿ, ಗಂಗಾವತಿ ಮತ್ತು ರಾಯಚೂರಿನಲ್ಲಿರುವ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸುಗಮ ಸಂಗೀತ, ವ್ಯಂಗಚಿತ್ರಕಲೆ, ಸಮೂಹ ಗಾಯನ, ಏಕಾಂಕ ನಾಟಕ, ರಂಗೋಲಿ ಸ್ಪರ್ಧೆ, ಭಾಷಣ ಸ್ಪರ್ಧೆ, ಜಾನಪದ ನೃತ್ಯಮುಂತಾದ ಸ್ಪರ್ಧೆಗಳಲ್ಲಿ ಭಾಗವಹಿಸುವರು.

ಈ ಯುವಜನೋತ್ಸವದ ಸಾಂಸ್ಕೃತಿಕ ಮೆರವಣಿಗೆ ಹಾಗೂ ಉದ್ಘಾಟನಾ ಸಮಾರಂಭವು 25ನೇ ಜನವರಿ 2025 ಶನಿವಾರದಂದು ಪಶುಪಾಲನೆ ಮತ್ತು ಪಶುಸಂಗೋಪನೆ ಇಲಾಖೆಯ ನಿವೃತ್ತ ಉಪ ನಿರ್ದೇಶಕರು ಮತ್ತು ಹಾಸ್ಯ ಕಲಾವಿದರಾದ ಡಾ.ಬಸವರಾಜ ಬೆಣ್ಣೆ ಅವರಿಂದ ನೆರವೇರಲಿದೆ. ಮುಖ್ಯ ಅತಿಥಿಗಳಾಗಿ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಎಂ. ಹನುಮಂತಪ್ಪ ಅವರು ಭಾಗವಹಿಸುವರು.

ರಾಯಚೂರು ಕೃಷಿ ಮಹಾವಿದ್ಯಾಲಯದ ಡೀನ್ ಡಾ.ಕೆ.ನಾರಾಯಣರಾವ್ ಅವರು ಅಧ್ಯಕ್ಷತೆ ವಹಿಸುವರು.

ಗೌರವಾನ್ವಿತ ಅತಿಥಿಗಳಾಗಿ ಕೃ.ವಿ.ವಿ.ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಭಾಗವಹಿಸುವರು. ಈ ಸಂದರ್ಭದಲ್ಲಿ ಎಲ್ಲಾ ಕಾಲೇಜಿನ ಡೀನ್‌ಗಳು, ಅಧಿಕಾರಿಗಳು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಉಪಸ್ಥಿತರಿರುವರು ಎಂದು ವಿವಿಯ ಪ್ರಕಟಣೆ ತಿಳಿಸಿದೆ.

# ನೇತಾಜಿ ಸುಭಾಷ್ ಚಂದ್ರ ಬೋಸ್ ರವರು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರು : ವೀರಭದ್ರಪ್ಪ ಉಪ್ಪಿನ್



ಮಲ್ಲಮ್ಮ ನುಡಿ ವಾರ್ತೆ ಬೀದರ. ಜ. 23 : ನೇತಾಜಿ ಸುಭಾಷಚಂದ್ರ ಬೋಸ್ ರವರು ಅಪ್ಪಟ ದೇಶ ಭಕ್ತರು ಹಾಗೂ ಅಪ್ರತಿಮ ಸ್ವಾತಂತ್ರ್ಯ ಹೋರಾ ಟಗಾರರಾಗಿದ್ದರು ಎಂದು ಪಶು ವೈದ್ಯಕೀಯ ವಿಶ್ವ ವಿದ್ಯಾಲಯದ ನಿವೃತ್ತ ಅಧಿಕಾರಿ ವೀರಭದ್ರಪ್ಪ ಉಪ್ಪಿನ್ ರವರು ಅಭಿಪ್ರಾಯ ಪಟ್ಟರು.

ಅಖಿಲ ಭಾರತ ವಿಶ್ವ ವಿದ್ಯಾಲಯ ಗಳ ನೌಕರರ ಒಕ್ಕೂಟ ಹಾಗೂ ಪ್ರಗತಿ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಯಿಂದ ಬೀದರನ ಬಸವನಗರ ಬಡಾವಣೆಯಲ್ಲಿ, ನಿವೃತ್ತ ಸೈನಿಕರ ಉಪಸ್ಥಿತಿಯಲ್ಲಿ ಆಯೋಜಿಸಲಾದ ನೇತಾಜಿ ಸುಭಾಷ ಚಂದ್ರ ಬೋಸ್ರವರ 127 ನೆಯ ಜನ್ಮದಿನಾಚರಣೆಯಲ್ಲಿ ಮಾತನಾಡುತ್ತಿದ್ದರು.

ಓಡಿಷಾ ರಾಜ್ಯದ ಕಟಕ್ ನಲ್ಲಿ 23/1/1897 ರಂದು ಜನಿಸಿದ್ದ ಬೋಸ್ ರವರು 48 ವರ್ಷಗಳ ಕಾಲ ಬದುಕಿ ದ್ದರೆನ್ನುವ ಮಾಹಿತಿ ಇದೆ. 18/8/1945 ರಂದು ವಿಮಾನ ಅಪಘಾತದಲ್ಲಿ ಮರಣ ಹೊಂದಿದ್ದರೆನ್ನುವ ಅಸ್ಪಷ್ಟ ಮಾಹಿತಿಯೂ ಇದೆ. ಅತ್ಯಂತ ಚಿಕ್ಕ ವಯ ಸ್ಸಿನಲ್ಲೇ ಇಂಡಿಯನ್ ನ್ಯಾಶನಲ್ ಆರ್ಮಿಯನ್ನು ಕಟ್ಟಿ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ್ದ ಬೋಸ್ ರವರು ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿದ್ದರು ಎಂದು ತಿಳಿಸಿದರು.

ಪರಿಸರ ಜಾಗೃತಿ ಅಭಿಯಾನದ ಅಂಗವಾಗಿ, ಸೈನಿಕರಿಗೆ ಸಸಿ ವಿತರಣೆ ಮಾಡಲಾಯಿತು. ಬ್ರಿಮ್ ಆಸ್ಪತ್ರೆಯಲ್ಲಿ ತಂತ್ರಜ್ಞ ಅಧಿಕಾರಿಯಾದ ಅರವಿಂದ ಕುಲಕರ್ಣಿ ಯವರು ಮಾತನಾಡುತ್ತಾ, ಇಂದಿನ ದಿನಗಳಲ್ಲಿ ಯುವ ಜನತೆಯಲ್ಲಿ ದೇಶಾಭಿಮಾ ನದ ಕೊರತೆ ಕಂಡು ಬರು ತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು. ಚಿಕ್ಕ ವಯಸ್ಸಿನಲ್ಲೇ ಬೋಸ್ ರಲ್ಲಿದ್ದ ದೇಶ ಪ್ರೇಮವನ್ನು ಯುವ ಜನತೆಯು ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳ ಬೇಕೆಂದು ಕರೆ ನೀಡಿದರು. ಅದೇ ರೀತಿ ದುಶ್ಚಟಗಳಿಗೆ ಬಲಿಯಾಗ ದಂತೆ ಆದರ್ಶ ಜೀವನ ನಡೆಸಬೇಕೆಂದು ಕಿವಿ ಮಾತು ಹೇಳಿದರು. ಬಿಎಸ್ಎಫ್ ನ ನಿವೃತ್ತ ಸೈನಿಕ ನರೇಂದ್ರ ಕುಮಾರ ರವರು ಪ್ರಾಸ್ತಾವಿಕವಾಗಿ ಮಾತ ನಾಡಿ, ದಿವಂಗತ ಸುಭಾಷ ಚಂದ್ರ ಬೋಸ್ ರವರ ಜನ್ಮ ದಿನಾಚರಣೆಯಲ್ಲಿ ಭಾಗಿಯಾಗಲು ತಮಗೆ ಹಾಗೂ ತಮ್ಮ ಸಹೋದ್ಯೋಗಿ ಮಿತ್ರರಿಗೆ ಅತೀವ ಸಂತಸವೆನಿಸುತ್ತಿದೆ ಎಂದರು.

ನಗರಸಭೆಯ ನಿವೃತ್ತ ಉದ್ಯೋಗಿ ಶ್ರೀಮತಿ ರತ್ನಮ್ಮನವರು ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಸೈನಿಕ ಸಂಗಮೇಶ್ ಕಾರಾಮುಂಗಿಯವರು ಸ್ವಾಗತಿಸಿದರು. ನಿವೃತ್ತ ಸೈನಿಕ ಗೌತಮ್ ನಿರೂಪಿಸಿದರು. ರವಿಕುಮಾರ ರವರು ವಂದಿಸಿದರು. ದೇಶಭಕ್ತಿ ಗೀತೆಯ ಗಾಯನದೊಂದಿಗೆ ಆರಂಭವಾದ ಕಾರ್ಯಕ್ರಮವು ಸಾಮೂಹಿಕ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಂಡಿತು. ಪ್ರವೀಣಕುಮಾರ, ಗಣೇಶ, ಬಸವರಾಜ, ನಂದು, ಸುವರ್ಣ, ಶಿಲ್ಪಾರಾಣಿ, ಅನಿತಾ, ಸರಸ್ವತಿ ಹಾಗೂ ಬಡಾವಣೆಯ ಅನೇಕ ಜನರು ಹಾಜರಿದ್ದರು.

# ದಿನಬಳಕೆ ವಸ್ತುಗಳ ಮೇಲೆ ಕನ್ನಡ ಬಳಕೆ: ಫೆ. 2 ರಿಂದ ಕರವೇ ಹೋರಾಟ



ಮಲ್ಲಮ್ಮ ನುಡಿ ವಾರ್ತೆ ಬೀದರ:ಜ.23: ದಿನಬಳಕೆ ವಸ್ತುಗಳ ಮೇಲೆ ಶೇ 60 ರಷ್ಟು ಭಾಗದಲ್ಲಿ ಕನ್ನಡ ಬಳಸಲು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಫೆಬ್ರುವರಿ 2 ರಿಂದ ಜಿಲ್ಲೆಯಲ್ಲಿ ಹೋರಾಟ ನಡೆಸಲಿದೆ.

ವೇದಿಕೆಯ ರಾಜ್ಯ ಅಧ್ಯಕ್ಷ ನಾರಾಯಣಗೌಡರ ನೇತೃತ್ವದಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಯಲಿದ್ದು, ಜಿಲ್ಲಾ ಘಟಕದ ಮುಂದಾಳತ್ವದಲ್ಲಿ ಜಿಲ್ಲಾ, ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲಿ ಹೋರಾಟ ನಡೆಸಿ ಉತ್ಪನ್ನಗಳ ಮೇಲೆ ಕನ್ನಡ ಬಳಕೆಗೆ ಸರ್ಕಾರದ ಮೇಲೆ ಒತ್ತಡ ತರಲಾಗುವುದು ಎಂದು ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಮುಧೋಳ ತಿಳಿಸಿದ್ದಾರೆ.

ದಿನಬಳಕೆ ವಸ್ತುಗಳ ಮೇಲೆ ಕನ್ನಡ ಬಳಸಿದರೆ ಕನ್ನಡಿಗರಿಗೆ ತಾವು ಬಳಸುವ ವಸ್ತುಗಳ ಸಮಗ್ರ ಮಾಹಿತಿ ದೊರೆಯುತ್ತದೆ. ಚೀನಾದಲ್ಲಿ ಈಗಾಗಲೇ ಈ ವ್ಯವಸ್ಥೆ ಇದೆ. ನಮ್ಮಲ್ಲೂ ಈ ವ್ಯವಸ್ಥೆ ಜಾರಿಗೆ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕದಲ್ಲಿ ಮಾರಾಟವಾಗುವ, ಬಳಕೆಯಾಗುವ ಎಲ್ಲ ಬಗೆಯ ಉತ್ಪನ್ನಗಳ ಏಜೆನ್ಸಿಗಳು ಪರ ಭಾಷಿಕರ ಪಾಲಾಗುತ್ತಿದ್ದು, ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ಎಲ್ಲ ಉತ್ಪನ್ನಗಳ ಏಜೆನ್ಸಿ ಇಲ್ಲವೇ ಏಜೆನ್ಸಿಯ ಪಾಲುದಾರಿಕೆಯನ್ನು ಕನ್ನಡಿಗರಿಗೆ ಕೊಡಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

ರಾಜ್ಯದಲ್ಲಿನ ಎಲ್ಲ ಬಗೆ-ಯ ರಾಷ್ಟ್ರೀಯ, ಖಾಸಗಿ, ಗ್ರಾಮೀಣ, ಸಹಕಾರಿ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಚಿನ್ನದ ಅಡಮಾನ ಸಂಸ್ಥೆಗಳು, ಜೀವ ವಿಮಾ ಸಂಸ್ಥೆಗಳು, ಆರೋಗ್ಯ ವಿಮಾ ಸಂಸ್ಥೆಗಳು ಹಾಗೂ ಇತರ ಯಾವುದೇ ಸ್ವರೂಪದ ಹಣಕಾಸು ಸಂಸ್ಥೆಗಳ 'ಸಿ' ಮತ್ತು 'ಡಿ' ದರ್ಜೆಯ ಶೇ 100 ರಷ್ಟು ಹುದ್ದೆಗಳು ಹಾಗೂ ಇತರ ಹುದ್ದೆಗಳಲ್ಲಿ ಶೇ 60 ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

# ಫೆ.01ರಂದು ಮಡಿವಾಳ ಮಾಚಿದೇವ ಜಯಂತಿ: ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಜ.23: ಮಡಿವಾಳ ಮಾಚಿದೇವ ಜಯಂತಿಯನ್ನು ಫೆ.01ರಂದು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜನವರಿ 23ರಂದು ನಡೆದ ಮಡಿವಾಳ ಮಾಚಿದೇವ ಜಯಂತಿಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಫೆ.01ರ ಶನಿವಾರ ಬೆಳಿಗ್ಗೆ 9 ಗಂಟೆಗೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಮೆರವಣಿಗೆಯು ಆರಂಭವಾಗಿ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದವರೆಗೆ ಸಂಚರಿಸಲಿದ್ದು, ಮಹಾನಗರ ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಕಾಳಜಿ ವಹಿಸಿ ಮೆರವಣಿಗೆ ಹೊರಡುವ ಮಾರ್ಗದಲ್ಲಿ ಮತ್ತು ರಂಗಮಂದಿರದ ಆವರಣದ ಸುತ್ತಲು ಶುಚಿತ್ವಕ್ಕೆ ಅಗತ್ಯ ಏರ್ಪಾಡು ಮಾಡಬೇಕು. ಕಾರ್ಯಕ್ರಮದಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ರಂಗಮಂದಿರದ ಆವರಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂದು ಸೂಚನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಅಂದು ಈ ಕಾರ್ಯಕ್ರಮಕ್ಕೆ ಕಲಾ ತಂಡಗಳ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಿಸಿ ವಿತರಿಸಬೇಕು ಜೊತೆಗೆ ವೇದಿಕೆ ಕಾರ್ಯಕ್ರಮವು ನಡೆಯಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆಯುವ ಈ ಸಮಾರಂಭದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಸಮಾಜದ ಮುಖಂಡರು ಹಾಗೂ ಶಾಲಾ ಕಾಲೇಜಿನ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಸಭೆಯಲ್ಲಿ ರಾಯಚೂರು ತಾಲೂಕು ಗ್ರೇಡ್-2 ತಹಶೀಲ್ದಾರ್ ಭೀಮರಾಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಇದ್ದರು.

# ವೈಜ್ಞಾನಿಕ, ವೈಚಾರಿಕ ಪ್ರಜ್ಞೆ ಇಂದಿನ ಯುವಕರಿಗೆ ಅಗತ್ಯ : ನ್ಯಾಯಾಧೀಶ ಪ್ರಶಾಂತ್ ನಾಗಲಾಪುರ್



ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ: ಇಂದಿನ ಯುವಕರಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆಯ ಪ್ರಜ್ಞೆ ಅಗತ್ಯವಾಗಿರಬೇಕಿದೆ ಎಂದು ಸಿವಿಲ್ ನ್ಯಾಯಧೀಶ ಪ್ರಶಾಂತ್ ನಾಗಲಾಪುರ್ ಹೇಳಿದರು.

ನಗರದ ಎಪಿಎಂಸಿ ಆವರಣದಲ್ಲಿನ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರ ಬಾಲಕರ ತಾಂತ್ರಿಕ ವಿದ್ಯಾರ್ಥಿ ನಿಲಯದಲ್ಲಿ ತಾಲೂಕು ಕಾನೂನುಗಳ ಸೇವಾ ಸಮಿತಿ, ವಕೀಲರ ಸಂಘ ಸೇರಿ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆಯನ್ನು ಉದ್ಘಾಟಿಸಿ ಬುಧವಾರ ಮಾತನಾಡಿದರು, ಭಾರತ ಸದೃಢವಾಗಲು ಯುವಕರಲ್ಲಿ ನೈತಿಕ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡಬೇಕಿದೆ. ಯುವಕರು ದೇಶದ ಸಂವಿಧಾನದ ಆಶಯಗಳನ್ನು ಅರಿಯಬೇಕು. ಎಲ್ಲಾರಿಗೂ ಸಮಾನತೆ, ಶಿಕ್ಷಣ, ಕಾನೂನು ಸಲಹೆ, ಮೂಲಭೂತ ಸೌಕರ್ಯಗಳು ಉಚಿತವಾಗಿ ಸಿಗುವಂತಾಗಬೇಕಿದೆ. ಪ್ರತಿಯೊಬ್ಬರಿಗೂ ಸಂವಿಧಾನಿಕ ಪ್ರಜ್ಞೆಯನ್ನು ವೃದ್ಧಿಸುವಲ್ಲಿ ಸಂಘ ಸಂಸ್ಥೆಗಳು ಯುವಕರಿಗೆ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಿದೆ. ಸಂವಿಧಾನದಲ್ಲಿರುವ ಹಕ್ಕುಗಳಷ್ಟೇ, ಕರ್ತವ್ಯಗಳಿಗೆ ಆದ್ಯತೆ ನೀಡಬೇಕು. ಸಮ ಸಮಾಜ ಸೃಷ್ಟಿಸುವಲ್ಲಿ ಇಂದಿನ ಯುವಕರ ಪಾತ್ರ ಹಿರಿದಾಗಿದೆ. ಮಕ್ಕಳಿಗೆ, ಮಹಿಳೆಯರಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ಪುರುಷ ಪ್ರದಾನ ಸಮಾಜವನ್ನು ಪರಿವರ್ತಿಸಬೇಕು. ಯುವಕರಲ್ಲಿ ಸಂವಿಧಾನ ಜೀವನ ಶೈಲಿಯ ಒಂದು ಭಾಗವಾಗಬೇಕಿದೆ. ವಿವೇಕಾನಂದರು ಯುವಕರ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರ ತತ್ವಾದರ್ಶಗಳು ಯುವಕರು ಅಳವಡಿಸಿಕೊಂಡಾಗ ರಾಷ್ಟ್ರೀಯ ಯುವ ದಿನಾಚರಣೆ ಅರ್ಥಪೂರ್ಣವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶರಾದ ಜಿ.ಸಂಜೀವ್ ಕುಮಾರ್, ಜೆ.ಚೈತ್ರಾ ಯುವಕರನ್ನು ಕುರಿತು ಮಾತನಾಡಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಕಲ್ಯಾಣಧಿಕಾರಿ ಬಿ.ಎಸ್.ಗುರುಬಸವರಾಜ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ಹಾಸ್ಟೆಲ್ ಮೇಲ್ವಿಚರಕ ಎಲ್.ಶೇಖರ್ ನಾಯಕ್, ಮಹಾಂತೇಶ್ ನರಗುಂದ ಇದ್ದರು.

# ಜ.28 ಕಂದಕೂರಿನಲ್ಲಿ ಮಾಜಿ ಶಾಸಕ ಲಿಂ. ನಾಗನಗೌಡ ಕಂದಕೂರ ಪುಣ್ಯಸ್ಮರಣೋತ್ಸವ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಬರುವ ಜ. 28 ಮಂಗಳವಾರ ಬೆಳಿಗ್ಗೆ 11ಕ್ಕೆ ಗುರುಮಿಠಕಲ್‌ತಾಲ್ಲೂಕಿನಕಂದಕೂರ ಗ್ರಾಮದಲ್ಲಿ ಮಾಜಿ ಶಾಸಕ ಲಿಂ. ನಾಗನಗೌಡ ಕಂದಕೂರ ಅವರ ಪ್ರಥಮ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಷ್ಚಂದ್ರ ಕಟಕಟಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂದಕೂರ ಕುಟುಂಬದ 17 ಎಕರೆ ಜಮೀನಿನಲ್ಲಿ ಅವರ ಕುಟುಂಬ ಹಾಗೂ ಅಭಿಮಾನಿ ಬಳಗದಿಂದ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಮೊದಲು ಅವರ ಸ್ಮಾರಕಕ್ಕೆ ವಿಶೇಷ ಪೂಜೆ ಕೈಂಕರ್ಯಗಳು ನೆರವೇರಿದ ನಂತರ 5 ಗೋದಾನಗಳ ಮಾಡುವ ಮೂಲಕ ಸ್ಮಾರಕ ಉದ್ಘಾಟಿಸಲಾಗುವುದು,

ಈ ಪವಿತ್ರ ಕಾಯಕ್ರಮದಲ್ಲಿ ತುಮಕೂರ ಸಿದ್ದಗಂಗಾ ಮಠದ ಪೀಠಾಧಿಪತಿಗಳಾದ ಸಿದ್ದಲಿಂಗ ಮಹಾಸ್ವಾಮಿಜಿ,ಅಬ್ಬೆತುಮಕೂರಿನ ಡಾ. ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಜಿ, ನಾಲವಾರದ ಸಿದ್ಧತೋಟೇಂದ್ರ ಶಿವಾಚಾರ್ಯ ಸ್ವಾಮಿಜಿ, ದೇವಾಪೂರದ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಜಿ, ಸೊನ್ನದ ಡಾ, ಶಿವಾನಂದ ಮಹಾಸ್ವಾಮಿಜಿ, ಬೆಳಗಾವಿಯ ಮುಕ್ತಿಮಠದ ಶಿವಸಿದ್ದ ಸೋಮೇಶ್ವರ ಸ್ವಾಮಿಜಿ, ರಸ್ತಾಪುರದ ಶರಭೇಶ್ವರ ಸ್ವಾಮಿಜಿ, ಗುರುಮಿಠಕಲ್ ಖಾಸಾ ಮಠದ ಶಾಂತವೀರ ಮಹಾಸ್ವಾಮಿಜಿ, ಹೆಡಗಿಮದ್ರಾದ ಮಲ್ಲಿಕಾರ್ಜುನ ಶಿವಾಚಾರ್ಯರು,ನೇರಡಗುಂಬದ ಪಂಚಮಸಿದ್ದಲಿಂಗ ಮಹಾಸ್ವಾಮಿಜಿ, ಯಲ್ಹೇರಿಯ ಕೊಟ್ಟೂರೇಶ್ವರ ಶಿವಾಚಾರ್ಯ ಸ್ವಾಮಿಜಿ, ತಂಗಡಪಲ್ಲಿಯ ಶಿವಯೋಗಿ ಮಹಾಸ್ವಾಮಿ, ಶಹಾಪುರದ ಚರಬಸವೇಶ್ವರ ಸಂಸ್ಥಾನ ಮಠದ ಬಸವಯ್ಯ ಶರಣರು, ಗಿರಿಮಠ ಲಕ್ಷ್ಮೀಪುರದ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು, ಶಹಾಪುರದ ಸೂಗೂರೇಶ್ವರ ಮಹಾಸ್ವಾಮಿಜಿ, ಕನ್ಯೆಕೋಳುರದ ಚೆನ್ನವೀರ ಶಿವಾಚಾರ್ಯ ಮಹಾಸ್ವಾಮಿಜಿ, ಚೇಗುಂಟಾದ ಡಾ.ಕ್ಷೀರಲಿಂಗ ಮಹಾಸ್ವಾಮಿಜಿ, ಕಡೇಚೂರದ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಜಿ, ಗದ್ದುಗೆಮಠ ಅಳ್ಳಳ್ಳಿ ನಾಗಪ್ಪಯ್ಯ ಮಹಾಸ್ವಾಮಿಜಿ, ದಾಸಬಾಳ ಮಠ ಯಾದಗಿರಿಯ ವೀರೇಶ್ವರ ಮಹಾಸ್ವಾಮಿಜಿ, ಭಾಗವಹಿಸಿ ಆಶೀರ್ವಚನ ನೀಡುವರು ಎಂದು ತಿಳಿಸಿದರು.

ಅದರಂತೆ ಸೂಗೂರ .ಎನ್ ಬೋಜಲಿಂಗೇಶ್ವರ ಮಠದ ಹಿರಗಪ್ಪತಾತನವರು, ಕೌಳೂರದ ಸಿದ್ದರಾಮ ದೇವರು, ಹಲ್ಕರ್ಟಿಯ ಮುನಿಂದ್ರ ಶಿವಾಚಾರ್ಯ ಸ್ವಾಮಿಜಿ, ಹೊನಗೇರಾದ ನಿಜಲಿಂಗ ಮಹಾಸ್ವಾಮಿಜಿ ಗುಂಡಗುರ್ತಿ, ದಿಗ್ಗಾಂವ್‌ನ ಸಿದ್ದವೀರ ಶಿವಾಚಾರ್ಯ ಮಹಾಸ್ವಾಮಿಜಿ, ಬೆನಕನಹಳ್ಳಿಯ ಅಭಿನವ ಕೇದಾರಲಿಂಗ ಶಿವಾಚಾರ್ಯರು, ಹಂದರಕಿಯ ಲಿಂಗಪ್ಪತಾತನವರು, ಯಾದಗಿರಿ ಏಕದಂಡಗಿ ಮಠದ ಕುಮಾರ ಮಹಸ್ವಾಮಿಜಿ, ಸೇಡಂನ ಪಂಚಾಕ್ಷರಿ ಮಹಾಸ್ವಾಮಿಜಿ, ಜಾಕನಳ್ಳಿಯ ಗವಿಯಪ್ಪತಾತನವರು, ಅರಕೇರಾ (ಬಿ)ನ ಗುರುಲಿಂಗ ಮಹಾಸ್ವಾಮಿಜಿ, ಕೆಂಭಾವಿ ಹಿರೇಮಠದ ಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಜಿ, ಸಗರದ ಸೋಮೇಶ್ವರ ಶಿವಾಚಾರ್ಯ ಸ್ವಾಮಿಜಿ, ಗೊಬ್ಬೂರವಾಡಿಯ ಬಳಿರಾಮ ಮಹಾರಾಜರು, ಸೈದಾಪೂರದ ಸೋಮೇಶ್ವರಾನಂದ ಮಹಾಸ್ವಾಮಿಜಿ, ಬಾಡಿಯಾಲದ ಚನ್ನವೀರ ಶಿವಾಚಾರ್ಯ ಸ್ವಾಮಿಜಿ ಸೇರಿದಂತೆ ಇತರರು ಉಪಸ್ಥಿತರಿರುವ ಮೂಲಕ ಆಶೀರ್ವಚನ ನೀಡುವರು.

ಮಾಜಿ ಶಾಸಕ ಲಿಂ. ನಾಗನಗೌಡ ಕಂದಕೂರ ಅವರು ತಮ್ಮ 50 ವರ್ಷಗಳ ಸುಧೀರ್ಘ ರಾಜಕೀಯ ಜೀವನದಲ್ಲಿ ಅವರಿಗೆ ಅಧಿಕಾರ ಸಿಕ್ಕ ಹಾಗೂ ಉಳಿದ ಸಮಯದಲ್ಲಿ ಹೆಚ್ಚಾಗಿ ಅವರು ಶಿಕ್ಷಣ, ಆರೋಗ್ಯ ಹಾಗೂ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಮೂಲಕ ಗಡಿ ಕ್ಷೇತ್ರವಾದ ಗುರುಮಿಠಕಲ್ ಮತಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಕೆಲಸ ಮಾಡಿದರು.

ಅವರ ಆಶಯದಂತೆ ಅಂದು ನಡೆಯುವ ಧಾರ್ಮಿಕ ಕಾರ್ಯಕ್ರಮದಲ್ಲಿ ಗುರುಮಿಠಕಲ್ ಮತಕ್ಷೇತ್ರದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಅಭ್ಯಾಸ ಮಾಡುವ ಸುಮಾರು 16 ಸಾವಿರ ವಿಧ್ಯಾರ್ಥಿಗಳಿಗೆ ಮದ್ಯಾಹ್ನ ಬಿಸಿಯೂಟ ಸೇವನೆ ಮಾಡಲು ಸಹಕಾರಿಯಾಗಲು, ಪ್ಲೇಟ್‌ಗಳು, ಗ್ಲಾಸ್‌ಗಳು ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು,

ಕಲ್ಯಾಣ ಕರ್ನಾಟಕದಲ್ಲಿ ಪ್ರಪ್ರಥಮ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ, ಈಗಾಗಲೇ ಅವರ ಅಭಿಮಾನಿಗಳು 1300 ಜನರು ಇಲ್ಲಿಯವರೆಗೆ ರಕ್ತದಾನ ಮಾಡಲು ಸ್ವಯಂಪ್ರೇರಿತರಾಗಿ ಹೆಸರು ನೊಂದಾಯಿಸಿದ್ದಾರೆ, ಸಂಗ್ರಹವಾದ ರಕ್ತವನ್ನು ಯಾದಗಿರಿಯ ಯೀಮ್ಸ್, ಕಲಬುರಗಿ ಜೀಮ್ಸ್, ರಾಯಚೂರಿನ ರೀಮ್ಸ್ ಆಸ್ಪತ್ರೆಗಳಿಗೆ ಹಾಗೂ ರೆಡಕ್ರಾಸ್ ಬ್ಲಡ್ ಬ್ಯಾಂಕ್ ಬೆಂಗಳೂರಿಗೆ ಕಳಿಸಿಕೊಡಲಾಗುವುದು, ಇದರಿಂದ ಅವಶ್ಯಕವಿರುವ ರೋಗಿಗಳಿಗೆ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಂದಕೂರ ಮನೆತನದ 10 ಸಾವಿರಕ್ಕೂ ಹೆಚ್ಚು ಅಭಿಮಾನಿ ಬಳಗ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವೀರಶೈವ ಸಮಾಜದ ಅಧ್ಯಕ್ಷ ಹಾಗೂ ಜೆಡಿಎಸ್ ಮುಖಂಡರಾದ ಚನ್ನಪ್ಪಗೌಡ ಮೋಸಂಬಿ, ಪಕ್ಷದ ವಕ್ತಾರ ಮಲ್ಲಣಗೌಡ ಹಳಿಮನಿ ಕೌಳೂರ, ಮುಖಂಡರಾದ ಬಸರಾಜಪ್ಪಗೌಡ ಗೊಂದೆಡಗಿ, ಈಶ್ವರ ನಾಯಕ, ವಿಶ್ವನಾಥ ಶಿರವಾರ, ಭೀಮಶಪ್ಪ ಗುಡಸೆ, ಭೀಮರಾಯ ಬದ್ದೆಪಲ್ಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಹಿಳೆಯರಿಗೆ ಸ್ವಾವಲಂಬನೆ ಬದುಕು ರೂಪಿಸಿಕೊಳ್ಳಲು ಟ್ರಸ್ಟ್ ಶ್ರಮಿಸುತ್ತಿರುವ ಕಾರ್ಯ ಶ್ಲಾಘನೀಯ : ಕೊಟ್ಟೆಪ್ಪಗೋಳ್



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಪ್ರಸಕ್ತ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪುರುಷ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿದ್ದಾರೆ, ಆದರೆ ಗ್ರಾಮೀಣ ಭಾಗದ ಮಹಿಳೆಯರಿಗೆ ರುಚಿ ಟ್ರಸ್ಟ್ ಜಿಲ್ಲೆಯಲ್ಲಿ ಟೇಲರಿಂಗ್ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮೂಡಿಸಿ, ಸ್ವಾವಲಂಬನೆ ಬದುಕು ರೂಪಿಸಿಕೊಳ್ಳಲು ಶ್ರಮಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದು ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೊಟ್ಟೆಪ್ಪಗೋಳ್ ಹೇಳಿದರು,

ತಾಲ್ಲೂಕಿನ ಮುದ್ನಾಳ ಗ್ರಾಮದಲ್ಲಿ ರುಚಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಟೇಲರಿಂಗ್ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಲ್ಲಿ ಸರ್ಕಾರದ ಯಾವುದೇ ಇಲಾಖೆಗಳ ಅನುದಾನ ಪಡೆಯದೇ ಪ್ರಾಮಾಣಿಕವಾಗಿ ಟ್ರಸ್ಟನವರು ಕೆಲಸ ಮಾಡಿರುವುದನ್ನು ಗಮನಿಸಿದ್ದೇನೆ, ಅವರ ಕಾರ್ಯ ಇನ್ನೂ ವಿಸ್ತಾರವಾಗಲಿ ಎಂದು ಸಲಹೆ ನೀಡಿದರು.

ಹಳ್ಳಿಗಳಲ್ಲಿ ವಾಸಿಸುವ ಮಹಿಳೆಯರು ತಮ್ಮ ಮಕ್ಕಳಿಗೆ ತಪ್ಪದೇ ಶಿಕ್ಷಣ ಒದಗಿಸಿ, ಅದರಿಂದ ಮಾತ್ರ ಅವರು ಭವಿಷ್ಯದಲ್ಲಿ ಸನ್ಮಾರ್ಗದಲ್ಲಿ ಸಾಗಿ, ಭವಿಷ್ಯ ರೂಪಿಸಿಕೊಳ್ಳುತ್ತಾರೆ ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ

ಕವಳಿ ಬೆಳೆ ಸಂಪೂರ್ಣ ಸುರಕ್ಷತೆ ಮತ್ತು ಅಭಿವೃದ್ಧಿ

# ಕುರಿತು ಸುರಪುರ ತಾಲೂಕಿನ ಮಾಲಹಳ್ಳಿಯಲ್ಲಿ ರೈತರ ಸಭೆ



ಮಲ್ಲಮ್ಮ ನುಡಿ ವಾರ್ತೆ

ಸುರಪುರ : ತಾಲೂಕಿನ ಮಾಲಹಳ್ಳಿ ಗ್ರಾಮದಲ್ಲಿ ವಿಲ್ಲೋವುಡ್ ಕಂಪನಿ ವತಿಯಿಂದ ರೈತ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು ಈ ಸಭೆಯಲ್ಲಿ ಸುತ್ತಮುತ್ತ ಹಳ್ಳಿಯ ರೈತರು ಪಾಲ್ಗೊಂಡು ಯಶಸ್ವಿಗಳಿಸಿದರು. ವಿಲ್ಲೋವುಡ್ ಕಂಪನಿಯ ಸಂತೋಷ್ ಪಾಟೀಲ್. ಡೆವಲಪ್ಮೆಂಟ್ ಮ್ಯಾನೇಜರ್ ಚನ್ನಬಸವ ( ಎಚ್‌ಒ) ನಾಗೇಶ್ ಅನುಸೂರೆ ಕೆಂಭಾವಿ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ರೈತರಿಗೆ ಕವಳಿ ಬೆಳೆ ಸಂಪೂರ್ಣ ಸುರಕ್ಷತೆ ಮತ್ತು ಅಭಿವೃದ್ಧಿ ಕುರಿತು ರೈತರಿಗೆ ಮನಮುಟ್ಟುವಂತೆ ಹೇಳಿದರು.. ಸುತ್ತಹಳ್ಳಿ ರೈತರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.!

# ಮಟಕಾ: ಓರ್ವನ ಬಂಧನ

ಕಲಬುರಗಿ,ಜ.23–ನಗರದ ಲಾಡ್ಜೀ ಕ್ರಾಸ್ ಸಮೀಪದ ಸಾರ್ವಜನಿಕ ರಸ್ತೆಯಲ್ಲಿ ವ್ಯಕ್ತಿಯೊಬ್ಬ ಮಟಕಾ ನಂಬರ್ ಬರೆದುಕೊಳ್ಳುತ್ತಿದ್ದಾನೆ ಎಂಬ ಮಾಹಿತಿ ಮೇಲೆ ಉತ್ತರ ವಿಭಾಗದ ಎಸಿಪಿ ಚಂದ್ರಶೇಖರ ಜಿ., ರೋಜಾ ಪೊಲೀಸ್ ಠಾಣೆ ಸಿಬ್ಬಂದಿಗಳಾದ ನಾಸೀರ್, ಸಿದ್ದಪ್ಪ ಪರೀಟ್ ಅವರು ದಾಳಿ ನಡೆಸಿ ಓರ್ವನನ್ನು ಬಂಧಿಸಿದ್ದಾರೆ.

# ಬ್ರಿಟಿಷರ ಪಾಲಿಗೆ 'ನೇತಾಜಿ' ಸಿಂಹ ಸ್ವಪ್ನವಾಗಿದ್ದರು: ಮಹೇಶ ರಡ್ಡಿ ಮುದ್ನಾಳ್.



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ನೇತಾಜಿ ಸುಭಾಷಚಂದ್ರ ಬೋಸ್ ಅವರ ಕ್ರಾಂತಿಕಾರಿ ಬದುಕು ಎಲ್ಲರಿಗೂ ಮಾದರಿ ಎಂದು ಬಿಜೆಪಿ ಯುವ ನಾಯಕ ಮಹೇಶ ರಡ್ಡಿ ಮುದ್ನಾಳ್ ಹೇಳಿದರು.

ನಗರದ ಸುಭಾಷ ಸರ್ಕಲ್ ನಲ್ಲಿ ನೇತಾಜಿ ಜಯಂತಿ ನಿಮಿತ್ಯ ಗುರುವಾರ ಬೆಳಗ್ಗೆ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯೋತ್ಸದಲ್ಲಿ ನೇತಾಜಿಯವರ ಕೊಡುಗೆ ಅಪಾರವಾಗಿದೆ. ಗಾಂಧಿಜೀಯವರು ಅಹಿಂಸೆ ಮೂಲಕ ಹೋರಾಟ ಮಾಡಿದರೇ ಇವರು ಕ್ರಾಂತಿ ಮೂಲಕ ಸೆಣಸಾಡಿದ ವೀರಪುತ್ರರಾಗಿದ್ದಾರೆಂದರು.

ನೀವು ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ಕೊಡಿಸುತ್ತೆನೆ ಎಂಬ ಮಾತು ಆಗ ದೇಶದ ಲಕ್ಷಾಂತರ ಯುವಕರನ್ನು ಬಡಿದೆಬ್ಬಿಸಿತ್ತು. ಬ್ರಿಟಿಷರಿಗೆ ಇವರು ಸಿಂಹಸ್ವಪ್ನವಾಗಿದ್ದರು. ಇವರ ಹೆಸರು ಕೇಳಿದರೇ ಅವರು ನಡುಗಿ ಹೋಗುತ್ತಿದ್ದರು, ಅವರ ಹುಟ್ಟು ಅಡಗಿಸಿದ ಪರಾಕ್ರಮಿಯಾಗಿದ್ದರೆಂದು ಬಣ್ಣಿಸಿದರು.


ನಮ್ಮ ತಾತ ಲಿಂ. ವಿಶ್ವನಾಥ ರಡ್ಡಿ ಮುದ್ನಾಳ್ ಅವರು ನೇತಾಜಿಯವರ ಬಹುದೊಡ್ಡ ಅನುಯಾಯಿಯಾಗಿದ್ದರು.

ಅಂತೆಯೇ ನಗರದಲ್ಲಿ ಅವರ ಹೆಸರು ಅಮರವಾಗಿಡಲು ಮೂರ್ತಿ ಸ್ಥಾಪನೆ ಮಾಡಿದ್ದಾರೆಂದು ಹೇಳಿದರು.

ಇಂದಿನ ಯುವಕರು ಇವರ ಆರ್ದಶಗಳನ್ನು ಪಾಲಿಸಬೇಕೆಂದು ನುಡಿದರು.

ಈ ವೇಳೆ ಖಂಡಪ್ಪ ದಾಸನ,ಮುಡ ಮಾಜಿ ಅಧ್ಯಕ್ಷ ರುದ್ರಗೌಡ ಪಾಟೀಲ್,ಎಮ್.ಕೆ ಬಿದನೂರು,ಡಾ.ಶರಣುರಡ್ಡಿ ಕೋಡ್ಲಾ, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ,ಬಸವರಾಜ ಮೋಟನಳ್ಳಿ,ರಾಮರೆಡ್ಡಿ ಅಣಿಬಿ ಹೆಡಗಿಮದ್ರಾ, ನಗರಸಭೆ ಸದಸ್ಯ ಸ್ವಾಮಿದೇವದಾಸನಕೆರಿ,ಸೋಮನಾಥ್ ಜೈನ್,ರಮೇಶರಾಠೋಡ,ನರೇಂದ್ರ ಗಾಂಧಿ, ನಿಜಾಂ ನಾಗರ, ಫಕ್ರುದ್ದೀನ್,ರವಿ ಬಾಪುರೆ,ರಮೇಶ ದೊಡಮನಿ,ಮಲ್ಲಿಕಾರ್ಜುನಕಟ್ಟಿಮನಿ, ಲಕ್ಷ್ಮಿಪುತ್ರಮಾಲಿಪಾಟೀಲ,ಬಾಪುಗೌಡಮುಷ್ಠೂರ,ಶರಣಗೌಡಅಲಿಪುರ, ಮಂಜುನಾಥ ಜಡಿ,ಅಜೇಯ ಸಿನ್ನೂರ,ಮಹಾದೇವಪ್ಪಗಣಪುರ, ಸುರೇಶ್ ರಾಠೋಡ, ಮಲ್ಲು ಸ್ವಾಮಿ ಗುರುಸುಣಗಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು...

# ಎಲ್ಲ ಗ್ರಾಮಗಳಲ್ಲಿ ಜೆಜೆಎಂ ಕಳಪೆ: ಶಾಸಕ ಪ್ರಭು ಚವ್ಹಾಣ ಬೇಸರ



ಮಲ್ಲಮ್ಮ ನುಡಿ ವಾರ್ತೆ

ಔರದ್: ಗ್ರಾಮ ಸಂಚಾರದ ವೇಳೆ ಎಲ್ಲ ಗ್ರಾಮಗಳಲ್ಲಿ ಜೆಜೆಎಂ ಕಾಮಗಾರಿಯ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಕಿಡಿ ಕಾರಿದರು.

ಔರಾದ(ಬಿ) ತಾಲ್ಲೂಕಿನ ಗೌಂಡಗಾಂವ, ಮುಂಗನಾಳ, ಮಹಾಡೋಣಗಾಂವ, ಬೆಳಕುಣಿ(ಚೌ), ಹೆಡಗಾಪೂರ, ನಿಟ್ಟೂರ, ರಕ್ಷ್ಯಾಳ(ಕೆ), ರಕ್ಷ್ಯಾಳ(ಬಿ) ಹಾಗೂ ಹಿಪ್ಪಳಗಾಂವನಲ್ಲಿ ಜ.23ರಂದು ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು. ಅಲ್ಲದೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪೂಜೆ ನೆರವೇರಿಸಿದರು.

ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹರಿಸಬೇಕೆಂಬ ಉದ್ದೇಶದಿಂದ ನಿರಂತರ ಪ್ರಯತ್ನ ವಹಿಸಿ ಸುಮಾರು 200 ಕೋಟಿಗೂ ಹೆಚ್ಚು ಅನುದಾನ ತಂದು ಎಲ್ಲ ಗ್ರಾಮಗಳಲ್ಲಿ ಪೂಜೆ ನೆರವೇರಿಸಿ ಕಾಮಗಾರಿ ಆರಂಭಿಸಲಾಗಿದೆ. ಕೆಲ ಗುತ್ತಿಗೆದಾರರು ತಾವು ಕೆಲಸ ಮಾಡದೇ ಬೇರೊಬ್ಬರಿಗೆ ಉಪ ಗುತ್ತಿಗೆ ನೀಡಿ ಕೆಲಸ ಮಾಡಿಸಿದ್ದಾರೆ. ಕೆಲಸ ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕಾದ ಅಧಿಕಾರಿಗಳು ಅಕ್ರಮದಲ್ಲಿ ಶಾಮೀಲಾಗಿರುವುದರಿಂದ ಕೆಲಸ ಸಂಪೂರ್ಣ ಕಳಪೆಯಾಗಿದೆ ಎಂದು ಎಲ್ಲ ಕಡೆ ಜನತೆ ಆರೋಪಿಸುತ್ತಿದ್ದಾರೆ ಎಂದು ಹೇಳಿದರು.

ಪ್ರಸ್ತಾವನೆಯಂತೆ ಕೆಲಸವಾಗಬೇಕು. ಎಲ್ಲ ಮನೆಗಳಿಗೂ ನೀರಿನ ಸಂಪರ್ಕ ಕಲ್ಪಿಸಬೇಕು. ಯೋಜನೆ ಜಾರಿಯಾದ ಗ್ರಾಮಗಳಲ್ಲಿ ಸುಮಾರು 30 ವರ್ಷ ನೀರಿನ ಕಾಮಗಾರಿ ಕೈಗೊಳ್ಳಲು ಬರುವುದಿಲ್ಲ. ಹಾಗಾಗಿ ಕೆಲಸ ಸರಿಯಾಗಿ ಮಾಡುವಂತೆ ತುಳಿಸುತ್ತಾ ಬರುತ್ತಿದ್ದೇನೆ. ಆದರೆ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದಾಗಿ ಇಡೀ ಯೋಜನೆ ಹಾಳಾಗಿದೆ. ಕೆಲವು ಕಡೆ ಕೆಲಸ ಪರಿಶೀಲಿಸದೇ ಕಾಮಗಾರಿ ಅಧಿನಕ್ಕೆ ಪಡೆಯಲಾಗಿದೆ ಎಂದು ಜನ ಆರೋಪಿಸುತ್ತಿದ್ದಾರೆ ಎಂದು ಬೇಸರ ಹೊರ ಹಾಕಿದರು.

ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಎಚ್ಚರಿಕೆ:* ಸಾಕಷ್ಟು ಬಾರಿ ತಿಳಿಸಿದರೂ ಕೆಲವು ಕಡೆಗಳಲ್ಲಿ ಕಾಮಗಾರಿ ಪರಿಶೀಲಿಸದೇ ಪಂಚಾಯಿತಿಯ ಅಧಿನಕ್ಕೆ ಪಡೆಯಲಾಗಿದೆ. ಮುಂದೆ ಯಾರೊಬ್ಬರೂ ಹೀಗೆ ಮಾಡುವಂತಿಲ್ಲ. ಜೆಜೆಎಂ ಕಾಮಗಾರಿ ಮುಗಿದ ಕೂಡಲೇ ತಪ್ಪದೇ ಪ್ರತಿ ಮನೆಗೆ ಭೇಟಿ ನೀಡಿ ನೀರು ಪೂರೈಕೆಯಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ನಂತರ ಗ್ರಾಮಸಭೆ ನಡೆಸಿ ಎಲ್ಲರ ಸಹಮತಿ ಪಡೆದ ನಂತರವೇ ಕಾಮಗಾರಿಯನ್ನು ತಮ್ಮ ಅಧಿನಕ್ಕೆ ಪಡೆಯಬೇಕು ಎಂದು ಪಿಡಿಓಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು. ಏನಾದರೂ ಅವ್ಯವಹಾರ ಕಂಡುಬಂದರೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಾರ್ವಜನಿಕರು ಕೂಡ ಜವಾಬ್ದಾರಿತನ ಪ್ರದರ್ಶಿಸಬೇಕು. ತಮ್ಮ ಊರಿನಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮೇಲೆ ನಿಗಾ ವಹಿಸಬೇಕು. ಎಲ್ಲಿಯಾದರೂ ಲೋಪಗಳು ಕಾಣಿಸಿದಲ್ಲಿ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಕೆಲಸ ಸರಿಪಡಿಸಲು ಮುಂದಾಗಬೇಕು. ಇನ್ನು ಮುಂದಾದರೂ ಯೋಜನೆ ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕೆಂದು ಶಾಸಕರು ಮನವಿ ಮಾಡಿದರು.

ತಹಸೀಲ್ದಾರರಾದ ಮಲಶೆಟ್ಟಿ ಚಿದ್ರೆ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇಇ ರಾಮಲಿಂಗ ಬಿರಾದಾರ, ಎಇಇ ಸುಭಾಷ, ಮುಖಂಡರಾದ ವಸಂತ ಬಿರಾದಾರ, ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ಸಾಗರ ಪಾಟೀಲ, ಶಿವರಾಜ ಅಲ್ಮಾಜೆ, ಶ್ರೀಮಂತ ಪಾಟೀಲ ಹೆಡಗಾಪೂರ, ವಿನಾಯಕ ಜಗದಾಳೆ, ಸಚಿನ ರಾಠೋಡ, ಮಲ್ಲಪ್ಪ ದಾನಾ, ಖಂಡೋಬಾ ಕಂಗಟೆ, ಶಿವಾಂಜಯ ಬಿರಾದಾರ, ಮಂಜು ಸ್ವಾಮಿ, ಶಿವಾಜಿರಾವ ಕಾಳೆ, ಪ್ರದೀಪ ಪವಾರ, ಬಾಲಾಜಿ ಕಾಸ್ಲೆ, ಗಣೇಶ ರಾಠೋಡ, ಬಾಬುರಾವ ಶೆಟ್ಟೆಪ್ಪ, ಉದಯ ಸೋಲಾಪುರೆ, ರಾಜಕುಮಾರ ಸೋರಾಳೆ, ಗುರುನಾಥ ವಟಗೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಇಟ್ಟಂಗಿ ಭಟ್ಟಿ ಕಾರ್ಮಿಕರ ಮೇಲಿನ ಹಲ್ಲೆ ಖಂಡಿಸಿ ತಹಸಿಲ್ದಾರ್ ಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ವಿಜಯಪುರದ ಗಾಂಧಿನಗರ ಸ್ಟಾರ್ ಚೌಕ ಬಳಿ ಇರುವ ಇಟ್ಟಂಗಿ ಭಟ್ಟಿಯಲ್ಲಿ ಕೆಲಸ ಮಾಡುತ್ತಿರುವ ಮೂವರು ದಲಿತ ಕಾರ್ಮಿಕರ ಮೇಲೆ ಮಾಲೀಕ ಮಾಡಿದ ಮಾರಣಾಂತಿಕ ಹಲ್ಲೆಯನ್ನು ಖಂಡಿಸಿ ಅಂಬೇಡ್ಕರ್ ಸೇನೆ(ರಿ) ತಾಲೂಕ ಸಮಿತಿ ವತಿಯಿಂದ ಬುಧವಾರ ಸಿರಸ್ತೆದಾರ ಜೆ.ಆರ್.ಜೈನಾಪೂರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿಲಾಯಿತು.

ಇಟ್ಟಂಗಿ ಭಟ್ಟಿಯಲ್ಲಿ ಕೆಲಸ ಮಾಡುತ್ತಿದ್ದ ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಚಿಕ್ಕಲಕಿ ಗ್ರಾಮದ ಕಾರ್ಮಿಕರು ಸಂಕ್ರಾಂತಿ ಹಬ್ಬಕ್ಕಾಗಿ ಹೋದವರು ಮರಳುವಲ್ಲಿ ತಡವಾಗಿರುವ ಒಂದು ಸಣ್ಣ ಕಾರಣಕ್ಕಾಗಿ ವಿಜಯಪುರ ನಗರದ ಸಿಂದಗಿ ರಸ್ತೆಯಲ್ಲಿರುವ ಇಟ್ಟಂಗಿ ಭಟ್ಟಿ ಮಾಲೀಕ ಕೇಮು ರಾಠೋಡ ತನ್ನ ಸಹಚರ ರೊಂದಿಗೆ ಸೇರಿ ದಲಿತ ಸಮಾಜದ ಕಾರ್ಮಿಕರಾದ ಸದಾಶಿವ ಮಾದರ್ ಸದಾಶಿವ ಬಬಲಾದಿ ಉಮೇಶ ಮಾದರ್ ಈ ಮೂವರ ಮೇಲೆ ಪೈಪುಗಳನ್ನು ಬಳಸಿ ಮಾರಣಾಂತಿಕ ಹಲ್ಲೆಯನ್ನು ಮಾಡಿದ್ದಾನೆ, ಇದು ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಹ ಘಟನೆಯಾಗಿದೆ. ಈಗಾಗಲೇ ಈ ಹಲ್ಲೇಕೋರರನ್ನು ಪೊಲೀಸರು ಬಂದಿಸಿದ್ದಾರೆ, ಆದರೆ ಇವರು ಜಾಮೀನು ಪಡೆದುಕೊಂಡು ಹೊರಗೆ ಬಂದರೆ ಸೇಡಿನ ಮನೋಭಾವದಿಂದ ಮತ್ತೆ ಅವರ ಮೇಲೆ ಹಲ್ಲೆ ಮಾಡುವ ಅವಕಾಶಗಳಿವೆ ಆದ್ದರಿಂದ ಹಲ್ಲೆಗೆ ಒಳಗಾದ ನಮ್ಮ ಸಮಾಜದ ಕಾರ್ಮಿಕರಿಗೆ ಇಲಾಖೆಯವರು ಸೂಕ್ತ ಭದ್ರತೆ ಒದಗಿಸಬೇಕು ಎಂದು ಕೇಳಿಕೊಂಡಿದ್ದಾರೆ. ಈ ಸಮಯದಲ್ಲಿ ಜಿಲ್ಲಾ ಉಪಾಧ್ಯಕ್ಷ ಬಸ್ಸು ಕಟ್ಟಿಮನಿ, ತಾಲೂಕ ಅಧ್ಯಕ್ಷ ಗೋಪಾಲ ಕಟ್ಟಿಮನಿ, ಕಾರ್ಯದರ್ಶಿ ಮಹದೇವ ಅಸ್ಕಿ, ಖಜಾಂಚಿಗಳಾದ ಪರಶುರಾಮ್ ತಳವಾರ, ಯಮನಪ್ಪ ನಾಯ್ಕೋಡಿ, ಪದಾಧಿಕಾರಿಗಳ ಶೇಖಪ್ಪ ಕಟ್ಟಿಮನಿ, ದ್ಯಾಮಣ್ಣ ಸೋಮನಾಳ, ಮಡು ಚಲವಾದಿ ಮತ್ತೀತರರು ಇದ್ದರು.

# ಹಾಸ್ಟೆಲ್ ಹೊರಗುತ್ತಿಗೆ ನೌಕರ ಹೋರಾಟ ಹತ್ತಿಕ್ಕುವ ದುರದ್ದೇಶ ನಡೆದಿದೆ : ರಮೇಶ್ ಕಾಳಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕನಿಷ್ಠ ವೇತನ ಸೇರಿದಂತೆವಿವಿಧಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಶಾಂತಿಯುತವಾಗಿಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಹೋರಾಟವನ್ನು ಹತ್ತಿಕ್ಕುವ ದುರುದ್ದೇಶದಿಂದ ಜಿಲ್ಲಾಡಳಿತ ಹೋರಾಟಗಾರರ ವಿರುದ್ಧ ಪೊಲೀಸ್ ಬಲಬಳಸಿರುವುದನ್ನು ಕರ್ನಾಟಕಜನಸೈನ್ಯಸಂಘಟನೆಯ ಜಿಲ್ಲಾಧ್ಯಕ್ಷ ರಮೇಶ ಕಾಳಿ ಅವರು ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ರಮೇಶ ಕಾಳಿ ಅವರು, ಶಾಂತಿಯುತವಾಗಿ ಮೂರು ದಿನಗಳಿಂದ ನಡೆ–ಯುತ್ತಿದ್ದ ಪ್ರತಿಭಟನೆಗೆ ಜಿಲ್ಲಾಧಿಕಾರಿ ಸ್ಪಂದಿಸದ ಕಾರಣ ಪ್ರತಿಭಟನಾಕಾರರ ಸಹನೆಯ ಕಟ್ಟೆ ಒಡೆದಿದೆ.

ಕೂಡಲೇ ಜಿಲ್ಲಾಧಿಕಾರಿಗಳು ಸ್ಥಳಕ್ಕೆಆಗಮಿಸಿಪ್ರತಿಭಟನಾಕಾರರ ಮನವಿ ಸ್ವೀಕರಿಸುವಂತೆ ಒತ್ತಾಯಿಸಿದ್ದಾರೆ. ಅದೇ ವೇಳೆ ಜಿಲ್ಲಾಡಳಿತ ಭವನದಿಂದ ಹೊರಟಿದ್ದಜಿಲ್ಲಾಧಿಕಾರಿಗಳಕಾರಿಗೆ ಅಡ್ಡಗಟ್ಟಿದ್ದಾರೆ. ಮತ್ತು ತಮ್ಮ ಮನವಿಯನ್ನುಸ್ವೀಕರಿಸುವಂತೆ ಒತ್ತಾಯಿಸಿದ್ದಾರೆ. ಇದನ್ನೇ ನೆಪ ಮಾಡಿಕೊಂಡ ಪೊಲೀಸರು ಪ್ರತಿಭಟನಾಕಾರರನ್ನುತಡೆಯಲು ಮುಂದಾಗಿದ್ದಾರೆ. ಇದರಿಂದಾಗಿ ಪ್ರತಿಭಟನಾಕಾರ ಮತ್ತು ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ನಡೆದ ನೂಕುನುಗ್ಗಲಾಟದಲ್ಲಿ ಕೆಲ ಪ್ರತಿಭಟನಾಕಾರರಿಗೆ ಸಣ್ಣಪುಟ್ಟಗಾಯಗಳಾಗಿದ್ದು, ಆ ಸಂದರ್ಭದಲ್ಲಿಮಹಿಳೆಯೊಬ್ಬರು ಮೂರ್ಛೆ ಹೋಗಿದ್ದಾರೆ. ಶಾಂತಿಯುತವಾಗಿಮುಗಿಯಬೇಕಿದ್ದ ಹೋರಾಟಕ್ಕೆಜಿಲ್ಲಾಧಿಕಾರಿಗಳ ಬೇಜವಾಬ್ದಾರಿವರ್ತನೆಯಿಂದಾಗಿ ಶಾಂತಿಯುತವಾಗಿನಡೆಯುವ ಹೋರಾಟ ಈಗ ಉಗ್ರಸ್ವರೂಪ ಪಡೆಯುವಂತಾಗಿದೆ.

ಕೂಡಲೇ ಜಿಲ್ಲಾಧಿಕಾರಿಗಳು ಗಾಯಗೊಂಡಪ್ರತಿಭಟನಾಕಾರರಿಗೆ ಸೂಕ್ತಚಿಕಿತ್ಸೆಕೊಡಿಸಿ ಪರಿಹಾರ ನೀಡಬೇಕುಮತ್ತುಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೀದರ್ ನಲ್ಲಿ ಜಾರಿಗೊಂಡ ವೇತನ ನೀತಿಯನ್ನು ಇಲ್ಲಿಯೂ ಜಾರಿಗೊಳಿಸಬೇಕು. ಹೋರಾಟಗಾರರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಜನವಿರೋಧಿ ನೀತಿ ಅನುಸರಿಸುತ್ತಿರುವ ಜಿಲ್ಲಾಧಿಕಾರಿಯನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದು ಬೆಂಬಲ ನೀಡುವ ಮೂಲಕ ಒತ್ತಾಯಿಸಿದ್ದಾರೆ.

> ಹಾಸ್ಟಲ್‌ನಹೊರಗುತ್ತಿಗೆನೌಕರರನ್ನು ನೇರವಾಗಿ ಇಲಾಖೆಯಡಿಯಲ್ಲಿ ನೇಮಿಸಿಕೊಳ್ಳಬೇಕು ಮತ್ತುಕನಿಷ್ಠ ವೇತನ ನೀಡಬೇಕು. ಬೀದರ್ ಮಾದರಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿವೇತನನೀತಿಯನ್ನು ಇಲ್ಲಿಯೂ ಜಾರಿಗೊಳಿಸಬೇಕು ಎಂಬುವುದೆ ನಮ್ಮ ಬೇಡಿಕೆ–ಯಾಗಿದೆ.
>
> 
>
> **ಮಹಮ್ಮದ್ ರಫಿ ಜಾಹಾಗೀರದಾರ್, ಜಿಲ್ಲಾ ಉಪಾಧ್ಯಕ್ಷ ಹೊರಗುತ್ತಿಗೆ ನೌಕರರ ಸಂಘ**

# ಡಿ.ಪುರುಷೋತ್ತಮಗೌಡರಿಗೆ ಡಾಕ್ಟರೇಟ್ ಪದವಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಹಂಪಿ ಕನ್ನಡ ವಿಶ್ವವಿದ್ಯಾಲಯವು ತುಂಗಭದ್ರ ರೈತ ಸಂಘದ ಅಧ್ಯಕ್ಷರು ಹಾಗೂ ದಶಕಗಳಿಂದ ತುಂಗಭದ್ರ ಜಲಾಶಯದ ಕುರಿತು ಹೋರಾಟ ಮಾಡಿಕೊಂಡು ಬರುತ್ತಿರುವ ದರೂರಿನ ಪುರುಷೋತ್ತಮಗೌಡರಿಗೆ ಡಾಕ್ಟರೇಟ್ ಪದವಿ ನೀಡಿದೆ.

ಇಲ್ಲಿನ ಸ್ನೇಹ ಸಂಪುಟದಲ್ಲಿ ಸುದ್ದಿಗಾರರೊಂದಿಗೆಮಾತನಾಡಿದ ಅವರು, ತುಂಗಭದ್ರಜಲಾಶಯದ ಅಧ್ಯಯನದ ಕುರಿತು ಡಾ.ಪುರುಷೋತ್ತಮಗೌಡರು 2022ರಿಂದಡಿ.ಲಿಟ್ ಪದವಿಗಾಗಿ ಸಂಶೋಧನೆ ನಡೆಸಿದ್ದರು. ಕುಲಪತಿ ಡಾ.ಪರಶಿವಮೂರ್ತಿ ಅವರು ಪುರುಷೋತ್ತಮಗೌಡರಿಗೆ ಡಾಕ್ಟರೇಟ್ ಪದವಿ ನೀಡುವ ಕುರಿತು ಅಧಿಸೂಚನೆ ಹೊರಡಿಸಿದ್ದು, ಫೆಬ್ರವರಿಯಲ್ಲಿ ನಡೆಯಲಿರುವಘಟಿಕೋತ್ಸವದಲ್ಲಿ ಪುರುಷೋತ್ತಮಗೌಡರು ಡಾಕ್ಟರೇಟ್ ಪದವಿಯನ್ನು ಪಡೆಯಲಿದ್ದಾರೆ.

1772ರಿಂದ1852ಅವಧಿಯಲ್ಲಿ ಕರ್ನಾಟಕದ ಬಳ್ಳಾರಿ, ಕೊಪ್ಪಳ, ವಿಜಯನಗರ, ರಾಯಚೂರು, ಆಂಧ್ರಪ್ರದೇಶದ ಕರ್ನೂಲು, ಕಡಪ, ಅನಂತಪುರ ಹಾಗೂ ತೆಲಂಗಾಣದ ಮೆಹಬೂಬ್ ನಗರ ಮತ್ತು ದದ್ದಲ್ ಜಿಲ್ಲೆಗಳಲ್ಲಿ ತಾಂಡವವಾಡುತ್ತಿರುವ ಭೀಕರ ಬರಗಾಲದ ಕುರಿತು ಅಧ್ಯಯನದಲ್ಲಿ ಸಂಶೋಧಿಸಿದ್ದಾರೆ. ಜನ, ಜಾನುವಾರುಗಳ ಹಿತದೃಷ್ಟಿಯಿಂದ ಅಂದಿನ ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತ್ಯದ ಸರ್ಕಾರಗಳು ಈ ಕುರಿತು ತೆಗೆದುಕೊಂಡಿರುವ ನಿರ್ಧಾರದ ಕುರಿತು ವಿಶ್ಲೇಷಿಸಲಾಗಿದೆ. ತುಂಗಾ, ಭದ್ರಾ ಜಲಾಶಯಗಳಿಂದ ನದಿ ನೀರಿನ ಹಂಚಿಕೆಯ ವಿವರ, ತುಂಗಭದ್ರಾ ಜಲಾಶಯದ ನಿರ್ಮಾಣದ ಕುರಿತು ಸಂಪೂರ್ಣ ವಿವರಣೆ ನೀಡಲಾಗಿದೆ. ನೀರಿನ ಸಂಗ್ರಹ ಸಾಮರ್ಥ್ಯಕ್ಕಾಗಿ 86 ಸಾವಿರ ಎಕರೆ ಜಮೀನು ಮತ್ತು 90 ಹಳ್ಳಿಗಳ ಸ್ಥಳಾಂತರದ ಕುರಿತು ಪ್ರಬಂಧದಲ್ಲಿ ತಿಳಿಸಿದ್ದಾರೆ. ತುಂಗಭದ್ರಾ ಜಲಾಶಯದಲ್ಲಿ ಇದೀಗ 30ಕ್ಕೂ ಹೆಚ್ಚು ಟಿಎಂಸಿ ಹೂಳು ಇದ್ದು ಇದನ್ನು ವೈಜ್ಞಾನಿಕವಾಗಿ ತೆರವುಗೊಳಿಸುವ ಕುರಿತು ಸಂಶೋಧನಾತ್ಮಕವಾಗಿ ಮಂಡನೆ ಮಾಡಿದ್ದಾರೆ.

ಜಲಾಶಯಕ್ಕೆ ಕೈಗಾರಿಕೆಗಳಿಂದ ಹೊರ ಸೂಸುವ ಕಲುಷಿತ ನೀರು ಮತ್ತು ಚರಂಡಿ ನೀರನ್ನು ಸಂಸ್ಕರಿಸಿ ನದಿಗೆ ಬಿಡುವ ಕುರಿತು ಸಲಹೆಗಳನ್ನು ನೀಡಿದ್ದಾರೆ. ಕೃಷ್ಣ ಮತ್ತು ತುಂಗಭದ್ರಾ ನದಿಗಳ ಜೋಡಣೆ, ಗಂಗಾವತಿಯ ನವಿಲೆ ಬಳಿ ಪರ್ಯಾಯ ಜಲಾಶಯ ನಿರ್ಮಾಣದ ಕುರಿತು ಪುರುಷೋತ್ತಮಗೌಡರು ತಮ್ಮ ಪ್ರೌಢ ಪ್ರಬಂಧದಲ್ಲಿ ಮಂಡಿಸಿರುವ ವಿಚಾರಗಳನ್ನು ಪತ್ರಕರ್ತರಿಗೆ ಹಂಚಿಕೊಂಡಿದ್ದಾರೆ.

# ಇಪಿಎಫ್‌ಒ: ಸದಸ್ಯರ ಪ್ರೊಫೈಲ್ ನವೀಕರಣಕ್ಕಾಗಿ ಆನ್‌ಲೈನ್ ಪ್ರಕ್ರಿಯೆ ಸರಳೀಕರಣ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.23: ನೌಕರರ ಭವಿಷ್ಯ ನಿಧಿ ಸಂಸ್ಥೆ(ಇಪಿಎಫ್‌ಒ)ಯು ತನ್ನ ಸದಸ್ಯರ ಸೇವೆಗಳನ್ನು ಸುಧಾರಿಸುವ ಮತ್ತು ಸದಸ್ಯರ ದತ್ತಾಂಶದ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಪ್ರೊಫೈಲ್ (ವೈಯಕ್ತಿಕ ವಿವರ) ಅನ್ನು ನವೀಕರಿಸುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿದೆ ಎಂದು ಬಳ್ಳಾರಿ ಪ್ರಾದೇಶಿಕ ಕಚೇ–ರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ತಿಳಿಸಿದ್ದಾರೆ. ಪರಿಷ್ಕೃತ ಕಾರ್ಯವಿಧಾನದಡಿ ಯುನಿವರ್ಸಲ್ ಅಕೌಂಟ್ ನಂಬರ್ (ಯುಎಎನ್) ಅನ್ನು ಈಗಾಗಲೇ ಆಧಾರ್ ಮೂಲಕ ಮೌಲ್ಯೀಕರಿಸಿದ ಸದಸ್ಯರು ಯಾವುದೇ ದಾಖಲೆ ಅಪ್ಲೋಡ್ ಮಾಡುವ ಅಗತ್ಯವಿಲ್ಲದೆ ಹೆಸರು, ಹುಟ್ಟಿದ ದಿನಾಂಕ, ಲಿಂಗ, ರಾಷ್ಟ್ರೀಯತೆ, ತಂದೆ–ತಾಯಿಯ ಹೆಸರು, ವೈವಾಹಿಕ ಸ್ಥಿತಿ, ಸಂಗಾತಿಯ ಹೆಸರು, ಸೇರಿದ ದಿನಾಂಕ ಮತ್ತು ತೊರೆದ ದಿನಾಂಕಗಳನ್ನು ತಮ್ಮ ಪ್ರೊಫೈಲ್ ನಲ್ಲಿ ನವೀಕರಿಸಬಹುದು. 1–10–2017 ಕ್ಕಿಂತ ಮೊದಲು ಯುಎಎನ್ ಪಡೆದ ಕೆಲವು ಸಂದರ್ಭಗಳಲ್ಲಿ ಮಾತ್ರ ನವೀಕರಣಕ್ಕೆ ಉದ್ಯೋಗದಾತರ ಪ್ರಮಾಣೀಕರಣ ಮಾತ್ರ ಅಗತ್ಯ ಇತ್ತು. ಸೇವೆಗಳನ್ನು ತಡೆರಹಿತವಾಗಿ ಒದಗಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಮತ್ತು ನಿಧಿಯಿಂದ ತಪ್ಪು/ಮೋಸದ ಪಾವತಿಯ ಅಪಾಯವನ್ನು ತಪ್ಪಿಸಲು ಇಪಿಎಫ್‌ಓ ಡೇಟಾಬೇಸ್ ನಲ್ಲಿ ಇಪಿಎಫ್ ಸದಸ್ಯರ ವೈಯಕ್ತಿಕ ಡೇಟಾದ ಸ್ಥಿರತೆ ಮತ್ತು ಸತ್ಯಾಸತ್ಯತೆ ಅತ್ಯಂತ ಮಹತ್ವದ್ದಾಗಿದೆ. ಸದಸ್ಯರ ವಿವರಗಳನ್ನು ಬದಲಾಯಿಸುವ ಅಥವಾ ಸರಿಪಡಿಸುವ ಯಾವುದೇ ಅಗತ್ಯವಿದ್ದರೆ, ಸದಸ್ಯರಿಗೆ ಅಗತ್ಯವಿರುವ ದಾಖಲೆಗಳನ್ನು ಅಪ್ಲೋಡ್ ಮಾಡಲು ಮತ್ತು ಅವರ ವಿನಂತಿಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ಈಗಾಗಲೇ ಒಂದು ಕಾರ್ಯಚಟುವಟಿಕೆಯನ್ನು ಒದಗಿಸಲಾಗಿದೆ. ಅಂತಹ ವಿನಂತಿಗಳನ್ನು ಉದ್ಯೋಗದಾತರು ಆನ್‌ಲೈನ್ ನಲ್ಲಿ ಅನುಮೋದಿಸುತ್ತಿದ್ದರು ಮತ್ತು ಅಂತಿಮ ಅನುಮೋದನೆಗಾಗಿ ಇಪಿಎಫ್‌ಒಗೆ ಕಳುಹಿಸುತ್ತಿದ್ದರು. 2024–25ರ ಹಣಕಾಸು ವರ್ಷದಲ್ಲಿ ಉದ್ಯೋಗದಾತರ ಮೂಲಕ ತಿದ್ದುಪಡಿಗಾಗಿ ಇಪಿಎಫ್‌ಒನಲ್ಲಿ ಸ್ವೀಕರಿಸಿದ ಒಟ್ಟು 8 ಲಕ್ಷ ವಿನಂತಿಗಳಲ್ಲಿ, ಸುಮಾರು ಶೇ.45 ರಷ್ಟು ಬದಲಾವಣೆ ವಿನಂತಿಗಳನ್ನು ಉದ್ಯೋಗದಾತರ ಪರಿಶೀಲನೆ ಅಥವಾ ಇಪಿಎಫ್‌ಒ ಅನುಮೋದನೆ ಇಲ್ಲದೆ ಸದಸ್ಯರು ಸ್ವಯಂ ಅನುಮೋದಿಸಬಹುದು. ಇದು ಜಂಟಿ ಘೋಷಣೆಗಳನ್ನು (ಜೆಡಿ) ಅನುಮೋದಿಸಲು ಉದ್ಯೋಗದಾತರು ತೆಗೆದುಕೊಳ್ಳುವ ಸುಮಾರು 28 ದಿನಗಳ ವಿಳಂಬವನ್ನು ನಿವಾರಿಸುತ್ತದೆ. ಪೂರ್ಣ ಇ–ಕೆವೈಸಿ ಹೊಂದಿರದ ಇಪಿಎಫ್ ಖಾತೆದಾರರ ಬದಲಾವಣೆ, ತಿದ್ದುಪಡಿಯ ವಿನಂತಿಯನ್ನು ಇಪಿಎಫ್‌ಒನಲ್ಲಿ ಯಾವುದೇ ಅನುಮೋದನೆಯ ಅಗತ್ಯವಿಲ್ಲದೆ ಸರಿಸುಮಾರು ಶೇ.50 ರಷ್ಟು ಪ್ರಕರಣಗಳಲ್ಲಿ ಉದ್ಯೋಗದಾತರ ಮಟ್ಟದಲ್ಲಿ ಅನುಮೋದಿಸಲಾಗುತ್ತದೆ. ಈ ಪರಿಷ್ಕರಣೆಯು ವಿವಿಧ ಹಂತಗಳಲ್ಲಿ ಬಾಕಿ ಇರುವ ಸುಮಾರು 3.9 ಲಕ್ಷ ಸದಸ್ಯರಿಗೆ ತಕ್ಷಣವೇ ಪ್ರಯೋಜನವನ್ನು ನೀಡುತ್ತದೆ. ಸ್ವಯಂ ಅನುಮೋದಿಸಬಹುದಾದ ಯಾವುದೇ ಸದಸ್ಯರು ಈಗಾಗಲೇ ಉದ್ಯೋಗದಾತರೊಂದಿಗೆ ಬಾಕಿ ಇರುವ ತಮ್ಮ ವಿನಂತಿಯನ್ನು ಸಲ್ಲಿಸಿದ್ದರೆ, ಸದಸ್ಯರು ಈಗಾಗಲೇ ಸಲ್ಲಿಸಿದ ವಿನಂತಿಯನ್ನು ಅಳಿಸಬಹುದು ಮತ್ತು ಸರಳೀಕೃತ ಪ್ರಕ್ರಿಯೆಯ ಪ್ರಕಾರ ಸ್ವಯಂ ಅನುಮೋದನೆ ನೀಡಬಹುದು. ಹೆಚ್ಚಿನ ಪ್ರಕರಣಗಳನ್ನು ಸದಸ್ಯರೇ ನೇರವಾಗಿ ಸ್ವಯಂ ಅನುಮೋದಿಸಬಹುದು ಅಥವಾ ಕೆಲವು ಆಯ್ದ ಸಂದರ್ಭಗಳಲ್ಲಿ ಉದ್ಯೋಗದಾತರು ಸ್ವಯಂ ಅನುಮೋದಿಸಬಹುದು. ಪ್ರಸ್ತುತ ಸದಸ್ಯರು ಸಲ್ಲಿಸಿದ ಸುಮಾರು ಶೇ.27ರಷ್ಟು ಕುಂದುಕೊರತೆಗಳು ಸದಸ್ಯರ ಪ್ರೊಫೈಲ್ / ಕೆವೈಸಿ ಸಮಸ್ಯೆಗಳಿಗೆ ಸಂಬಂಧಿಸಿವೆ ಮತ್ತು ಪರಿಷ್ಕೃತ ಜೆಡಿ ಕಾರ್ಯವನ್ನು ಪರಿಚಯಿಸುವುದರೊಂದಿಗೆ, ಸದಸ್ಯರು ಸಲ್ಲಿಸುವ ಕುಂದುಕೊರತೆಗಳ ಸಂಖ್ಯೆಯಲ್ಲಿ ತೀವ್ರ ಇಳಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಆನ್‌ಲೈನ್ ಪ್ರಕ್ರಿಯೆಯಲ್ಲಿನ ಈ ಸರಳೀಕರಣವು ಸದಸ್ಯರ ವಿನಂತಿಗಳನ್ನು ತಕ್ಷಣವೇ ತೆರವುಗೊಳಿಸಲು ಅನುವು ಮಾಡಿಕೊಡುತ್ತದೆ, ದತ್ತಾಂಶ ಸ್ಥಿರತೆಯನ್ನು ಖಚಿತಪಡಿಸುತ್ತದೆ, ದೋಷಗಳ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ಸದಸ್ಯರಿಗೆ ಪರಿಣಾಮಕಾರಿ ಸೇವಾ ವಿತರಣೆಯನ್ನು ಮಾಡುತ್ತದೆ ಮತ್ತು ಜೀವನವನ್ನು ಸುಲಭಗೊಳಿಸುತ್ತದೆ. ಅದೇ ಸಮಯದಲ್ಲಿ ಅಂತಹ ವಿವರಗಳ ಪರಿಶೀಲನೆಗಾಗಿ ಉದ್ಯೋಗದಾತರ ಕಡೆಯಿಂದ ಹೆಚ್ಚುವರಿ ಕೆಲಸದ ಹೊರೆಯನ್ನು ತಪ್ಪಿಸುವ ಮೂಲಕ, ಸರಳೀಕೃತ ಪ್ರಕ್ರಿಯೆಯು ವ್ಯವಹಾರವನ್ನು ಸುಲಭಗೊಳಿಸುವುದನ್ನು ಗಮನಾರ್ಹವಾಗಿ ಸುಧಾರಿಸುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 128ನೇ ಜನ್ಮದಿನವನ್ನು ಆಚರಣೆ




ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರಿನ: ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ(ಜಿಟಿಟಿಸಿ)ದಲ್ಲಿ ಇಂದು ಬೆಳಗ್ಗೆ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್(ಎಐಡಿವೈಒ) ವತಿಯಿಂದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 128ನೇ ಜನ್ಮದಿನವನ್ನು ಆಚರಿಸಲಾಯಿತು. ಎಐಯುಟಿ–ಯುಸಿ ಜಿಲ್ಲಾಧ್ಯಕ್ಷರಾದ ತಿರುಮಲ ರಾವ್ ಅವರು ನೇತಾಜಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು. ನೇತಾಜಿ ಸುಭಾಷ್ ಚಂದ್ರ ಬೋಸ್ ಮಹಾನ್ ಸ್ವಾತಂತ್ರ ಹೋರಾಟಗಾರರಾಗಿ ಬೆಳೆದರು. ಬಾಲ್ಯದಲ್ಲಿಯೇ ಹಲವಾರು ಗುಣಗಳನ್ನು ಅವರು ರೂಡಿಸಿಕೊಂಡಿದ್ದರು. ಅನ್ಯಾಯದ ವಿರುದ್ಧ ಹೋರಾಡುವ ಮನಸ್ಥಿತಿಯನ್ನು ರೂಡಿಸಿಕೊಂಡರು. ಕೇವಲ ಸ್ವಾತಂತ್ರ್ಯ ಪಡೆಯುವುದಷ್ಟೇ ಅಲ್ಲದೆ ಸಮಾನತೆಯ ದೇಶವನ್ನು ಕಟ್ಟಬೇಕೆಂಬ ಕನಸು ಅವರು ಹೊಂದಿದ್ದರು. ಮಾನವನಿಂದ ಮಾನವನ ಶೋಷಣೆ ಇಲ್ಲದ ಸರ್ವಸಮಾನತೆಯ ಕನಸು ಅವರದಾಗಿತ್ತು. ಅವರ ರಾಜರಹಿತ ಹೋರಾಟದ ಕೆಚ್ಚು ಯುವಕರನ್ನು ಆಕರ್ಷಿಸುತ್ತಿತ್ತು. ಆದ್ದರಿಂದಲೇ ಅವರು ನೀವು ನನಗೆ ರಕ್ತ ಕೊಡಿ ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ ಎಂಬ ಘೋಷಣೆಯನ್ನು ಮೊಳಗಿಸಿದರು. ಆದರೆ ಅವರ ಕನಸು ನನಸಾಗಲಿಲ್ಲ ಆದ್ದರಿಂದಲೇ ಇಂದು ಸಮಾಜದಲ್ಲಿ ಶಿಕ್ಷಣ ವ್ಯಾಪಾರಿಕರಣ, ಅಸಮಾನತೆ , ಬಡತನ, ನಿರುದ್ಯೋಗ, ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಳವಾಗಿವೆ. ಆದ್ದರಿಂದ ಇಂದಿನ ವಿದ್ಯಾರ್ಥಿ ಯುವಜನರು ಅವರ ಆದರ್ಶಗಳನ್ನು ರೂಡಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ತರಬೇತಿ ಸಂಸ್ಥೆಯ ಉಪನ್ಯಾಸಕರಾದ ಬಸವರಾಜ ಗಂಗನಹಳ್ಳಿ ಅವರು ಮಾತನಾಡಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ವಿಚಾರ ಮತ್ತು ಆದರ್ಶಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು. ಎಐಡಿವೈಒ ಜಿಲ್ಲಾ ಉಧ್ಯಕ್ಷರಾದ ತಿರುಪತಿ ಗೋನವಾರ ಜಿಲ್ಲಾ ಸಮಿತಿ ಸದಸ್ಯರಾದ ಬಾಲಾಜಿ ಸಿಂಗ್, ಚಂದ್ರಶೇಖರ್, ನೂರಾರು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ದಲಿತ ಕೂಲಿ ಕಾರ್ಮಿಕರ ಮೇಲಿನ ಹಲ್ಲೆಗೆ ಖಂಡನೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಕೆಲಸಕ್ಕೆ ತಡವಾಗಿ ಬಂದರೆಂಬ ಕಾರಣಕ್ಕೆ ದಲಿತ ಕೂಲಿ ಕಾರ್ಮಿಕರನ್ನು ಅಮಾನವೀಯ, ಹೀನ, ಕ್ರೂರವಾಗಿ ಶಿಕ್ಷಿಸಿದ ವಿಜಯಪುರದ ಘಟನೆಯನ್ನು ಕರ್ನಾಟಕ ಮಾದಿಗ ಮಹಾ ಸಭಾ ರಾಜ್ಯ ಮುಖಂಡರಾದ ವೆಂಕಟೇಶ್ ಹೆಗಡೆ ಅವರು ಖಂಡಿಸಿದ್ದಾರೆ.

ದಲಿತ ದೌರ್ಜನ್ಯ ಯಾವ ಮಟ್ಟಕ್ಕೆ ಇದೆ ಎಂಬುದಕ್ಕೆ ಇದು ಸಾಕ್ಷಿ ಒದಗಿಸುತ್ತದೆ. ಬಾಗಲಕೋಟೆ ಜಿಲ್ಲೆ ಚಿಕ್ಕಲಗಿ ಗ್ರಾಮದ ಮೂವರು ಕಾರ್ಮಿಕರನ್ನು ಅತ್ಯಂತ ಕ್ರೂರವಾಗಿ ಕಟ್ಟಿಹಾಕಿ ಪಾದ, ಬೆನ್ನು ಸೇರಿದಂತೆ ದೇಹದ ವಿವಿಧ ಭಾಗಗಳಿಗೆ ಅತ್ಯಂತ ಬಲವಾಗಿ ಥಳಿಸಲಾಗಿದೆ. ಖೇಮು ರಾಥೋಡ್ ಎಂಬ ಭಟ್ಟಿ ಮಾಲೀಕ ತನ್ನ ಬೆಂಬಲಿಗರೊಂದಿಗೆ ಈ ರೀತಿ ಅಮಾನುಷ ಹಲ್ಲೆ ಮಾಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಹರದಾಡಿದ ವೀಡಿಯೋದಿಂದ ಬಯಲಾಗಿದೆ. ಇದು ವೀಡಿಯೋ ಅದ ಕಾರಣಕ್ಕೆ ಬಯಲಾಗಿದೆ. ಇಂಥ ಅದೆಷ್ಟು ಅಮಾನುಷ ಘಟನೆ ನಡೆಯುತ್ತಿರಬಹುದು ಎಂಬ ಅನುಮಾನವಿದೆ.

ದೂರದ ಊರಿನಿಂದ ಬಂದ ಇಂಥ ಬಡ ಕಾರ್ಮಿಕರ ಮೇಲೆ ಹಲ್ಲೆ ಮಾಡಿದ ಕ್ರೂರಿಗಳಿಗೆ ಕಠಿಣ ಶಿಕ್ಷೆ ಆಗಬೇಕು ಎಂಬುದು ಒಂದು ಕಡೆಯಾದರೆ ಈ ಬಡ ಕುಟುಂಬದ ಕೂಲಿ ಗಳಿಗೆ ಪರಿಹಾರದ ಜೊತೆಗೆ ಸರ್ಕಾರಿ ಕೆಲಸ ಕೊಡಲು ಸರ್ಕಾರ ಕ್ರಮ ವಹಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ತಾಳಮಡಗಿ ಪಿಕೆಪಿಎಸ್ ಅಧ್ಯಕ್ಷರಾಗಿ ಉಮೇಶ ಕುಲಕರ್ಣಿ ಉಪಾಧ್ಯಕ್ಷರಾಗಿ ರವಿ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ತಾಳಮಡಗಿ ಗ್ರಾಮದ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಉಮೇಶ ಕುಲಕರ್ಣಿ ಉಪಾಧ್ಯಕ್ಷರಾಗಿ ರವಿ ಮಾಣಿಕರಾವ ಅವಿರೋಧ ಆಯ್ಕೆಯಾದರು. ಗುರುವಾರ ಪಿಕೆಪಿಎಸ್ ಕಾರ್ಯಾಲಯದಲ್ಲಿ ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೆ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಶಿವಾಜಿ ಹಂಗರಗಿ ಘೋಷಿಸಿದರು. ಬಳಿಕ ಮುಖ್ಯ ಕಾರ್ಯನಿರ್ವಾಹಕ ವಿಜಯಕುಮಾರ ನಾಗನಕೇರಾ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರನ್ನು ಸನ್ಮಾನಿಸಿದರು. ನೂತನ ಅಧ್ಯಕ್ಷ ಉಮೇಶ ಕುಲಕರ್ಣಿ, ಕಾಂಗ್ರೆಸ್ ಬೆಂಬಲಿತ 12 ಜನ ನಿರ್ದೇಶಕರನ್ನು ಆಯ್ಕೆ ಮಾಡಿದ ಮತದಾರರಿಗೆ ಧನ್ಯವಾದಗಳು ತಿಳಿಸುತ್ತಾ ಮಾತನಾಡಿದ ಅವರು, ಕಾಂಗ್ರೆಸ್ ಬೆಂಬಲಿತ 12ಜನ ನಿರ್ದೇಶಕರು ಆಯ್ಕೆಯಾಗಿದ್ದೇವೆ, 12 ಜನ ನಿರ್ದೇಶಕರು ನನಗೆ ಅವಿರೋಧವಾಗಿ ಅಧ್ಯಕ್ಷನಾಗಿ ಆಯ್ಕೆ ಮಾಡಿದ್ದಾರೆ, ಅವರೆಲ್ಲರ ಸಹಕಾರದಿಂದ ಮುಂಬರುವ ದಿನಗಳಲ್ಲಿ ಸರ್ಕಾರದಿಂದ ಹಾಗೂ ಡಿಸಿಸಿ ಬ್ಯಾಂಕಯಿಂದ ಬರುವ ಸೌಲಭ್ಯಗಳನ್ನು ರೈತರಿಗೆ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಈ ವಿಜಯಕ್ಕೆ ಸಹಕರಿಸಿದ ಮಾಜಿ ಸಚಿವ ರಾಜಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ್ ಪಾಟೀಲ್, ಭೀಮರಾವ ಪಾಟೀಲ್, ಡಿಸಿಸಿ ಬ್ಯಾಂಕ ಅಧ್ಯಕ್ಷ ಅಮರ ಖಂಡ್ರೆ, ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಶ್ರೀಮಂತರಾವ ಪಾಟೀಲ್, ಚಂದ್ರಶೇಖರ್ ಪಾವಡಶೆಟ್ಟಿ, ಡಾ, ಹೈದರ್ ಖಾನ ಪಟೇಲ್, ಹಾಗೂ ಗ್ರಾಮಸ್ಥರಿಗೆ ಧನ್ಯವಾದಗಳು ಸಲ್ಲಿಸುತ್ತೇನೆ ಎಂದರು. ಉಪಾಧ್ಯಕ್ಷ ರವಿ ಮಾಣಿಕರಾವ ಮಾತನಾಡಿ, ನಾನು ಕೂಡ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿ ಇದ್ದಿದೆ, ಹಿರಿಯರು ತೆಗೆದುಕೊಂಡ ನಿರ್ಣಾಯಕ್ಕೆ ಬದ್ಧನಾಗಿದ್ದೇನೆ. ಚುನಾವಣೆಯಲ್ಲಿ ಹಗಲಿರಳು ಶ್ರಮಿಸಿ ಸಹಕರಿಸಿದ ಎಲ್ಲಾ ರೈತರಿಗೆ ಹಾಗೂ ಗ್ರಾಮದ ಹಿರಿಯರಿಗೆ ಚಿರಋಣಿಯಾಗಿರುತ್ತೇನೆ, ರೈತರಿಗಾಗಿ ಹಗಲಿರಳು ದುಡಿಯುತ್ತೇನೆ ಎಂದು ಹೇಳಿದರು. ಗ್ರಾಮದ ಹಿರಿಯರಾದ ಶ್ರೀಮಂತರಾವ ಪಾಟೀಲ್ ಮಾತನಾಡಿ, ಸಹಕಾರಿ ಸಂಘಕ್ಕೆ ತನ್ನದೇ ಆದ ಛಾಪವಿದೆ ಅದನ್ನು ಸಾಮಾನ್ಯ ರೈತರ ಮನೆಗೆ ಮುಟ್ಟಿಸುವಲ್ಲಿ ಸದಸ್ಯರು ಕಾರಣೀಭೂತರಗಬೇಕು ಎಂದು ಮನವಿ ಮಾಡಿದರು. ಚುನಾವಣೆ ಸೋಲು ಗೆಲುವು ಸಹಜವಾಗಿಯೇ ಸ್ವೀಕರಿಸಿಕೊಳ್ಳಬೇಕು, ಪಕ್ಷ ಭೇದ ಭಾವ ಮರೆತು ಸಹಕಾರಿ ಸಂಘದ ಅಭಿವೃದ್ಧಿಗೆ ಎಲ್ಲರೂ ಒಂದೇ ಮನಸ್ಸಿನಿಂದ ರೈತರ ಒಳತಿಗಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ನಿರ್ದೇಶಕರಾದ ಅಶೋಕ ಬಸವಣ್ಣಪ್ಪ, ರವೀಂದ್ರ ಶರಣಪ್ಪ, ವಿಜಯಕುಮಾರ್ ಪುಂಡಲೀಕ, ಕಸ್ತೂರಬಾಯಿ ಮಾಣಿಕಪ್ಪ, ಚಂದ್ರಕಲಾಬಾಯಿ ವಿಶ್ವನಾಥ, ವೀರಶೆಟ್ಟಿ ಭೀಮಶಾ, ಲಕ್ಷ್ಮಣ ಸೆಟ್ಟಾಜಿ, ಮಹೇಬೂಬ ಖಾನ್ ನೂರಖಾನ, ಸೋಮಶೇಖರ ಮಡಿವಾಳಪ್ಪ, ಕೈಲಾಸ ಪ್ರಭು, ಸಿಬ್ಬಂದಿಗಳಾದ ಪ್ರಹ್ಲಾದ ವಿಶ್ವಕರ್ಮ, ರಾಜಕುಮಾರ ದಂತಾಬಾದ್, ಶೇಷಾಂಕ ಧರಿಮಳ, ಬಲವಂತ ಜಮಾದರ್ ಹಾಗೂ ಗ್ರಾಮದ ಪ್ರಮುಖರಾದ ಬಾಬುರಾವ್ ಪಾಟೀಲ್, ಶೇಖರ್ ಪಾವಡಶೆಟ್ಟಿ, ಅಣ್ಣೇಪ್ಪ ಕಂದಗುಳ, ಪ್ರಕಾಶ ಒಣಕೇರಿ, ಶ್ರೀಕಾಂತ ಕುಲಕರ್ಣಿ, ಪಪ್ಪು ಪಾಟೀಲ್, ಡಾ, ಹೈದರಖಾನ ಪಟೇಲ್, ಸೋಮಶೇಖರ ಪಾಟೀಲ್, ರಾಜಕುಮಾರ ಪಾವಡಶೆಟ್ಟಿ, ಅಮಜತ್ ಖಾನ್ ಪಟೇಲ್, ಷರೀಫ್ ಖಾನ ಪಟೇಲ್, ಭರತ್ ಸಾಹೇಬ್, ಶಿವಾನಂದ ತಂಬಾಕೆ, ಇಮ್ಮೈತಿಯಾಸ್ ಖಾನ್ ಪಟೇಲ್, ಮುಕರಮ ಖಾನ ಪಟೇಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಧನ್ನೂರ(ಹೆಚ್) ಪಿ.ಕೆ.ಪಿ.ಎಸ್, ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ವಿಜಯೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತಾಲೂಕಿನ ಧನ್ನೂರ(ಹೆಚ್) ಪಿ.ಕೆ.ಪಿ.ಎಸ್ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಜಯಸಾಧಿಸಿದ್ದು ವಿಜಯೋತ್ಸವ ಆಚರಿಸಿದರು. ಚುನಾವಣೆ ನಡೆದ 12 ಸ್ಥಾನಗಳಿಗೆ 10 ಸ್ಥಾನದಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಶಿವಕುಮಾರ ಬಾವುಗೆ, ಗುರನಾಥ ಬಿರಾದಾರ, ಸತೀಶ ಹಾಳೆ, ರವೀಂದ್ರ ಪಾಟೀಲ, ಶಿವಕುಮಾರ ಲಕಶೆಟ್ಟಿ, ಮಲ್ಲಪ್ಪ ಸುತಾರ, ವಿಯಕುಮಾರ ರಾಠೋಡ, ಕಲ್ಲಪ್ಪ ಬೀರಗೊಂಡ, ಕಾರ್ತಿಕ ಮಂಡಿ, ಚಂದ್ರಕಲಾ ದಾನಿ ಪಿಕೆಪಿಎಸ್ ಚುನಾವಣೆಯಲ್ಲಿ ಗೆಲುವ ಸಾಧಿಸಿದ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು. ಇವರಲ್ಲಿ ಗುರುನಾಥ ಬಿರಾದಾರ ಧನ್ನೂರ(ಹೆಚ್) ಅಧ್ಯಕ್ಷರಾಗಿ ಆಯ್ಕೆಯಾದರು.

ಮುಖಂಡರಾದ ಶ್ರೀಕಾಂತ ದಾನಿ, ಕಾಶಿನಾಥ ಖಂಡ್ರೆ, ಸೂರ್ಯಕಾಂತ ಜಮಶೆಟ್ಟಿ ಸಂತೋಷ ಶೇಡೋಳೆ, ಸತೀಶ ಪಾಟೀಲ ರುದನೂರ, ರಾಜು ಅಂಬರೆ, ವಿಯಕುಮಾರ ಹಾಳೆ, ಸಂಜು ಅರಳೆ, ವಿಶಾಲ.ಪಿ, ನಾಗನಾಥ ಅರಳಿ, ಶರಣು ಪರಮೇಶ್ವರ ಪಾಟೀಲ ಹರ್ಷವ್ಯಕ್ತ ಪಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

# ಯುವಕರಲ್ಲಿ ದೇಶಪ್ರೇಮದ ಬೀಜ ಮೊಳಕೆ ಒಡೆಯಲಿ : ವೀರಣ್ಣ ಕಂಬಳಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಯುವಧ್ವನಿ ಶಿಕ್ಷಣ ಮತ್ತು ಸಾಂಸ್ಕೃತಿಕ ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಸ್ಥೆ ಮೋರನಹಳ್ಳಿ,ನೆಹರು ಯುವ ಕೇಂದ್ರ ಕೊಪ್ಪಳ,ಮಹಿಳಾ ಧ್ವನಿ ಸಂಸ್ಥೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ನೇತಾಜಿ ಸುಭಾಷ್ ಚಂದ್ರಬೋಷ್ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಹಲಗೇರಿಯ ಶ್ರೀ ರಾಜರಾಜೇಶ್ವರಿ ಕಾಲೇಜನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಇದೇ ವೇಳೆ ಕ್ರಾಂತಿಕಾರಿ ಹೋರಾಟಗಾರ ನೇತಾಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪನಮನ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ವೀರಣ್ಣ ಕಂಬಳಿ ವಹಿಸಿಕೊಂಡು ಕಾರ್ಯಕ್ರಮ ಕುರಿತು ಅಪ್ರತಿಮ ಸ್ವಾತಂತ್ರ್ಯಹೋರಾಟಗಾರ,ಪ್ರಮುಖ ಕ್ರಾಂತಿಕಾರಿ ನಾಯಕ, ದೇಶಭಕ್ತ ಮತ್ತು ರಾಷ್ಟ್ರೀಯತಾವಾದಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನಾಚರಣೆಯನ್ನು ಇಡೀ ರಾಷ್ಟ್ರವು ಸ್ಮರಿಸುತ್ತಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಅವರ ಭಾಗವಹಿಸುವಿಕೆ ಗಮನಾರ್ಹವಾದುದು. ಅವರು ಕೆಚ್ಚೆದೆಯ ಮತ್ತು ಧೈರ್ಯಶಾಲಿ ನಾಯಕರಾಗಿದ್ದರು. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಗವದ್ಗೀತೆಯಿಂದ ಆಳವಾಗಿ ಸ್ಫೂರ್ತಿ ಪಡೆದ ಸುಭಾಷ್ ಚಂದ್ರ ಬೋಸ್ ಅವರ ತ್ಯಾಗ ಮತ್ತು ಹೋರಾಟವನ್ನು ಮರೆಯಲು ಸಾಧ್ಯವಿಲ್ಲ ಎಂದರು

ಬಿ.ಎನ್.ಹೊರಪೇಟಿ ಮಾತನಾಡಿ ನೇತಾಜಿ ಎಂದೇ ಖ್ಯಾತರಾಗಿರುವ ಸುಭಾಷ್ ಚಂದ್ರ ಬೋಸ್ ಅವರು 'ನನಗೆ ರಕ್ತ ಕೊಡಿ ಮತ್ತು ನಾನು ನಿಮಗೆ ಸ್ವಾತಂತ್ರ್ಯ ನೀಡುತ್ತೇನೆ' ಎಂಬ ಘೋಷಣೆಯನ್ನು ನೀಡಿದ್ದಾರೆ. ಇಂದಿಗೂ ರಾಷ್ಟ್ರದ ಪ್ರತಿಯೊಬ್ಬ ದೇಶಭಕ್ತರ ಹೃದಯದಲ್ಲಿ ಮಸಿ ಬಳಿದಿದೆ ಮಾತ್ರವಲ್ಲದೆ ನಮ್ಮ ಬಗ್ಗೆ ನಮಗೆ ನೆನಪಿಸುತ್ತಿದೆ. ರಾಷ್ಟ್ರದ ಕಡೆಗೆ ಬದ್ಧತೆ, ಕರ್ತವ್ಯ ಮತ್ತು ಜವಾಬ್ದಾರಿ. ಮಹಾನ್ ತ್ಯಾಗ ಮತ್ತು ಪರಿಶ್ರಮಗಳ ಮೂಲಕ ಗಳಿಸಿದ ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಶ್ರಮಿಸಬೇಕು. ಯುವಕರು ಕೂಡ ದೇಶಸೇವೆಗೆ ಮುಂದಾಗಬೇಕೆಂದರು.

ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಸಾಮಾಜಿಕ ಕಾರ್ಯಕರ್ತೆ ಪ್ರಿಯದರ್ಶಿನಿ ಮುಂಡರಗಿಮಠ,ಉಪನ್ಯಾಸಕರಾದ ಬಸವರಾಜ,ಶ್ವೇತಾ,ನವೀನ್ ,ಮಕ್ಕಳು ಹಾಗೂ ಶಿಕ್ಷಕರು ಉಪಸ್ಥಿತಿ ಇದ್ದರು.

# 2024ನೇ ಸಾಲಿನ ರಾಜ್ಯಮಟ್ಟದ "ಜನಪದಸಿರಿ" ಪ್ರಶಸ್ತಿ ಪ್ರಧಾನ ಸಮಾರಂಭ. 24 ರಂದು.

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ತಾಲೂಕಿನ ಹಾರಕೂಡ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದಲ್ಲಿ ಪ್ರೊ. ಸೂಗಯ್ಯ ಹಿರೇಮಠ ಸಾಹಿತ್ಯ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಕಲಬುರ್ಗಿ ವತಿಯಿಂದ ಶುಕ್ರವಾರ ದಿನಾಂಕ 24 ಜನವರಿ 2025 ರಂದು ಬೆಳಗ್ಗೆ 11 ಗಂಟೆಗೆ ನಾಡಿನ ಖ್ಯಾತ ಜಾನಪದ ವಿದ್ವಾಂಸರಾದ ಎಚ್.ಕಾಶಿನಾಥ ರೆಡ್ಡಿ, ಈ ಭಾಗದ ಖ್ಯಾತ ಜನಪದ ವಿದ್ವಾಂಸರಾದ ಡಾ. ಹನುಮಂತರಾಯ ದೊಡ್ಡಮನಿ ಮಲ್ಲಾಬಾದ ಹಾಗೂ ಜನಪದ ರಂಗಭೂಮಿ ಕಲಾವಿದರಾದ ನಿಂಗಣ್ಣಗೌಡ ಪೊಲೀಸ್ ಪಾಟೀಲ ಸಿಂಗನಹಳ್ಳಿ ಇವರನ್ನು 2024ನೇ ಸಾಲಿನ ರಾಜ್ಯಮಟ್ಟದ "ಜನಪದಸಿರಿ" ಪ್ರಶಸ್ತಿ ಪ್ರಧಾನ ಗೌರವಿಸಲಾಗುವುದು.

ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ಹಾರಕೂಡ ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ವಹಿಸುವರು.

ಉದ್ಘಾಟನೆ : ಡಾ. ರಮೇಶ ಲಂಡನಕರ್, ಕುಲ ಸಚಿವರು ಗುಲ್ಬರ್ಗ ವಿಶ್ವವಿದ್ಯಾಲಯ ಕಲಬುರ್ಗಿ.

ಪುಸ್ತಕ ಬಿಡುಗಡೆ : ಡಾ. ಜಯದೇವಿ ಗಾಯಕವಾಡ್ ಸಂಪಾದಿತ ಹಾಗೂ ಸುಜಾತ ಗೌನಳ್ಳಿ ಸಂಪಾದಿತ "ಒಮ್ಮೆ ನೋಡು ಹಾರಕೂಡ ಮಠ" ಶ್ರೀ ರಾಮಯ್ಯ ಐನುಲಿಸ್ವಾಮಿ ಇವರು ರಚಿಸಿದ ಭಕ್ತಿಗೀತೆಗಳು.

ಪ್ರಶಸ್ತಿ ಪ್ರಧಾನ : ಡಾ ಸುರೇಶ ಸಜ್ಜನ, ಉಪಾಧ್ಯಕ್ಷರು ಡಿಸಿಸಿ ಬ್ಯಾಂಕ್ ಕಲಬುರ್ಗಿ.

ಅಧ್ಯಕ್ಷತೆ: ಪ. ಮಾನು ಸಗರ, ಗೌರವ ಅಧ್ಯಕ್ಷರು, ಸೂಗಯ್ಯ ಹಿರೇಮಠ ಸಾಹಿತ್ಯ ಹಾಗೂ ಸಾಂಸ್ಕೃತಿಕ ಟ್ರಸ್ಟ್.

ಮುಖ್ಯ ಅತಿಥಿಗಳು : ಡಾ. ಡಿ.ಎನ್. ಅಕ್ಕಿ, ಸಂಶೋಧಕರು ಮತ್ತು ಸಾಹಿತಿಗಳು.

ಡಾ. ಸ್ವಾಮಿರಾವ ಕುಲಕರ್ಣಿ, ಹಿರಿಯ ಸಾಹಿತಿಗಳು ಕಲಬುರ್ಗಿ.

ಶ್ರೀ ಆನಂದ ಸ್ವಾಮಿಗಳು, ಸಿದ್ದಲಿಂಗೇಶ್ವರ ಮಠ, ದಂಡಸೋಲಾಪುರ.

ವಿಶೇಷ ಸನ್ಮಾನ : ಡಾ. ಬಸವರಾಜ ಕೊನೇಕ, ಶರಣಬಸವ ವಿಶ್ವವಿದ್ಯಾಲಯ ಗೌರವ ಡಾ–ಕ್ಟರೇಟ್ ಪದವಿ ಪುರಸ್ಕೃತರು. ಡಾ. ಎಸ್. ಎಸ್. ಗುಬ್ಬಿ, ಸುವರ್ಣ ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತರು.

ಗೌರವ ಉಪಸ್ಥಿತಿ: ಶಾಂತಮ್ಮ ಸುಗಯ್ಯ ಹಿರೇಮಠ ಹಾಗೂ ನಟರಾಜ ಸೂಗಯ್ಯ ಹಿರೇಮಠ, ಅಧ್ಯಕ್ಷರು ಸೂಗಯ್ಯ ಹಿರೇಮಠ ಸಾಹಿತ್ಯ ಹಾಗೂ ಸಾಂಸ್ಕೃತಿಕ ಟ್ರಸ್ಟ್.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಾದ ಮುದುಕಾ ಬಸವರಾಜ ಬೀದರ, ಶಿಕ್ಷಣ ಕ್ಷೇತ್ರ.

ವೈಜನಾಥ ಎಮ್. ಚನ್ನಶೆಟ್ಟಿ ಬೀದರ, ಶಿಕ್ಷಣ ಕ್ಷೇತ್ರ.

ಡಾ. ವಿಜಯ ಕುಮಾರ ಪರೂತೆ ಕಲಬುರ್ಗಿ, ಸಾಹಿತ್ಯ ಕ್ಷೇತ್ರ.ನೀಲಮ್ಮ ಕತ್ನಳ್ಳಿ ಕಲಬುರಗಿ, ಸಾಹಿತ್ಯ ಕ್ಷೇತ್ರ. ಶೋಭಾತಿ ಚಕ್ಕಿ ಸೇಡಂ, ಸಾಹಿತ್ಯಕ್ಷೇತ್ರ.ಶಿವಶರಣ ಎಸ್. ಬಾಳಿ ಕಲಬುರಗಿ, ಶಿಕ್ಷಣ ಕ್ಷೇತ್ರ.

ನಾರಾಯಣ ಸಿಂಗಾಡೆ ಕಲಬುರ್ಗಿ, ಸಮಾಜ ಸೇವೆ.

ನೀಲಕಂಠ ಜಮಾದರ ಕಲಬುರ್ಗಿ,ಸಮಾಜ ಸೇವೆ.ವಿ. ಬಿ. ಐರಡ್ಡಿ ರಾಯಚೂರು, ಶಿಕ್ಷಣ ಕ್ಷೇತ್ರ. ಡಾ. ಎಸ್. ಬಿ. ಕಾಮಶೆಟ್ಟಿ ಕಲಬುರ್ಗಿ, ಶಿಕ್ಷಣ ಕ್ಷೇತ್ರ.ಬಿ. ಎಸ್. ಮಾಲಿ ಪಾಟೀಲ ಕಲಬುರ್ಗಿ, ಶಿಕ್ಷಣ ಕ್ಷೇತ್ರ. ಮೀನಾಕ್ಷಿ ಎ. ಗುತ್ತೇದಾರ ಕಲಬುರಗಿ, ಚಿತ್ರಕಲಾ ಕ್ಷೇತ್ರ ಇವರನ್ನು ಪ್ರೊ. ಸುಗಯ್ಯ ಹಿರೇಮಠ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

# ಸುರಪುರ ಎಬಿವಿಪಿ ವತಿ ಇಂದ ಸ್ವಾತಂತ್ರ್ಯ ವೀರ ಸುಭಾಷ್ ಚಂದ್ರಬೋಸ್ ಅವರ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಸುರಪುರ :ಇಂದು ದಿನಾಂಕ 23–1–2025 ರಂದು ಸುರಪುರದ ಃಅಒ ಮಹಿಳಾ ವಸತಿ ನಿಲಯದಲ್ಲಿ ಸುಭಾಷ್ ಚಂದ್ರಬೋಸ್ ಸ್ವಾತಂತ್ರ ಹೋರಾಟಗಾರ. ಇವರ ಜಯಂತಿ ಎನ್ನು ಎಬಿವಿಪಿ ವತಿ ಇಂದ ಆಚರಣೆ ಮಾಡಲಾಯಿತು ಈ ಸಂದರ್ಬದಲ್ಲಿ ವಸತಿ ನಿಲಯಗಳ ತಾಲೂಕ ಅಧಿಕಾರಿ ಶ್ರೀ ತಿಪ್ಪಾರೆಡ್ಡಿ ಸರ್,ಹಾಗೂ ಮಹಿಳಾ ವಸತಿ ನಿಲಯದ ಶ್ರೀ ಮತಿ ನೀಲಮ್ಮ ಮೇಡಂ, ಎಬಿವಿಪಿ ರಾಜ್ಯ ಉಪಾಧ್ಯಕ್ಷರು ಡಾಕ್ಟರ್ ಉಪೇಂದ್ರ ನಾಯಕ ಸುಬೇದಾರ ಮತ್ತು ನಗರ ಕಾರ್ಯದರ್ಶಿ ದೇವರಾಜ್ ನಟೇಕರ್ ಹಾಗೂ ಸಹ ಕಾರ್ಯದರ್ಶಿ ದೇವರಾಜ್, ಠಿ ಛಿಂಟಟಜಂಜ ಪಾಲ್ಗೊಂಡಿದ್ದರು. ಈ ಸಂದರ್ಬದಲ್ಲಿ ವಸತಿ ನಿಲಯದ ವಿವಿಧ ಕಾಲೇಜ್ ನ ವಿದ್ಯಾರ್ಥಿನಿಯರು ಸುಭಾಷ್ ಚಂದ್ರಬೋಸ್ ಅವರ ಜೀವನ ಚರಿತ್ರೆಯ ಭಾಷಣ ಸ್ಪರ್ಧೆ ಎಲ್ಲಿ ಪಾಲ್ಗೊಂಡರು. ಪ್ರಥಮ ಬಹುಮಾನ



ನಿರ್ಮಲ ದ್ವಿತೀಯ ಬಹುಮಾನ ಶಾಂತಮ್ಮ ಪಡೆದುಕೊಂಡರು ಉಳಿದವರಿಗೆ ಕಿರು ಕಾಣಿಕೆ ನೀಡಲಾಯಿತು. ನಂತರ ರಾಜ್ಯ ಉಪಾಧ್ಯಕ್ಷ ಡಾಕ್ಟರ್ ಉಪೇಂದ್ರ ನಾಯಕ ಸುಬೇದಾರ ಸುಭಾಷ್ ಚಂದ್ರ ಬೋಸ್ ಅಪ್ರತಿಮ ಕಾಂತ್ರಿ ಕಾರಿ ಸ್ವತಂತ್ರ ಹೋರಾಟಗಾರ, ಅವರು ಭಾರತ ದೇಹದ ಸ್ವತಂತ್ರ ಪೂರ್ವದ ಪ್ರಧಾನ ಮಂತ್ರಿ ಆಗಿದ್ದರು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದರು ಆಜಾದ್ ಹಿಂದ್ ಪೌಜ್ ಖಓಂ ದೊಡ್ಡ ಸೈನ್ಯ ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದರು ಎಂದು ಹೇಳಿದರು ನಂತರ ತಿಪ್ಪಾರೆಡ್ಡಿ ಸರ್ ಅವರು ಕೂಡ ಎಬಿವಿಪಿ ಕಾರ್ಯಚಟುವಟಿಕೆ ಕುರಿತು ಎಬಿವಿಪಿ ಒಂದು ದೇಶ ಭಕ್ತ ವಿದ್ಯಾರ್ಥಿ ಸಂಘಟನೆ ಯಾಗಿದೆ ಎಂದು ಹೇಳಿದರು ಈ ಕಾರ್ಯಕ್ರಮದಲ್ಲಿ ಸುಕನ್ಯಾ, ಭವಾನಿ,ಲಕ್ಷ್ಮಿ,ರೇಣುಕಾ,ಭಾಗ್ಯಶ್ರೀ,ಮತ್ತು ಭಾಗ್ಯಶ್ರೀ ಃ ಖಜ, ಪ್ರಿಯಾಂಕ,ಪ್ರೇಮ,ಪದ್ಮಾವತಿ,ಕಾವೇರಿ,ಸೌಮ್ಯ ಪೂಜಾ, ಮಲ್ಕಮ್ಮ,ನಿರ್ಮಲ,ರಕ್ಷಿತಾ,ಶಾರದಾ,ಮಲ್ಲಮ್ಮ,ಕಾವೇರಿ,ಇನ್ನಿತರ ನೂರಾರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಕನ್ನಡ 24*7 ನ್ಯೂಸ್ ಎಚ್ ಡಿ ಚಾನೆಲ್ ಕನ್ನಡದ ಮೊಟ್ಟ ಮೊದಲ ಬ್ರಾಂಡ್ ಚಾನೆಲ್ ಉದ್ಘಾಟನೆ : ಚಿತ್ರನಟ ಶಿಷ್ಯ ದೀಪಕ್.!



**ಮಲ್ಲಮ್ಮ ನುಡಿ ವಾರ್ತೆ**

ಸುರಪುರ :ಬೆಂಗಳೂರು ಗ್ರಾಮಾಂತರದ ಕನ್ನಮಂಗಲದಲ್ಲಿ ರವಿವಾರದಂದು. ನಡೆದ ಕರ್ನಾಟಕ ಯುವರಕ್ಷಣಾ ವೇದಿಕೆ ರಾಜ್ಯ ಕಾರ್ಯಕಾರಣಿ ಸಭೆ ಹಾಗೂ ಕನ್ನಡ 24ಥ7 ನ್ಯೂಸ್. ಹೆಚ್.ಡಿ ಚಾನಲ್ ಕನ್ನಡದ ಮೊಟ್ಟ ಮೊದಲ ಬ್ರಾಡ್ ಕಾಸ್ಟ್ ಚಾನಲ್ ನ ಉದ್ಘಾಟನೆ ಮಾಡಲಾಯಿತು. ನಂತರ ಕರ್ನಾಟಕ ಯುವರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರು. ಹಾಗೂ ಕನ್ನಡ 24ಥ7 ನ್ಯೂಸ್ ಹೆಚ್. ಡಿ ಚಾನಲ್ ನ ಮುಖ್ಯಸ್ಥರು ಆದ ಡಾ. ಸುನಿಲ್, ಅವರ ನೇತೃತ್ವದಲ್ಲಿ ಯಾದಗಿರಿ ಜಿಲ್ಲಾ ಕರ್ನಾಟಕ ಯುವರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷರಾದ ಶ್ರೀಯುತ ಸಂತೋಷಭೂಮಶೆಟ್ಟಿ ಇವರನ್ನು ಕನ್ನಡ 24ಥ7 ನ್ಯೂಸ್ ಹೆಚ್. ಡಿ ಚಾನಲ್ ಗೆ ಯಾದಗಿರಿ ಜಿಲ್ಲೆಯ ವರದಿಗಾರನ್ನಾಗಿ ನೇಮಕ ಮಾಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ. ಕನ್ನಡ ಚಲನಚಿತ್ರ ನಟ ಶಿಷ್ಯ ದೀಪಕ್. ರಾಜ್ಯ ಕಾರ್ಯಧ್ಯಕ್ಷರು. ಪ್ರಭುರವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು..!

# 76ನೇ ಗಣರಾಜ್ಯೋತ್ಸವ ಪೆರೇಡ್ ವೀಕ್ಷಿಸಿಲು ವಿಶೇಷ ವ್ಯಕ್ತಿಯಾಗಿ ಕಮಲನಗರ ತಾಲೂಕಿನ ಮದನೂರ ಮಹಿಳೆ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಬೀದರ ಜಿಲ್ಲೆ ಕಮಲನಗರ ತಾಲೂಕಿನ ಮದನೂರ ಗ್ರಾಮದವರಾದ ವೈಶಾಲಿ ಗಂಡ ಸತೀಶ ಇವರು ಕಸೂತಿ ಕಾಯಕ ಮಾಡುತ್ತಿದ್ದು 76 ನೇ ಗಣರಾಜ್ಯೋತ್ಸವ ಪೆರೇಡ್ ವೀಕ್ಷಿಸಲು ವಿಶೇಷ ವ್ಯಕ್ತಿಯನ್ನಾಗಿ ಆಯ್ಕೆ ಮಾಡಿ ನವದೆಹಲಿಗೆ ಹಾಜರಾಗಲು ಗುರುವಾರ ಕಳುಹಿಸಲಾಯಿತು.

ಅಕ್ಕಮಹಾದೇವಿ ಸ್ವಸಹಾಯ ಸಂಘದ ಸದಸ್ಯರು ಹಾಗೂ ಜೈ ಹನುಮಾನ್ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಕಾರ್ಯದರ್ಶಿಯಾಗಿ ನ್ರಿಲ್ಮ್ ಯೋಜನೆಯಡಿ ಮತ್ತು ಸಂಜೀವಿನಿ ಯೋಜನೆಯಲ್ಲಿ 100000 ಲಕ್ಷ ಸಾಲ ಪಡೆದು ಕಸೂತಿ ಕೆಲಸ ಮಾಡಿ, ದಿನಕ್ಕೆ 5000 ರವರಿಗೆ ಅವರ ಗಳಿಸುತ್ತಿದ್ದಾರೆ. ಮತ್ತು ಇವರ ಕೆಲಸದಲ್ಲಿ 5 ಜನರಿಗೆ ಕೆಲಸ ಕೊಟ್ಟು ಅವರಿಗೆ ಅಭಿವೃದ್ಧಿಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಅವರು ಮಹಿಳೆಯರಿಗೆ ಆತ್ಮವಿಶ್ವಾಸದಿಂದ ಬದುಕಲು ಮಾದರಿಯಾಗಿದ್ದಾರೆ.

ನಮ್ಮ ಮದನೂರ ಗ್ರಾಮದಿಂದ ಆಯ್ಕೆಯಾಗಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಎಲ್ಲ ಮಹಿಳೆಯರು ಇದೇ ರೀತಿ ಯೋಜನೆಯನ್ನು ಸದುಪಯೋಗ ಪಡೆದುಕೊಳ್ಳಬೇಕು. ಇನ್ನು ಹೆಚ್ಚಿನ ಯಶಸ್ಸು ವೈಶಾಲಿ ಅವರಿಗೆ ದೂರಕಲಿ ಎಂದು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಬಾಷಾ ಶುಭ ಹಾರೈಸಿದರು.

ಮದನೂರ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದವರು ನನ್ನನ್ನು ಆಯ್ಕೆ ಮಾಡಿ ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪೆರೇಡ್ ವೀಕ್ಷಿಸಲು ಕಳಿಸಿ ಕೊಡುತ್ತಿರುವುದಕ್ಕೆ ತುಂಬಾ ಸಂತೋಷವಾಗುತ್ತಿದೆ. ಇಂತಹ ಒಳ್ಳೆಯ ಅವಕಾಶ ಕಲ್ಪಿಸಿ ಕೊಟ್ಟ ತಾ.ಪಂ. ಕಮಲನಗರನ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಮಾಣಿಕ್ ರಾವ್ ಪಾಟೀಲ, ಸಹಾಯಕ ನಿರ್ದೇಶಕರಾದ ಶ್ರೀ ಹಣಮಂತರಾಯ ಕೌಟಗೆ, ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರಾದ ಕು. ಕವಿತಾ ಬಿರಾದಾರ ಮತ್ತು ನನ್ನ ಸಿಬ್ಬಂದಿಗಳಾದ ಶಿಲ್ಪಾ ರಾಣಿ, ಜಗದೇವಿ, ಪ್ರಭಾವತಿ, ನಂದಿನಿ, ಪವಿತ್ರಾ, ನಾಗಪ್ಪ ಕಂಬಾರ, ಪೂಜಾ ರವರಿಗೆ ಧನ್ಯವಾದಗಳು ತಿಳಿಸುತ್ತೇನೆ.

ಎಲ್ಲ ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ಮುಂದೆ ಬರಬೇಕು. ಸರ್ಕಾರದ ಯೋಜನೆಗಳ ಸಹಾಯಧನವನ್ನು ಪಡೆದುಕೊಂಡು ಸ್ವಂತ ಬದುಕನ್ನು ಕಟ್ಟಿಕೊಳ್ಳಬೇಕು. ವೈಶಾಲಿ ಎನ್ನುವ ಮಹಿಳೆ ಇತರ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. "



**– ಮಾಣಿಕರಾವ್ ಪಾಟೀಲ,**
**ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು**

"ಮಹಿಳೆಯರು ಆರ್ಥಿಕವಾಗಿ ಸದೃಢರಾಗಬೇಕು. ಸ್ವಾವಲಂಬಿಯ ಜೀವನ ಕಟ್ಟಿಕೊಂಡು ಆನಂದದ ಜೀವನ ನಡೆಸಬೇಕು. ವೈಶಾಲಿ ಎಂಬುವರು ತಮ್ಮ ಬೆಳವಣಿಗೆಯ ಜೊತೆಗೆ ಇತರರನ್ನು ಬೆಳೆಸುವ ಪ್ರಯತ್ನ ಕಂಡು ಹೆಮ್ಮೆಯಾಗುತ್ತಿದೆ."



**–ಹಣಮಂತರಾಯ ಕೌಟಗೆ**
**ತಾ.ಪಂ. ಸಹಾಯಕ ನಿರ್ದೇಶಕರರು, ಕಮಲನಗರ///**




ಬಸವಕಲ್ಯಾಣ:– ತಾಲೂಕಿನ ದಾಸರವಾಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು (ECO CLUB) ಉದ್ಘಾಟಿಸಲಾಯಿತ್ತು. ಈ ಸಂದರ್ಭದಲ್ಲಿ ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಶ್ರೀಯುತ ಮೋಹನ್ ಮಾಮಳಿ, ಪ್ರಭಾರಿ ಮುಖ್ಯ ಗುರುಗಳಾದ ಲೋಹಿತ ಕಾಂಬಳೆ, ತಾಲೂಕ ಎಸ್ ಸಿ ಎಸ್ ಟಿ ನೌಕರ ಸಂಘದ ಅಧ್ಯಕ್ಷರು, ಸರಕಾರಿ ನೌಕರ ಸಂಘದ ತಾಲೂಕ ಪ್ರಧಾನ ಕಾರ್ಯದರ್ಶಿಗಳಾದ ಅಂಬಣ್ಣ ಘಾಂಗ್ರೆ. ಎಸ್‌ಡಿಎಂಸಿ ಸದಸ್ಯರಾದ ಸರೋಜಾ ಪಾಟೀಲ್,ಗ್ರಾಮದ ಗಣ್ಯರಾದ ನೀಲಕಂಠ ಯಾರ, ವೆಂಕಟ ಗಡಮಿದಿ, ಶಾಲೆಯ ಶಿಕ್ಷಕರು, ಮತ್ತು ಮಕ್ಕಳು ಭಾಗವಹಿಸಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಯಾದಗಿರಿ ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಅವರಿಗೆ ಅತ್ಯುತ್ತಮ ಜಿಲ್ಲಾ ಚುನಾವಣಾ ಅಧಿಕಾರಿ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜ : 23–ಮಾನ್ಯ ಮುಖ್ಯ ಚುನಾವಣಾ ಅಧಿಕಾರಿಗಳು ಕರ್ನಾಟಕ, ಬೆಂಗಳೂರು ರವರು 2024–25ನೇ ಸಾಲಿನ ರಾಜ್ಯಮಟ್ಟದ ಅತ್ಯುತ್ತಮ ಜಿಲ್ಲಾ ಚುನಾವಣಾ ಅಧಿಕಾರಿಗಳ ಪ್ರಶಸ್ತಿಗೆ ಯಾದಗಿರಿ ಜಿಲ್ಲೆಯ ಜಿಲ್ಲಾ ಚುನಾವಣಾ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಡಾ.ಸುಶೀಲ.ಬಿ ಅವರನ್ನು ಆಯ್ಕೆ ಮಾಡಿರುತ್ತಾರೆ.

ಈ ಪ್ರಶಸ್ತಿಗೆ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು/ ತಹಸಿಲ್ದಾರರು/ಕಾರ್ಯನಿರ್ವಾಹಕ ಅಧಿಕಾರಿಗಳು /ಮತಗಟ್ಟೆಮಟ್ಟದ ಅಧಿಕಾರಿಗಳ ಮೇಲ್ವಿಚಾರಕರು ಹಾಗೂ ಮತಗಟ್ಟೆ ಮಟ್ಟದ ಅಧಿಕಾರಿಗಳ ಪರಿಶ್ರಮದಿಂದ ಜಿಲ್ಲೆಗೆ ಪ್ರಶಸ್ತಿ ದೊರೆತಿದೆ ಎಂದು ಡಾ. ಸುಶೀಲಾ. ಬಿ ಭಾ.ಆ.ಸೇ ಮಾನ್ಯ ಜಿಲ್ಲಾ ಚುನಾವಣಾ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಯಾದಗಿರಿ ಪ್ರಕಟಣೆಯಲ್ಲಿ ತಿಳಿಸುವ ಜೊತೆಗೆ ಹರ್ಷವನ್ನು ವ್ಯಕ್ತಪಡಿಸಿದ್ದಾರೆ.

ಈ ಪ್ರಶಸ್ತಿಯನ್ನು ಜನೆವರಿ 25 ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಮತದಾರರ ದಿನಾಚರಣೆಯಲ್ಲಿ ವಿತರಿಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.



ಚಿಟಗುಪ್ಪ:– 26ನೇ ಗಣರಾಜ್ಯೋತ್ಸವದ ನಿಮಿತ್ಯ ಪಟ್ಟಣದ ವಿದ್ಯಾ ವಿಜ್ಞಾನ ಪ್ರಾಥಮಿಕ ಶಾಲೆಯಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಪತ್ರಕರ್ತ ರಾಜಕುಮಾರ ಆರ್. ಹಡಪದ ಅವರ ಹಿರಿಯ ಸೊಹೋದರನ ಮಗನಾದ ಕು. ಆದಿತ್ಯ ಎ. ಹಡಪದ ಬಸವಣ್ಣನವರ ವೇಷ ಧರಿಸಿ ವಚನಗಳು ಹೇಳುವುದರ ಮೂಲಕ ಗಮನ ಸೆಳೆದನು. (ಮಲ್ಲಮ್ಮ ನುಡಿ ಚಿತ್ರ)

# ನ್ಯೂಸ್ ಎಚ್ ಡಿ ಚಾನೆಲ್ ಕನ್ನಡದ ಮೊಟ್ಟ ಮೊದಲ ಬ್ರಾಂಡ್ ಚಾನೆಲ್ ಉದ್ಘಾಟನೆ : ಚಿತ್ರನಟ ಶಿಷ್ಯ ದೀಪಕ್.!



ಮಲ್ಲಮ್ಮ ನುಡಿ ವಾರ್ತೆ

ಸುರಪುರ :ಬೆಂಗಳೂರು ಗ್ರಾಮಾಂತರದ ಕನ್ನಮಂಗಲದಲ್ಲಿ ರವಿವಾರದಂದು. ನಡೆದ ಕರ್ನಾಟಕ ಯುವರಕ್ಷಣಾ ವೇದಿಕೆ ರಾಜ್ಯ ಕಾರ್ಯಕಾರಣಿ ಸಭೆ ಹಾಗೂ ಕನ್ನಡ 24ಥ7 ನ್ಯೂಸ್. ಹೆಚ್.ಡಿ ಚಾನಲ್ ಕನ್ನಡದ ಮೊಟ್ಟ ಮೊದಲ ಬ್ರಾಡ್ ಕಾಸ್ಟ್ ಚಾನಲ್ ನ ಉದ್ಘಾಟನೆ ಮಾಡಲಾಯಿತು. ನಂತರ ಕರ್ನಾಟಕ ಯುವರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರು. ಹಾಗೂ ಕನ್ನಡ 24ಥ7 ನ್ಯೂಸ್ ಹೆಚ್. ಡಿ ಚಾನಲ್ ನ ಮುಖ್ಯಸ್ಥರು ಆದ ಡಾ. ಸುನಿಲ್, ಅವರ ನೇತೃತ್ವದಲ್ಲಿ ಯಾದಗಿರಿ ಜಿಲ್ಲಾ ಕರ್ನಾಟಕ ಯುವರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷರಾದ ಶ್ರೀಯುತ ಸಂತೋಷ ಭೂಮಶೆಟ್ಟಿ ಇವರನ್ನು ಕನ್ನಡ 24ಥ7 ನ್ಯೂಸ್ ಹೆಚ್. ಡಿ ಚಾನಲ್ ಗೆ ಯಾದಗಿರಿ ಜಿಲ್ಲೆಯ ವರದಿಗಾರನ್ನಾಗಿ ನೇಮಕ ಮಾಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ. ಕನ್ನಡ ಚಲನಚಿತ್ರ ನಟ ಶಿಷ್ಯ ದೀಪಕ್. ರಾಜ್ಯ ಕಾರ್ಯಧ್ಯಕ್ಷರು. ಪ್ರಭುರವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# 1040 ಗ್ರಾಂ.ಗಾಂಜಾ ಜಪ್ತಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.22–ನಗರದ ಪಯಾನ್ ಖಬರಸ್ಥಾನ ಜಾಗದಲ್ಲಿ ಇಬ್ಬರು ಅಕ್ರಮವಾಗಿ ಗಾಂಜಾ ಮಾರಾಟ ಮಾಡಲಾಗುತ್ತಿದ್ದಾರೆ ಎಂಬ ಮಾಹಿತಿ ಮೇಲೆ ರೋಜಾ ಪೊಲೀಸ್ ಠಾಣೆ ಎಎಸ್‌ಐ ಸಿರಾಜ್ ಪಟೇಲ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಓರ್ವನನ್ನು ಬಂಧಿಸಿದ್ದಾರೆ.

ಘೋಟಾ ರೋಜಾದ ಮಿರ್ಜಾ ಇಮ್ರಾನ್ ಬೇಗ್ (21) ಎಂಬಾತನನ್ನು ಬಂಧಿಸಿ 10,400 ರೂ.ಮೌಲ್ಯದ 1040 ಗ್ರಾಂ.ಗಾಂಜಾ ಜಪ್ತಿ ಮಾಡಿದ್ದಾರೆ. ಮಹೆಬೂಬ್ ನಗರದ ಅಕ್ರಮ ಟಮಕಿ ಎಂಬಾತ ಪರಾರಿಯಾಗಿದ್ದಾನೆ. ಈ ಬಗ್ಗೆ ರೋಜಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ನಡೆದಿದೆ.

# ರಾಜ್ಯದ ಸ್ತಬ್ಧಚಿತ್ರಕ್ಕೆ ಪ್ರಶಸ್ತಿ ಲಭಿಸಲಿದೆ:

## ವಾರ್ತಾ ಇಲಾಖೆಯ ಆಯುಕ್ತ ಹೇಮಂತ ನಿಂಬಾಳ್ಕರ್ ವಿಶ್ವಾಸ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಜ.23 : ಈ ಬಾರಿ ಲಕ್ಕುಂಡಿಂ–ು ಶಿಲ್ಪಕಲೆಯ ತೊಟ್ಟಿಲು ವಿಷಯಾಧಾರಿತ ಸ್ತಬ್ಧಚಿತ್ರವು ಅತ್ಯಂತಅತ್ಯಾಕರ್ಷಣೀಯವಾಗಿದ್ದು, ಗಣರಾಜ್ಯೋತ್ಸವದಲ್ಲಿ ಭಾಗವಹಿಸಲಿರುವ ರಾಜ್ಯದ ಸ್ತಬ್ಧಚಿತ್ರವು ಪ್ರಶಸ್ತಿ ಪಡೆಯುವ ವಿಶ್ವಾಸವಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಐಪಿಎಸ್ ಅಧಿಕಾರಿ ಹೇಮಂತ ನಿಂಬಾಳ್ಕರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜ.23ರಂದು ಗುರುವಾರ ನವದೆಹಲಿಯ ಕರ್ತವ್ಯಪಥದಲ್ಲಿ ಸೇರಿದ ಜನರಿಂದ ನಿರೀಕ್ಷೆಗೂ ಮೀರಿ ಬಂದ ಪ್ರತಿಕ್ರಿಯೆಗೆ ಈ ಬಾರಿಯ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವ ರಾಜ್ಯದ ಸ್ತಬ್ಧಚಿತ್ರಕ್ಕೆ ಪ್ರಶಸ್ತಿ ದೊರೆಯಲಿದೆ ಎಂಬ ವಿಶ್ವಾಸವನ್ನು ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ವ್ಯಕ್ತಪಡಿಸಿದರು.

ಜ.23ರ ಗುರುವಾರ ನವದೆಹಲಿಯ ಕರ್ತವ್ಯ ಪಥದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನಡೆದ ಸ್ತಬ್ಧಚಿತ್ರದ ಪೂರ್ವಾಭ್ಯಾಸದಲ್ಲಿ ರಾಜ್ಯದ ಲಕ್ಕುಂಡಿ ಶಿಲ್ಪಕಲೆಯ ತೊಟ್ಟಿಲು ಸ್ತಬ್ಧಚಿತ್ರಕ್ಕೆ ಎರಡೂ ಬದಿಯಲ್ಲಿ ನೆರೆದ ಜನಸ್ತೋಮವು ತಮ್ಮ ಹತ್ತಿರ ಸ್ತಬ್ಧಚಿತ್ರ ಬಂದಾಗ ಅದರ ವಿನ್ಯಾಸ, ಶಿಲ್ಪಕಲೆ, ಸಂಸ್ಕೃತಿ, ಸಾಂಪ್ರದಾಯಿಕ ಉಡುಗೆಯೊಂದಿಗೆ ಭಾಗವಹಿಸಿದ ಕಲಾವಿದರ ದೃಶ್ಯವನ್ನು ಕಂಡ ಜನರು ಕರತಾಡನ ಮೂಲಕ ಅಭೂತಪೂರ್ವವಾಗಿ ಸ್ವಾಗತಿಸಿ ಪ್ರಶಂಸೆ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯದ ಪರವಾಗಿ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಪಾಲ್ಗೊಳ್ಳುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರತಿ ವರ್ಷ ತನ್ನ ವೈಶಿಷ್ಟಪೂರ್ಣ ಸ್ತಬ್ಧಚಿತ್ರಗಳ ಮೂಲಕವೇ ದೇಶದ ಗಮನ ಸೆಳೆಯುತ್ತಿದೆ. ಈ ಬಾರಿಯ ಗಣರಾಜ್ಯೋತ್ಸವದಲ್ಲಿ ರಾಜ್ಯದಿಂದ ಭಾಗವಹಿಸಲಿರುವ ಸ್ತಬ್ಧಚಿತ್ರವು ಗದಗಿನ ಲಕ್ಕುಂಡಿಯಲ್ಲಿರುವ




ಮಂದಿರಕ್ಕೆ ಹೋಲುವಂತಿರುವ ಸ್ತಬ್ಧಚಿತ್ರವನ್ನು ಅಂತಾರಾಷ್ಟ್ರೀಯ ಕಲಾವಿದ ಶಶಿಧರ ಅಡಪ ವಿನ್ಯಾಸಗೊಳಿಸಿದ್ದು, ದೆಹಲಿಯ ರಾಷ್ಟ್ರೀಯ ರಂಗಶಾಲಾ ಕ್ಯಾಂಪಿನಲ್ಲಿ ಕಳೆದ ಒಂದು ತಿಂಗಳಿನಿಂದ ರಾಜ್ಯದ 50ಕ್ಕೂ ಹೆಚ್ಚು ಜನ ಕಲಾವಿದರು, ಕುಶಲಕರ್ಮಿಗಳು ಮೈಕೊರೆಯುವ ಚಳಿಯಲ್ಲಿ ಸ್ತಬ್ಧಚಿತ್ರವನ್ನು ನಿರ್ಮಾಣಗೊಳಿಸಿದ್ದಾರೆ.

ಕರ್ತವ್ಯ ಪಥದಲ್ಲಿ ಸಾಗಿದ ಸ್ತಬ್ಧಚಿತ್ರಕ್ಕೆ ಕನ್ನಡ ಸಾಹಿತ್ಯ ಇರುವ "ಶಿಲ್ಪಕಲೆಯ ತೊಟ್ಟಿಲು ನಮ್ಮ ಗದುಗಿನ ಲಕ್ಕುಂಡಿ" ಎಂಬ ಹಾಡಿಗೆ ಹೆಸರಾಂತ ಕಲಾವಿದ ಪ್ರವೀಣ ಡಿ.ರಾವ್ ಅವರ ಸಂಗೀತ ಸಂಯೋಜನೆಯ ನೀನಾದಕ್ಕೆ ಗದಗ, ಬೆಂಗಳೂರು, ಮೈಸೂರು ಹಾಗೂ ಧಾರವಾಡದಿಂದ ಆಗಮಿಸಿದ ಸ್ತಬ್ಧಚಿತ್ರದ ಕಲಾವಿದರು ಸಾಂಪ್ರದಾಯಿಕ ಉಡುಗೆಯಲ್ಲಿ ಕಂಗೊಳಿಸಿ ಹೆಚ್ಚಿನ ಮೆರಗು ತಂದಿದ್ದಲ್ಲದಲೇ ಅಲ್ಲಿ ಸೇರಿದವರನ್ನು ರೋಮಾಂಚನಗೊಳಿಸಿತು.

ಸ್ತಬ್ಧಚಿತ್ರದ ಮೇಲ್ಭಾಗದಲ್ಲಿ 10 ಜನ ಕಲಾವಿದರು ಸೇರಿದಂತೆ 18 ಜನ ಕಲಾವಿದರಿದ್ದು, ಸ್ತಬ್ಧಚಿತ್ರದ ಇಕ್ಕೆಲಗಳಲ್ಲಿ ನಾಲ್ಕು ಪುರುಷ–ಮಹಿಳೆಯರು ಸಾಂಪ್ರಾದಾಯಿಕ ಉಡುಗೆಯಲ್ಲಿ ಭಾಗವಹಿಸಿದ್ದು, ಸ್ತಬ್ಧಚಿತ್ರಕ್ಕೆ ಇನ್ನಷ್ಟು ಮೆರಗು ತಂದಿತು.

ಕರ್ನಾಟಕದ ಗದಗ ಜಿಲ್ಲೆಯಲ್ಲಿರುವ ಲಕ್ಕುಂಡಿಯನ್ನು ಅದರ ಅದ್ಭುತ ಕಲ್ಲಿನ ವಾಸ್ತುಶಿಲ್ಪಕ್ಕಾಗಿ 'ಶಿಲ್ಪಕಲೆಯ ತೊಟ್ಟಿಲು' ಎಂದು ಕರೆಯಲಾಗುತ್ತದೆ. ಇಲ್ಲಿನ ಸುಂದರವಾದ ದೇವಾಲಯಗಳು, ಮೆಟ್ಟಿಲು ಬಾವಿಗಳು ಮತ್ತು ಚಾಲುಕ್ಯ ರಾಜವಂಶದ ಶಾಸನಗಳಿಗೆ ನೆಲೆಯಾಗಿದೆ. ಸಾಂಸ್ಕೃತಿಕ ಶಕ್ತಿ ಕೇಂದ್ರವಾಗಿರುವುದರ ಜೊತೆಗೆ ಕ್ರಿ. ಶ. 10 ರಿಂದ 12 ನೇ ಶತಮಾನದ ನಡುವೆ ಲಕ್ಕುಂಡಿ ಒಂದು ದೊಡ್ಡ ವಾಣಿಜ್ಯ ಕೇಂದ್ರವಾಗಿತ್ತು. ಈ ನಗರವು ಹಲವಾರು ರಾಜವಂಶಗಳಿಂದ ಆಳಲ್ಪಟ್ಟಿತ್ತಾದರೂ ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಚಾಲುಕ್ಯರ ರಾಜವಂಶ. ಲಕ್ಕುಂಡಿಯು ಪ್ರಾಚೀನಾನ್ವೇಷಕರು ಮತ್ತು ವಾಸ್ತುಶಿಲ್ಪ ಪ್ರಿಯರ ಸ್ವರ್ಗವಾಗಿದೆ. ಇದು 50 ದೇವಾಲಯಗಳನ್ನು ಹೊಂದಿದ್ದು, ಅವುಗಳಲ್ಲಿ ಹೆಚ್ಚಿನವು ಶಿವನಿಗೆ ಸಮರ್ಪಿತವಾಗಿವೆ; 101 ಮೆಟ್ಟಿಲು ಬಾವಿಗಳು (ಕಲ್ಯಾಣಿ / ಪುಷ್ಕರಣಿ); ಮತ್ತು 29 ಶಾಸನಗಳು ಇಲ್ಲಿವೆ. ಇವುಗಳು ಕಲ್ಯಾಣಿ ಚಾಲುಕ್ಯರ ಕಲೆ, ಸಂಸ್ಕೃತಿ ಮತ್ತು ವಾಸ್ತುಶಿಲ್ಪದ ಶ್ರೇಷ್ಠತೆಯ ಸಂಕೇತವಾಗಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ನಿರ್ವಹಿಸುತ್ತಿರುವ ವಸ್ತುಸಂಗ್ರಹಾಲಯವು ಲಕ್ಕುಂಡಿಂ–ು ಶ್ರೀಮಂತ ಶಿಲ್ಪಕಲೆಯನ್ನು ಪ್ರದರ್ಶಿಸುತ್ತಿದೆ.

ಸ್ತಬ್ಧಚಿತ್ರದ ಮುಂಭಾಗವು ಬ್ರಹ್ಮಜಿನಾಲಯ ದೇವಸ್ಥಾನದ ಬ್ರಹ್ಮನ ಪ್ರತಿಮೆಯನ್ನು ಹೊಂದಿದೆ. ಇದು ಲಕ್ಕುಂಡಿಯಲ್ಲಿರುವ ಅತ್ಯಂತ ಹಳೆಯ ಜೈನ ದೇವಾಲಂುವಾಗಿದ್ದು ಭಗವಾನ್ ಮಹಾವೀರನಿಗೆ ಸಮರ್ಪಿತವಾಗಿದೆ. ಅದರ ನಂತರ ಬ್ರಹ್ಮ ಜಿನಾಲಯ ದೇವಸ್ಥಾನದ ತೆರೆದ ಕಂಬದ ಮಂಟಪವಿದೆ. ಸ್ತಬ್ಧಚಿತ್ರದ ಮುಖ್ಯ ವಿಭಾಗವು ಭವ್ಯವಾದ ಮತ್ತು ಅಲಂಕೃತವಾದ ಕಾಶಿ ವಿಶ್ವೇಶ್ವರ ದೇವಸ್ಥಾನ ಮತ್ತು ಶಿವನಿಗೆ ಸಮರ್ಪಿತವಾದ ನನ್ನೇಶ್ವರ ದೇವಸ್ಥಾನವನ್ನು ಪ್ರದರ್ಶಿಸುತ್ತದೆ ಎಂದು ಹೇಮಂತ ನಿಂಬಾಳ್ಕರ್ ಅವರು ತಿಳಿಸಿದರು.

# ವಿದ್ಯಾರ್ಥಿಗಳು ಆತ್ಮ ವಿಶ್ವಾಸದಿಂದ

## ಅಸಾಧ್ಯವಾದದ್ದು ಸಾಧಿಸಲು ಸಾಧ್ಯ: ಈಶ್ವರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 23 : ಬೀದರ್ ತಾಲ್ಲುಕಿನ ಕೋಳಾರ ಕೆ ಗ್ರಾಮದ ಹೊರವಲಯುದಲ್ಕಿರುವ ಸಂಸ್ಕಾರ ಪಿಯು ಕಾಲೇಜ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಹಾಗೂ ಬನ್ಸಲ್ ಕ್ಲಾಸೆಸ್ ಸಂಯುಕ್ತಾಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿರುವ 2024–25 ಸಾಲಿನ ಜಿಲ್ಲೆಯ 10 ನೇ ತರಗತಿ ಫಲಿತಾಂಶ ಸುಧಾರಣೆ ಕಾರ್ಯಗಾರ ಉದ್ಘಾಟಿಸಿ ಹಾಗೂ ಶತಾಯುಷಿ ಭಿಮಣ್ಣಾ ಖಂಡ್ರೆ ಹಾಗು ಲಿಂಗೈಕ್ಯ ಬಸವರಾಜ ಪಾಟೀಲ್ ಹುಮನಬಾದ ಅವರ ಸ್ಮರಣಾರ್ಥ ವಾಗಿ ಸುರಬಿ ಎನ್ ಜಿ ಓ ದಿಂದ ಘೊಷಣೆ ಮಾಡಿರುವ ಗೋಲ್ಡನ್ ಕಾರ್ಡ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಬಿಡುಗಡೆ ಮಾಡಿದರು.

ನಂತರ ಅವರು ಮಾತನಾಡಿ

ಆತ್ಮವಿಶ್ವಾದಿಂದ ಅಸಾಧ್ಯವಾದದ್ದು ಸಾಧಿಸಲು ಸಾಧ್ಯವಿದೆ ಎಂದು ನುಡಿದರು.

ವಿದ್ಯಾರ್ಥಿಗಳು ಜಿವಮದಲ್ಲಿ ದೊಡ್ಡ ಗುರಿಯಿಟುಕೊಂಡು ಕಠಿಣ ಪರಿಶ್ರಮದೊಂದಿಗೆ ತಾವು ಕಂಡಿರುವ ಕನಸು ನನಸಾಗಿಸಿಕೊಳ್ಳಲು ಸಾಧ್ಯವಿದೆ ಎಂದರು.

ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಕಠಿಣ ಪರಿಶ್ರಮದ ಅಗತ್ಯವಿದೆ, ಕೇವಲ ವಿದ್ಯಾವಂತನಾದರೆ ಸಾಲದು ಜೊತೆಯಲ್ಲಿ ಉತ್ತಮ ಚಾರಿತ್ರೆ ಹೊಂದಿರಬೇಕು ಎಂದು ತಿಳಿಸಿದರು.

ನಮ್ಮಲಿ ಪ್ರತಿಭಾವಂತರ ಕೊರತೆಯಿಲ್ಲ. ಇವತ್ತು ನಮ್ಮಲಿ ಉನ್ನತ ವ್ಯಾಸಾಂಗ ಮಾಡಿ ವಿದೇಶಗಳಲ್ಲಿ ಉನ್ನತ ಸ್ಥಾನದಲ್ಲಿ ಕಾರ್ಯ ನಿರವಹಿಸುತಿದ್ದಾರೆ. ಒಂದು ವೇಳೆ ಮರಳಿ ಭಾರತಕ್ಕೆ ಬಂದರೆ ಆ ದೇಶಗಳ ಆಡಳಿತ ವ್ಯವಸ್ಥೆ ಕುಸಿಯುತದೆ ಎಂದರು.

ವಿದ್ಯಾರ್ಥಿ ಗಳ ಭವಿಷ್ಯ ರೂಪಿಸುವ ಮಹತ್ವ ಘಟಹೊಂದಿರುವ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ರೀತಿ ಸಾಧನೆ ಮಾಡಿ ಹೆಚ್ಚಿನ ಅಂಕಗಳು ಪಡೆದು ಉನ್ನತ ವಿದ್ಯಾಭಾಸ ಮಾಡುವಂತೆ ತಿಳಿಸಿದರು.

ಸುರಬಿ ಎನ್ ಜಿ.ಓ ದಿಂದ ಘೊಷಿಸಿರುವ ಗೊಲ್ಡ್ ಕಾರ್ಡ್ ಜಿಲ್ಲೆಯ ಸರಕಾರಿ ಅನುದಾನಿತ, ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಂದ ಯಾರು ಅತಿ ಹೆಚ್ಚು ಅಂಕಗಳನ್ನು ಹತ್ತನೆ ತರಗತಿಯಲ್ಲಿ ಪಡೆ–ಯುತ್ತಾರೆ ಅಂಥವರನು ಇದರ ಸದುಪಯೊಗಪಡೆದುಕೊಳ್ಳಲು ಅತ್ಯುತ್ತಮ ಅವಕಾಶವಿದೆ ಎಂದು ಹೆಳಿದರು.

ವಿಧಾನಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ್ ಮಾತನಾಡಿ ಹತ್ತನೆ ತರಗತಿಯ ಫಲಿತಾಂಸ ಸುಧಾರಣೆ ಕುರಿತು ಹಮ್ಮಿಕೊಂಡಿರುವ ಕಾರ್ಯಗಾರ ಬಹಳಷ್ಟು ಸಂತಸ ತಂದಿದೆ ಎಂದರು.

ವಿದ್ಯಾರ್ಥಿಗಳು ಯಾವದೆ ರೀತಿ ಧೈರ್ಯ ಕುಂದದೆ ಗುರಿಯಿಟುಕೊಂಡು ಪರಿಶ್ರಮ ಪಟ್ಟರೆ ತಾವು ಅಂದಿಕೊಂಡಿದು ಸಾಧಿಸಲು ಸಾಧ್ಯವಿದೆ ಎಂದು ನುಡಿದರು.

ಅನ್ನುತಿರಣವಾದರೆ ಧೈರ್ಯ ಗುಂದದೆ ವಿದ್ಯಾಭಾಸದಲ್ಲಿ ಮುಂದುವರೆಯಬೇಕು ಎಂದು ಸಲಹೆ ನೀಡಿದರು.

ಸಂಸ್ಥೆ ಯ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಅಮರ ಎರಳೊಕರ ಗೊಲ್ಡ್ ಕಾರ್ಡ್ ಪ್ರಯೊಜನ ,ಸೌಲಭ್ಯ ಪಡೆಯಬೇಕಾದ ಅರ್ಹತೆ ಕುರಿತು ಸವಿಸ್ತಾರವಾಗಿ ತಿಳಿಸಿದರು. ವೇದಿಕೆಯ ಮೇಲೆ ಸಂಸ್ಥೆ ಯ ಅಧ್ಯಕ್ಷರಾದ ಶ್ರೀಮತಿ ಅನುಪಮ ಎರೊಳಕರ್, ನಿರ್ದೇಶಕರಾದ ಪ್ರಕಾಶ ಟೊಣೆ, ಕು. ಕ್ಷಿತಿಜಾ ಎರಳೊಕರ್, ಆಡಳಿತ ಅಧಿಕಾರಿ ಶ್ರಿಮತಿ ಸರೋಜಾ ಅರಳಿ, ಅವಿನಾಶ ಎರಳೊಕರ, ಬೀದರ್ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ದೊಡ್ಡಿ. ಪ್ರಾಂಶುಪಾಲ ಮಲಿನಾಥ ಮಠಪತ್ತಿ ಸೇರಿದಂತೆ ಮತಿತರರು ಇದ್ದರು. ಕಾರ್ಯಗಾರದಲ್ಲಿ ಜಿಲ್ಲೆಯ ವಿವಿಧ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು. ಶಿಕ್ಷಕರು ಭಾಗವಹಿಸಿದರು.



ಹುಮ್ನಾಬಾದ ತಹಶಿಲ್ದಾರ ಶ್ರೀಮತಿ ಅಂಜುಮ್ ತಬಸುಮ ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ವತಿಯಿಂದ ಅತ್ಯುತ್ತಮ ಪ್ರಶಸ್ತಿಗೆ ಆಯ್ಕೆ ಹಿನ್ನೆಲೆ ಇಂದು ಗುರುವಾರ ಮುಂಜಾನೆ ತಹಶಿಲ್ದಾರರ ಕಚೇರಿಯಲ್ಲಿ ತಾಲ್ಲೂಕಾ ಸಾರ್ವಜನಿಕ ಆಸ್ಪತ್ರೆಯ ಆಡಳಿತ ಅಧಿಕಾರಿಗಳಾದ ಡಾ.ನಾಗನಾಥ ಹುಲಸೂಲರೇ ಹಾಗೂ ತಾಲ್ಲೂಕಾ ನೋಡಲ್ಲಾಧಿಕಾರಿಗಳಾದ ಡಾ.ಗೋವಿಂದ ಬಿ.ಎಚ್. ಹಾಗೂ ತಹಶಿಲ್ದಾರ ಸಿಬ್ಬಂದಿ ಶ್ರೀ ಭೀಮಶಾ ಮಂಗಲಗಿ ಸೇರಿದಂತೆ ತಹಶಿಲ್ದಾರ ಶ್ರೀಮತಿ ಅಂಜುಮ್ ತಬಸುಮ್ ಮೇಡಂ ಗೆ ಹೊ ಗುಚ್ಛ ನೀಡಿ ಶಾಲು ಸನ್ಮಾನ ಮಾಡಿ ಶುಭಾ ಹಾರೈಸಿ. ಶುಭಾಶಯಗಳು ತಿಳಿಸಿದರು..

## ಕಾಯಕ ಬಂಧುಗಳ ಪಾತ್ರ ಮುಖ್ಯ:ದೀಪಿಕಾ ನಾಯ್ಕರ್

ಮಲ್ಲಮ ನುಡಿ ವಾರ್ತೆ

ಹುಮನಾಬಾದ :ಜ.23: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮೀಣ ಭಾಗದಲ್ಲಿ ಕಾಯಕ ಬಂಧುಗಳ ಪಾತ್ರ ಬಹಳಷ್ಟು ಪ್ರಾಮುಖ್ಯತೆ ಪಡೆದಿದೆ ಎಂದು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ದೀಪಿಕಾ ಬಿ ನಾಯ್ಕರ ತಿಳಿಸಿದ್ದರು. ಪಟ್ಟಣದ ತಾಲೂಕು ಪಂಚಾಯತ ಸಭಾಂಗಣದಲ್ಲಿ ಗುರುವಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಗ್ರಾಮ ಸ್ವರಾಜ್ ಅಭಿಯಾನ ಹಾಗೂ ಅರಳು ಸಂಸ್ಥೆ, ಬೀದರ ಸಹಯೋಗದಲ್ಲಿ ನರೇಗಾ ಯೋಜನೆ ಕಾಯಕ ಬಂಧು ತರಬೇತಿ ಕಾರ್ಯಗ್ರಹದಲ್ಲಿ ಭಾಗಿಯಾಗಿ ಅವರು ಮಾತನಾಡಿ,



ಗ್ರಾಮೀಣ ಕುಟುಂಬದ ವಯಸ್ಕ ಸದಸ್ಯರಿಗೆ ಆರ್ಥಿಕ ವರ್ಷದಲ್ಲಿ ನೂರು ದಿನಗಳ ಕೂಲಿ ಉದ್ಯೋಗದ ಕಾನೂನು ಖಾತರಿ ಈ ಒಂದು ಯೋಜನೆ ನೀಡುತ್ತದೆ. ಹಾಗಾಗಿ ಇಲ್ಲಿ ಬಂದಿರುವಂತಹ ಎಲ್ಲಾ ಕಾಯಕ ಬಂಧುಗಳು ಯೋಜನೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ತಿಳಿದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ ಪರಿಣಾಮಕಾರಿಂುಾಗಿ ಯೋಜನೆಯನ್ನು ಅನುಷ್ಠಾನಗೊಳಿಸಿ. ಗ್ರಾಮಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಗ್ರಾಮದ ಬಡ ಕೂಲಿ ಕಾರ್ಮಿಕರು ಕೆಲಸಕ್ಕಾಗಿ ವಲಸೆ ಹೋಗುವುದನ್ನು ತಡೆಯುವುದರ ಜೊತೆಗೆ ಯೋಜನೆಯ ಬಗ್ಗೆ ವ್ಯಾಪಕವಾದ ಪ್ರಚಾರವನ್ನು ಮಾಡುವಂತ ಕೆಲಸ ನಾವು ನೀವು ಎಲ್ಲರೂ ಸೇರಿ ಮಾಡೋಣ ಎಂದು ತಿಳಿಸಿದರು. ತಾಲೂಕು ಪಂಚಾಯತ ಸಹಾಯಕ ನಿರ್ದೇಶಕರು ಜಗನ್ನಾಥ್, ಅಜೀಮ್ ಪ್ರೇಮ್ ಜಿ ಫೌಂಡೇಶನ್ ವಲಯ ವ್ಯವಸ್ಥಾಪಕರಾದ ಸಂಜೀವ್ ಕುಮಾರ್ ಕುಲಕರ್ಣಿ, ಅರಳು ಸಂಸ್ಥೆ ನಿರ್ದೇಶಕರು ಕೆ. ಟಿ ಮೇರಿಲ್, ಅರಳು ಸಂಸ್ಥೆಯ ಸಹಾಯಕ ನಿರ್ದೇಶಕಿ ಸುನಿತಾ, ಜಿಲ್ಲಾ ಮಾಸ್ಟರ್ ತರಬೇತಿದರಾದ ಪ್ರಕಾಶ್ ಡೋಳ್ಳೆ, ಗ್ರಾಮ ಕಾಯಕ ಮಿತ್ರ ಮಾಯ ಮತ್ತು ಚಂದನಹಳ್ಳಿ, ದುಬಲಗುಂಡಿ, ಸೇಡೋಳ ಗ್ರಾಮದ ಕಾಯಕ ಬಂಧುಗಳು ಭಾಗಿಯಾಗಿದ್ದರು.

# ಲಕ್ಷ ರೂ ಬೆಳೆ ಬಾಳುವ ಗಾಂಜಾ ವಿಲೇವಾರಿ

ಮಲ್ಲಮ ನುಡಿ ವಾರ್ತೆ

ರಾಯಚೂರು ಜ.23:1,26,150 ರೂ.ಬೆಲೆ ಬಾಳುವ 11 ಕೆಜಿ 027 ಗ್ರಾಂ ತೂಕದ ಮಾದಕ ವಸ್ತು ಗಾಂಜಾವನ್ನು, ರಾಯಚೂರು ನಗರದ ಯಕ್ಲಾಸಪುರ ರಸ್ತೆಯಲ್ಲಿರುವ ವೈದ್ಯಕೀಯ ತಾಜ್ಯ ವಿಲೇವಾರಿ ಘಟಕದಲ್ಲಿ ವಿಲೇವಾರಿ ಮಾಡಲಾಯಿತು.



ರಾಯಚೂರು ಜಿಲ್ಲೆಯ ಬಳಗಾನೂರು ಠಾಣೆ, ತುರ್ವಿಹಾಳ ಠಾಣೆ, ಯರಗೇರಾ ಠಾಣೆ, ಮಸ್ಕಿ ಠಾಣೆ, ರಾಯಚೂರು ಗ್ರಾಮೀಣ ಠಾಣೆ, ರಾಯಚೂರು ಸೆನ್ ಪೊಲೀಸ್ ಠಾಣೆ, ಸಿಂಧನೂರು ಗ್ರಾಮೀಣ ಠಾಣೆ, ಸದರ್ ಬಜಾರ್ ಠಾಣೆ, ಲಿಂಗಸುಗೂರು ಠಾಣೆಗಳಲ್ಲಿ 2023 ಹಾಗೂ 2024 ಸಾಲಿನಲ್ಲಿ ವರದಿಯಾದ ಒಟ್ಟು 13 ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾದ ಗಾಂಜಾವನ್ನು ಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷರ ಸೂಚನೆ ಮೇರೆಗೆ ಜನವರಿ 23ರಂದು ವಿಲೇವಾರಿ ಪ್ರಕ್ರಿಯೆ ನಡೆಯಿತು.

ಮಾದಕ ವಸ್ತು ವಿಲೇವಾರಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ ಪುಟ್ಟಮಾದಯ್ಯ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ–2 ಜಿ ಹರೀಶ್ ಹಾಗೂ ಸದಸ್ಯರಾದ ರಾಯಚೂರ ಉಪವಿಭಾಗದ ಡಿ.ಎಸ್.ಪಿ ಎಂ.ಜಿ.ಸತ್ಯನಾರಾಯಣ ರಾವ್, ಲಿಂಗಸುಗೂರು ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ದತ್ತಾತ್ರೇಯ. ಎನ್. ಕರ್ನಾಡ್, ರಿಮ್ ಆಕ್ಟ್ ರಾಯಚೂರದ ಅಧ್ಯಕ್ಷರಾದ ಡಾ.ಶ್ರೀಶೈಲೇಶ್ ಅಮರಖೇಡ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣದ ಪರಿಸರ ಅಧಿಕಾರಿಗಳಾದ ಶ್ರೀ ಪ್ರಕಾಶ, ಉಪ ಪರಿಸರ ಅಧಿಕಾರಿ ಶೈಲಜಾ.ವಿ.ಅಮೀನಗಡ, ರಿಮ್ ಆಕ್ಟ್‌ನ ಟೆಕ್ನಿಕಲ್ ಆಫೀಸರ್ ಜಯಕುಮಾರ, ಡಿ.ಸಿ.ಆರ್.ಬಿ ಘಟಕದ ಪೊಲೀಸ್ ಇನ್ಸಪೆಕ್ಟರ್ ತಿಮ್ಮಣ್ಣ ಎಸ್. ಅವರಿ ಹಾಜರಿದ್ದು, ಸರಕಾರಿ ಪಂಚರ ಸಮಕ್ಷಮದಲ್ಲಿ ವಿಲೇವಾರಿ ಮಾಡಲಾಯಿತು.

ಕರ್ನಾಟಕ ಸರ್ಕಾರ

**ಕಾರ್ಯಲಯ ಕಾರ್ಯನಿರ್ವಾಹಕ ಅಭಿಯಂತರರು,**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ**

ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–2/2024–25/1872 ದಿನಾಂಕ: 21.01.2025

**:: ಅಲ್ಪಾವಧಿ ಟೆಂಡರ್ ಪ್ರಕಟಣೆ ::**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಮಂಜೂರಾದ ಒಂದು ಕಾಮಗಾರಿಗೆ ರೂ. **4,21,471.00 (Rupees Four Lakhs Twenty One Thousand Four Hundred Seventy One Only)** ಮೊತ್ತದ, ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಕೆ.ಡಬ್ಲ್ಯೂ.–01ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು

**ಟೆಂಡರ್ ಪ್ರಕ್ರಿಯೆ ದಿನಾಂಕಗಳು:**

1) ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **22.01.2025 ರಿಂದ 30.01.2025ರ 16:00 ಗಂಟೆವರೆಗೆ,** 2) ಅರ್ಥಿಕ ಬಿಡ್ ತೆರೆಯುವ ದಿನಾಂಕ: **31.01.2025 ರಂದು 16:00 ಗಂಟೆ ನಂತರ.**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/364/ಕೆ.ಎಸ್.ಎಂ.ಸಿ.&ಎ/2024–25

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.